ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಡಿಸೆಂಬರ್ 27 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 249 | ಪುಟಗಳು: 12+IV
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4


ಕೆ.ಪಿ.ಸಿ.ಸಿ. ಸಂಯೋಜಕರು ಹಾಗೂ ಪ್ರಧಾನಕಾರ್ಯದರ್ಶಿ ಮೈಸೂರು ನಗರ ಕಾಂಗ್ರೆಸ್ ಸಮಿತಿ
ಶ್ರೀ ಸಿ.ಎಸ್. ರಘು ರವರಿಗೆ
ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು
2026 ಹೊಸ ವರ್ಷದ ಶುಭಾಶಯಗಳು
ದಿನಾಂಕ : 27-12-2025
ಶುಭಕೋರುವವರು : ಮೈಸೂರು ನಗರ ಕಾಂಗ್ರೆಸ್ ಸಮಿತಿ


ಹುಟ್ಟುಹಬ್ಬದ ಶುಭಾಶಯಗಳು
ಮೈಸೂರು ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರೂ, ಯುವ ನಾಯಕರಾದ
ರಾಕೇಶ್ ಪಾಪಣ್ಣ ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ತಾಯಿ ಚಾಮುಂಡೇಶ್ವರಿ ನಿಮಗೆ ರಾಜಕೀಯದಲ್ಲಿ ಉನ್ನತ
ಸ್ಥಾನಮಾನ ಮತ್ತು ಆಯುರಾರೋಗ್ಯ ನೀಡಲೆಂದು ಪ್ರಾರ್ಥಿಸುತ್ತೇವೆ.
ಶುಭ ಕೋರುವವರು
ಎಂ.ಎನ್.ಕಪನಿಗೌಡ


ಚಾಮುಂಡೇಶ್ವರಿ ವಿಧಾನಸಭಾಕ್ಷೇತ್ರದ ಕಾಂಗ್ರೆಸ್ ಮುಖಂಡರು
ಹಾಗೂ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ
ರಾಕೇಶ್ ಪಾಪಣ್ಣ ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಶುಭಕೋರುವವರು : ರಾಕೇಶ್ ಪಾಪಣ್ಣ ಸ್ನೇಹಿತರು
GIRI
9343706416

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 27 ಶನಿವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 249 | ಪುಟಗಳು: 12 + IV

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ದುರಂತ: ಸಾವಿನ ಸಂಖ್ಯೆ ಮೂರಕ್ಕೆ ಏರಿಕೆ

ನಂ.ಗೂಡಿನ ಮಂಜುಳಾ, ಬೆಂಗಳೂರಿನ ಲಕ್ಷ್ಮಿ ಸಾವು

ಮೈಸೂರು, ಡಿ.26(ಎಂಟಿವೈ)– ಮೈಸೂರು ಅರಮನೆಯ ಜಯಮಾರ್ತಾಂಡ ದ್ವಾರದ ಮುಂದೆ ಬಿ.ಎನ್.ರಸ್ತೆಯಲ್ಲಿ ಗುರುವಾರ ರಾತ್ರಿ ಸಂಭವಿಸಿದ ಹೀಲಿಯಂ ಸಿಲಿಂಡರ್ ಸ್ಫೋಟ ಪ್ರಕರಣದಲ್ಲಿ ಸಾವಿನ ಸಂಖ್ಯೆ ಮೂರಕ್ಕೆ ಏರಿದೆ. ಗಂಭೀರವಾಗಿ ಗಾಯಗೊಂಡಿದ್ದ ನಂಜನಗೂಡಿನ ಮಂಜುಳಾ ಮತ್ತು ಬೆಂಗಳೂರಿನ ಲಕ್ಷ್ಮಿ ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಸಂಜೆ ಮೃತಪಟ್ಟಿದ್ದಾರೆ.

ಗಂಭೀರವಾಗಿ ಗಾಯಗೊಂಡಿದ್ದ ನಂಜನಗೂಡಿನ ಚಾಮಲಾಪುರ ಬೀದಿ ನಿವಾಸಿ ಮಂಜುಳಾ(38) ಮತ್ತು ಬೆಂಗಳೂರಿನ ಲಕ್ಷ್ಮಿ ಅವರನ್ನು ಕೆ.ಆರ್.ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ತಜ್ಞ ವೈದ್ಯರ ತಂಡ ಇವರಿಬ್ಬರಿಗೂ ಚಿಕಿತ್ಸೆ ಮುಂದುವರೆಸಿತ್ತು. ಆದರೆ, ಶುಕ್ರವಾರ ಸಂಜೆ ಮಂಜುಳಾ ಅವರು ಕೊನೆಯುಸಿರೆಳೆದರೆ, ರಾತ್ರಿ ಲಕ್ಷ್ಮಿ ಮೃತಪಟ್ಟಿದ್ದಾರೆ. ಮೃತದೇಹಗಳನ್ನು ಮೈಸೂರು ಮೆಡಿಕಲ್ ಕಾಲೇಜಿನ ಶವಾಗಾರಕ್ಕೆ ಸಾಗಿಸಿದ್ದು, ನಾಳೆ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಗುತ್ತದೆ.

ಹೂವಿನ ವ್ಯಾಪಾರಿಯಾಗಿರುವ ಮಂಜುಳ ಅವಿವಾಹಿತೆಯಾಗಿದ್ದು, ಪೋಷಕರು ಹಾಗೂ ಸಹೋದರರೊಂದಿಗೆ ಜೀವನ ಸಾಗಿಸುತ್ತಿದ್ದರು. ಹೂವು ಖರೀದಿಸಿ ನಂಜನಗೂಡಿಗೆ ಹೋಗಲು ಹಾರ್ಡಿಂಗ್ ವೃತ್ತದ ಬಸ್ ನಿಲ್ದಾಣದ

■ 6ನೇ ಪುಟಕ್ಕೆ


ಮಂಜುಳಾ


ಲಕ್ಷ್ಮಿ

ಕಣ್ಣೆದುರೇ ನಡೆದ ಘಟನೆಯ ಭೀಕರತೆ ಬಿಚ್ಚಿಟ್ಟ ಬಾಲಕಿ

ಲಕ್ಷ್ಮೀ ಅವರ ಮಗಳು ಡಿಂಪಲ್ 5ನೇ ತರಗತಿ ಓದುತ್ತಿದ್ದು, 'ಮೈಸೂರು ಮಿತ್ರ'ನಲ್ಲಿ ದುರಂತದ ಭೀಕರತೆ ಬಿಚ್ಚಿಟ್ಟಳು. ತಾಯಿ ಲಕ್ಷ್ಮೀ, ಚಿಕ್ಕತ್ತೆ ರಂಜಿತಾ ಹಾಗೂ ಅವರ ಮಗ ನಿಹಾಲ್ ಅವರೊಂದಿಗೆ ಕ್ರಿಸ್‌ಮಸ್ ರಜೆ ಹಿನ್ನೆಲೆಯಲ್ಲಿ ಗುರುವಾರ ಬೆಳಗ್ಗೆ ಹಿಮವದ್ ಗೋಪಾಲ ಸ್ವಾಮಿ ಬೆಟ್ಟಕ್ಕೆ ಹೋಗಿದ್ದೆವು. ಅಲ್ಲಿಂದ ನಂಜನಗೂಡಿಗೆ ಬಂದು ಶ್ರೀಕಂಠೇಶ್ವರನ ದರ್ಶನ ಮಾಡಿ ಮೈಸೂರಿಗೆ ಬಂದಿದ್ದೆವು. ಇಲ್ಲಿಯೂ ಮತ್ತೊಂದು ದೇವಾಲಯಕ್ಕೆ ಹೋಗಿ, ಸಂಜೆ ದಸರಾ ವಸ್ತುಪ್ರದರ್ಶನಕ್ಕೆ ಹೋದೆವು. ಅಲ್ಲಿ ಒಂದೂವರೆ ಗಂಟೆ ಸುತ್ತಾಡಿ, ಕತ್ತಲಾದ ಕಾರಣ ಮುಂದಿನ ಸೋಮವಾರ ಅರಮನೆ ವೀಕ್ಷಿಸೋಣ ಎಂದು ನಿರ್ಧರಿಸಿ, ಬಸ್ ನಿಲ್ದಾಣಕ್ಕೆ ಹೋಗುವಾಗ ರಸ್ತೆ ಬದಿ ಬಲೂನು ಮಾರಾಟ ಮಾಡುವಲ್ಲಿ ಸಿಲಿಂಡರ್ ಸ್ಫೋಟಗೊಂಡಿತು. ಅಮ್ಮ (ಲಕ್ಷ್ಮೀ)ಹಾಗೂ ಚಿಕ್ಕತ್ತೆ(ರಂಜಿತ) ಕೆಳಗೆ ಬಿದ್ದರು.


ಡಿಂಪಲ್

■ 6ನೇ ಪುಟಕ್ಕೆ

ಸಾರ್ವಜನಿಕ ಸ್ಥಳಗಳಲ್ಲಿ ಅಪಾಯಕಾರಿ ರಸಾಯನಿಕವುಳ್ಳ ವಸ್ತು ಮಾರಾಟ ನಿಷಿದ್ಧ

- ಮೈಸೂರು ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಕಟ್ಟಾಜ್ಞೆ
- ಇದೊಂದು ಅನಿರೀಕ್ಷಿತ ಘಟನೆ; ಸಲೀಮ್ ಸೀಜನ್ ವ್ಯಾಪಾರಿ
- ಗಾಯಾಳುಗಳ ಚಿಕಿತ್ಸಾ ಖರ್ಚು–ವೆಚ್ಚಗಳನ್ನು ಸರ್ಕಾರವೇ ಭರಿಸಲಿದೆ


ಹೀಲಿಯಂ ಸಿಲಿಂಡರ್ ಸ್ಫೋಟದಲ್ಲಿ ಗಾಯಗೊಂಡು ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭೇಟಿ ಮಾಡಿ, ಆರೋಗ್ಯ ವಿಚಾರಿಸಿದರು.

ಮೈಸೂರು, ಡಿ.26(ಎಂಟಿವೈ)– ಮೈಸೂರು ಅರಮನೆ ಬಳಿ ಹೀಲಿಯಂ ಸಿಲಿಂಡರ್ ಸ್ಫೋಟ ಪ್ರಕರಣ ಅನಿರೀಕ್ಷಿತ ಮತ್ತು ಆತಂಕಕಾರಿ. ಮುಂಬರುವ ದಿನಗಳಲ್ಲಿ ಪ್ರವಾಸಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಅಪಾಯಕಾರಿ ರಾಸಾಯನಿಕ ವಸ್ತು ಬಳಸಿರುವ ಯಾವುದೇ ವಸ್ತುಗಳ ಮಾರಾಟಕ್ಕೆ ಕಡಿವಾಣ ಹಾಕಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ. ಅರಮನೆಯ ಜಯಮಾರ್ತಾಂಡ ದ್ವಾರದ ಮುಂಭಾಗದ ಬಿ.ಎನ್.ರಸ್ತೆಯಲ್ಲಿ ಕಳೆದ ರಾತ್ರಿ ಸಂಭವಿಸಿದ ಹೀಲಿಯಂ

■ 6ನೇ ಪುಟಕ್ಕೆ

ಮೈಸೂರು ಅರಮನೆ ದ್ವಾರದ ಬಳಿ ಸ್ಫೋಟ

ಸರ್ಕಾರಕ್ಕೆ ವರದಿಗೆ ಸೂಚನೆ

ಗೃಹ ಸಚಿವ ಡಾ. ಜಿ.ಪರಮೇಶ್ವರ್ ಸ್ಪಷ್ಟನೆ

ಬೆಂಗಳೂರು, ಡಿ.26(ಕೆಎಂಶಿ)– ಮೈಸೂರು ಅರಮನೆ ಜಯಮಾರ್ತಾಂಡ ದ್ವಾರದ ಮುಂಭಾಗದಲ್ಲಿ ಗುರುವಾರ ಸಂಭವಿಸಿದ ಹೀಲಿಯಂ ಸಿಲಿಂಡರ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.




ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಲೂನ್ ಮಾರುತ್ತಿದ್ದ ಲಕ್ನೋ ಮೂಲದ ವ್ಯಕ್ತಿ ಸ್ಫೋಟದಲ್ಲಿ ಮೃತಪಟ್ಟಿದ್ದು, ಅಪಾಯಕಾರಿ ವಸ್ತುಗಳ ಬಳಕೆಗೆ ಸಂಬಂಧಿಸಿದಂತೆ ಸಣ್ಣಪುಟ್ಟ ವಸ್ತುಗಳ ಮಾರಾಟಗಾರರ ಮೇಲೆ ಯಾವುದೇ ನಿಯಂತ್ರಣ ಇರುವುದಿಲ್ಲ. ಅರಮನೆ ವೀಕ್ಷಣೆಗೆ ಪ್ರವಾಸಿಗರು ಬರುವುದರಿಂದ ಹೆಚ್ಚಿನ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು. ಎಲ್ಲವನ್ನೂ ಸೂಕ್ಷ್ಮವಾಗಿ ಪರಿಶೀಲಿಸಬೇಕು ಎಂದರು.

ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದ್ದೇನೆ. ಬಲೂನ್ ವ್ಯಾಪಾರಿಗೆ ಹೀಲಿಯಂ ಸಿಲಿಂಡರ್ ಹೇಗೆ ಸಿಕ್ಕಿತು, ಎಲ್ಲಿ ಖರೀದಿಸಿದ್ದು ಎಂಬ ಕುರಿತು ತನಿಖೆ ನಡೆಸಿ ವರದಿ ನೀಡಲಿದ್ದಾರೆ ಎಂದರು. ಹೊಸ ವರ್ಷಾಚರಣೆಗೆ ಸಂಬಂಧಿಸಿದಂತೆ ಭಾನುವಾರ ಪೊಲೀಸ್ ಅಧಿಕಾರಿಗಳ ಸಭೆ ಕರೆದಿದ್ದು, ಚರ್ಚೆ ನಡೆಸಿ ಅಗತ್ಯ ಸೂಚನೆ ನೀಡಲಾಗುವುದು ಎಂದರು.

ಹೊಲೊಗ್ರಾಮ್ ಸ್ಟಿಕ್ಕರ್ ಸರಬರಾಜು ಸ್ಥಗಿತ

ಮಾಲಿನ್ಯ ಪರೀಕ್ಷಾ ಕೇಂದ್ರಗಳು ಬಂದ್

ಬೆಂಗಳೂರು, ಡಿ.26– ಸಾರಿಗೆ ಇಲಾಖೆಯು ಸುಮಾರು ಒಂದು ತಿಂಗಳಿನಿಂದ ಹೊಲೊಗ್ರಾಮ್ ಸ್ಟಿಕ್ಕರ್‌ಗಳನ್ನು ಪೂರೈಸದೇ ಇರುವುದರಿಂದ ರಾಜ್ಯಾದ್ಯಂತ 400ಕ್ಕೂ ಹೆಚ್ಚು ಮಾಲಿನ್ಯ ಪರೀಕ್ಷಾ ಕೇಂದ್ರಗಳು ಮುಚ್ಚಲ್ಪಟ್ಟಿವೆ.



ಹೀಗಾಗಿ ವಾಹನ ಮಾಲಿನ್ಯ ಪರಿಶೀಲನೆ ವ್ಯವಸ್ಥೆಯು ಬಹುತೇಕ ಕುಸಿದಿದೆ. ಮುಚ್ಚಿದ ಕೇಂದ್ರಗಳಲ್ಲಿ ಹೆಚ್ಚಿನವು ಪೆಟ್ರೋಲ್ ಬಂಕ್‌ಗಳಿಗೆ ಸಂಬಂಧಿಸಿವೆ. ಇದು ದಿನನಿತ್ಯದ ಮಾಲಿನ್ಯ ಹೊರಸೂಸುವಿಕೆ ಪರೀಕ್ಷೆಯನ್ನು ದುರ್ಬಲಗೊಳಿಸುತ್ತದೆ ಸಾವಿರಾರು ವಾಹನ ಚಾಲಕರು ಮಾಲಿನ್ಯ ಪ್ರಮಾಣಪತ್ರಗಳಿಲ್ಲದೆ ತಪಾಸಣೆ ವೇಳೆ ದಂಡ ಪಾವತಿಸಬೇಕಾಗುತ್ತದೆ.

ಕಳೆದ ಎಂಟು ದಿನಗಳಿಂದ ನಾವು ಮಳಿಗೆಗಳನ್ನು ಮುಚ್ಚಬೇಕಾಯಿತು ಎಂದು ಕರ್ನಾಟಕ ರಾಜ್ಯ ಪೆಟ್ರೋಲಿಯಂ ಡೀಲರ್‌ಗಳ ಸಂಘದ ಮಾಜಿ ಅಧ್ಯಕ್ಷ ಬಿ.ಆರ್. ರವೀಂದ್ರನಾಥ್ ಹೇಳಿದ್ದಾರೆ. ರಾಜ್ಯದಲ್ಲಿರುವ 2600 ಪಿಯುಸಿ ಕೇಂದ್ರಗಳಲ್ಲಿ, ಹೆಚ್ಚಿನವು ಈಗ ಕಾರ್ಯನಿರ್ವಹಿಸುತ್ತಿಲ್ಲ. ಹೊಲೊಗ್ರಾಮ್ ಸ್ಟಿಕ್ಕರ್‌ಗಳಿಲ್ಲದೆ, ಪ್ರಮಾಣಪತ್ರಗಳನ್ನು ನೀಡಲಾಗದು ಎಂದಿದ್ದಾರೆ.

ಭದ್ರತಾ ಹೊಲೊಗ್ರಾಮ್‌ಗಳ ಖರೀದಿ ಮತ್ತು ವಿತರಣೆಯಲ್ಲಿನ ವಿಳಂಬದಿಂದಾಗಿ ಬಿಕ್ಕಟ್ಟು

■ 6ನೇ ಪುಟಕ್ಕೆ

ಅಧಿಕಾರ ಹಸ್ತಾಂತರ ವಿಚಾರ

ಸಹೋದರನಿಗೆ ಮಾಜಿ ಸಂಸದ ಡಿ.ಕೆ. ಸುರೇಶ್ ಸ್ಫೂರ್ತಿ ಸಂದೇಶ



ಬೆಂಗಳೂರು, ಡಿ.26(ಕೆಎಂಶಿ)– ಗುರಿಯನ್ನು ಬೇಗ ತಲುಪಬೇಕು ಎನ್ನುವವರು ದಾರಿಯಲ್ಲಿ ವಿಶ್ರಮಿಸುತ್ತಾ ಕುಳಿತುಕೊಳ್ಳಬೇಡಿ ಎಂದು ತಮ್ಮ ಸಹೋದರ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮಾಜಿ ಸಂಸದ ಡಿ.ಕೆ.ಸುರೇಶ್ ಕಿವಿಮಾತು ಹೇಳಿದಂತಿದೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಕುರಿತು ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಭಾರೀ ಚರ್ಚೆಗೆ ಎಡೆ ಮಾಡಿರುವ ಬೆನ್ನಲ್ಲೇ ಸುರೇಶ್ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಟ್ವೀಟ್ ಮಾಡಿ, ಹಿರಿಯರ ನುಡಿಯನ್ನು ಸಂದೇಶವಾಗಿ ಹಾಕಿದ್ದಾರೆ. ಅಧಿಕಾರ ಹಂಚಿಕೆ ಸೂತ್ರ ಜಾರಿಗೆ ತನ್ನಿ ಎಂಬುದಾಗಿ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಸೇರಿದಂತೆ ಕೆಲವರನ್ನು

■ 6ನೇ ಪುಟಕ್ಕೆ

ಬಂಡೀಪುರ, ನಾಗರಹೊಳೆಯಲ್ಲಿ ಸಫಾರಿ ಬಂದ್

ಜಾಗತಿಕ ಮಟ್ಟದಲ್ಲಿ ಕರ್ನಾಟಕ ಪ್ರವಾಸೋದ್ಯಮಕ್ಕೆ ಹಿನ್ನಡೆ

- ಪ್ರವಾಸೋದ್ಯಮ ಸಚಿವರಿಗೆ ಕೆಇಟಿಆರ್‌ಎ ಪತ್ರ
- ಕೋವಿಡ್–19 ಅವಧಿಯ ಪರಿಸ್ಥಿತಿ ಉಲ್ಲೇಖ
- ಆರ್ಥಿಕ, ಉದ್ಯೋಗಾವಕಾಶ ನಷ್ಟ ಮನವರಿಕೆ

ಬೆಂಗಳೂರು, ಡಿ. 26– ಬಂಡೀಪುರ ಮತ್ತು ನಾಗರಹೊಳೆಗಳಲ್ಲಿ ಸಫಾರಿಗಳ ಪುನರಾರಂಭಕ್ಕೆ ಒತ್ತಾಯಿಸಿ ಕರ್ನಾಟಕ ಇಕೋ–ಟೂರಿಸಂ ರೆಸಾರ್ಟ್ಸ್ ಅಸೋಸಿಯೇಷನ್ (ಕೆಇಟಿಆರ್‌ಎ) ಪ್ರವಾಸೋದ್ಯಮ ಸಚಿವರಿಗೆ ಪತ್ರ ಬರೆದಿದೆ. ಸಫಾರಿ ಸ್ಥಗಿತವಾಗಿರುವುದರಿಂದ ಉಂಟಾಗುತ್ತಿರುವ ಆರ್ಥಿಕ ಹಾನಿ ಮತ್ತು ಉದ್ಯೋಗ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದು, ಅಗತ್ಯವಿರುವ ಹೆಚ್ಚುವರಿ ಸುರಕ್ಷತಾ ಕ್ರಮಗಳೊಂದಿಗೆ ಸಫಾರಿಯನ್ನು ಮತ್ತೆ ಆರಂಭಿಸಬೇಕೆಂದು ಆಗ್ರಹಿಸಿದೆ.

ಮನವಿ ಪತ್ರದಲ್ಲಿನ ಉಲ್ಲೇಖ: ನವೆಂಬರ್‌ನಿಂದ ರಾಜ್ಯದಲ್ಲಿ ವನ್ಯಜೀವಿ ಸಫಾರಿಗಳನ್ನು ಸ್ಥಗಿತಗೊಳಿಸಿರುವುದರಿಂದ ಹಲವು ರೀತಿಯ ಸಮಸ್ಯೆಗಳು ಉದ್ಭವಿಸಿವೆ. ಡಿಸೆಂಬರ್‌ನಿಂದ ಫೆಬ್ರವರಿವರೆಗೆ ಇರುವ ಪ್ರವಾಸೋದ್ಯಮದ ಉಚ್ಚ ಕಾಲಾವಧಿಯಲ್ಲಿ ಈ ಕ್ಷೇತ್ರವು ಕೋವಿಡ್–19 ಸಂದರ್ಭ ಉಂಟಾಗಿದ್ದ ಸ್ಥಿತಿಯನ್ನೇ ಅನುಭವಿಸುತ್ತಿದೆ. ಇದು ಕ್ಷೇತ್ರದ ಅಸ್ತಿತ್ವವನ್ನೇ ಅಪಾಯಕ್ಕೆ ತಳ್ಳಿದೆ. ಪ್ರಸ್ತುತ ಸಫಾರಿ ಸ್ಥಗಿತಕ್ಕೆ ನೀಡಲಾಗುತ್ತಿರುವ ಕಾರಣಗಳು ವೈಜ್ಞಾನಿಕ ಅಥವಾ ಪ್ರಾಯೋಗಿಕವಾಗಿಲ್ಲ. ಸಫಾರಿಗೂ ಹುಲಿಗಳ ದಾಳಿಗೆ ಹಲವರು ಬಲಿಯಾಗಿರುವುದಕ್ಕೂ ಸಂಬಂಧ ಇಲ್ಲ. ಘಟನಾ ಸ್ಥಳಗಳಿಂದ ನಾಗರಹೊಳೆ ಸಫಾರಿ ವಲಯ ಪ್ರತ್ಯೇಕವಾಗಿದ್ದರೆ, ಬಂಡೀಪುರ ಸುಮಾರು 50–100 ಕಿ.ಮೀ. ದೂರದಲ್ಲಿದೆ.


ಫೈಲ್ ಚಿತ್ರ

ಸಫಾರಿಗಳ ಸ್ಥಗಿತದಿಂದಾಗಿ ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳ ದೈನಂದಿನ ಆದಾಯದಲ್ಲಿ ಭಾರೀ ನಷ್ಟ ಉಂಟಾಗಿದೆ. ಜಂಗಲ್ ಲಾಡ್ಜಸ್

■ 6ನೇ ಪುಟಕ್ಕೆ

ಶೀಘ್ರ ನಾಯಕತ್ವ ಗೊಂದಲ ನಿವಾರಣೆ

ಬೆಂಗಳೂರು, ಡಿ.26(ಕೆಎಂಶಿ)– ಕರ್ನಾಟಕ ಕಾಂಗ್ರೆಸ್‌ನಲ್ಲಿನ ನಾಯಕತ್ವ ಗೊಂದಲ ಶೀಘ್ರದಲ್ಲೇ ಬಗೆಹರಿಯುತ್ತದೆ. ಈ ಬಗ್ಗೆ ಮಾಧ್ಯಮದವರು ಚಿಂತಿಸುವುದು ಬೇಡ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇಂದಿಲ್ಲಿ ತಿಳಿಸಿದ್ದಾರೆ.



ಕೆಲವು ದಿನಗಳಿಂದ ನಗರದಲ್ಲೇ ವಾಸ್ತವ ಹೂಡಿದ್ದ ಖರ್ಗೆ, ದೆಹಲಿಗೆ ತೆರಳುವುದಕ್ಕೂ ಮುನ್ನ ಸುದ್ದಿಗಾರರಿಗೆ ಚುಟುಕಾಗಿ ಇಷ್ಟನ್ನು ಹೇಳಿ, ಮತ್ತೆ ಯಾವುದೇ ವಿಷಯ ಪ್ರಸ್ತಾಪಿಸಲಿಲ್ಲ. ಇದೇ ಸಂದರ್ಭದಲ್ಲಿ ಮಾತನಾಡಿದ ಮಾಹಿತಿ ತಂತ್ರಜ್ಞಾನ ಖಾತೆ ಸಚಿವ ಪ್ರಿಯಾಂಕ್ ಖರ್ಗೆ, ಕಾಂಗ್ರೆಸ್‌ನಲ್ಲಿ ಅವರ ದುಡುಮೆಗೆ ತಕ್ಕ ಪ್ರತಿಫಲ ದೊರೆಯುತ್ತದೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ಪ್ರತಿಕ್ರಿಯಿಸಿ, ಅವರು ಹಿರಿಯ ನಾಯಕರು, ಆರಂಭದ ದಿನದಿಂದಲೂ ಪಕ್ಷ ಸಂಘಟನೆಯಲ್ಲೇ ತೊಡಗಿಸಿಕೊಂಡಿದ್ದಾರೆ. ಅವರ ಶ್ರಮದ ಜೊತೆಗೆ ಲಕ್ಷಾಂತರ ಕಾರ್ಯಕರ್ತರು ಹೋರಾಟ ನಡೆಸಿದ ಫಲವಾಗಿ ನಮಗೆ ಅಧಿಕಾರ ದೊರೆತಿದೆ. ಯಾರು ಎಷ್ಟು ಕೆಲಸ ಮಾಡಿದ್ದಾರೋ ಅವರ ದುಡಿಮೆಗೆ ಪ್ರತಿಫಲ ದೊರೆತೇ ದೊರೆಯುತ್ತದೆ.

ಲೋಕಸಭೆ, ವಿಧಾನಸಭೆಗಷ್ಟೇ ಬಿಜೆಪಿ–ಜೆಡಿಎಸ್ ಮೈತ್ರಿ

■ ಸ್ಥಳೀಯ ಸಂಸ್ಥೆಗಳ ಚುನಾವಣೆಗಿಲ್ಲ: ಹೆಚ್‌ಡಿಡಿ ■ ಅಹಿಂದ ನಾಯಕರಾದ ನೀವು ಕ್ಷೇತ್ರಗಳ ಏಕೆ ತಡಕಾಡಿದ್ರಿ; ಸಿದ್ದರಾಮಯ್ಯರಿಗೆ ಗೌಡರ ಟಾಂಗ್

ಬೆಂಗಳೂರು: ಕರ್ನಾಟಕದಲ್ಲಿ ಲೋಕಸಭೆ, ವಿಧಾನಸಭೆಗಷ್ಟೇ ಬಿಜೆಪಿ–ಜೆಡಿಎಸ್ ಮೈತ್ರಿ, ಸ್ಥಳೀಯ ಸಂಸ್ಥೆಗಳ ಚುನಾವಣೆಗಿಲ್ಲ ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಸ್ಪಷ್ಟಪಡಿಸಿದ್ದಾರೆ.



ಜೆಡಿಎಸ್ ಭವನದಲ್ಲಿ ಮಾತನಾಡಿದ ಅವರು, ಹಾಸನದಲ್ಲಿ ಜನವರಿ 23 ರಂದು, ಬೆಂಗಳೂರಿನಲ್ಲಿ ಜನವರಿ 18 ರಂದು ಸಭೆ ಮಾಡುತ್ತಿದ್ದೇವೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ನಾವು ಪ್ರತ್ಯೇಕವಾಗಿ ಹೋರಾಟ ಮಾಡುತ್ತೇವೆ. ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಮಾತ್ರವೇ ಎನ್‌ಡಿಎ ಜೊತೆಗೆ ಇರುತ್ತೇವೆ. ವಿಧಾನ ಪರಿಷತ್‌ನ 4 ಸ್ಥಾನಗಳ ಚುನಾವಣೆಯಲ್ಲಿ ಒಂದು ಸ್ಥಾನ ಜೆಡಿಎಸ್‌ಗೆ 3 ಸ್ಥಾನ ಬಿಜೆಪಿಗೆ ನೀಡುವ ಬಗ್ಗೆ ಪ್ರಾಥಮಿಕ ಚರ್ಚೆ ಆಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಮುಂಬರುವ ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಮೈತ್ರಿ ಹಾಗೂ ಸೀಟು ಹೊಂದಾಣಿಕೆ ಸಂಬಂಧ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಮಾತುಕತೆ ನಡೆಸಿ, ನಿರ್ಧರಿಸಲಾಗುವುದು.

ಮೈತ್ರಿಯ ವಿಚಾರದಲ್ಲಿ ನಮ್ಮಲ್ಲಿ ಯಾವುದೇ ಗೊಂದಲವಿಲ್ಲ. ಆದರೆ ಸ್ಥಳೀಯ ಮಟ್ಟದಲ್ಲಿ ಪಕ್ಷದ ಕಾರ್ಯಕರ್ತರಿಗೆ ಮನ್ನಣೆ ನೀಡಬೇಕಾಗಿದೆ. ಜೊತೆಗೆ ಪಕ್ಷದ ಅಸ್ತಿತ್ವವನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಈ ನಿರ್ಧಾರಕ್ಕೆ ಬರಲಾಗಿದೆಯೇ ಹೊರತು ಬೇರೆ ಯಾವುದೇ ಕಾರಣವಿಲ್ಲ ಎಂದು ದೇವೇಗೌಡರು ಸ್ಪಷ್ಟಪಡಿಸಿದರು.

ಎರಡನೇ ಮಗನನ್ನ ರಾಜಕೀಯಕ್ಕೆ ತನ್ನಿ ಎಂದಿದ್ದೆ: ಮೈಸೂರಿನಲ್ಲಿ ಜ.25ಕ್ಕೆ ಅಹಿಂದ ಸಮಾವೇಶ ನಡೆಸುವ ವಿಚಾರಕ್ಕೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ತಿರುಗೇಟು ನೀಡಿದ್ದಾರೆ.

ಸಿದ್ದರಾಮಯ್ಯರನ್ನು ಗುರುತಿಸಿದ್ದು ನಾನು ಅಂತ ಹೇಳಲ್ಲ, ಅವರೇ ಹೇಳಲಿ. ನನ್ನ ಬಗ್ಗೆ ಕಠಿಣವಾಗಿ ಏನು ಬೇಕಾದರೂ ಅವರು ಮಾತಾಡಲಿ. ಅವರ ಮಗ ಸಾವನ್ನಪ್ಪಿದಾಗ ಅವರ ಮನೆಗೆ ಹೋಗಿದ್ದೆ. ಎರಡನೇ ಮಗನ ರಾಜಕೀಯಕ್ಕೆ ತನ್ನಿ ಅಂತ ಹೇಳಿದ್ದೆ. ಈ ಮೊದಲು ಚಾಮುಂಡೇಶ್ವರಿ ಕ್ಷೇತ್ರದೊಂದಿಗೆ ಅವರು ಬಾದಾಮಿಯಲ್ಲಿ ನಿಂತರು. ಕಳೆದ ವಿಧಾನಸಭಾ ಚುನಾವಣೆ ವೇಳೆ ಕೋಲಾರ, ಮೈಸೂರು, ಬಾದಾಮಿ ಅಂತ ಬಾರೀ ಚರ್ಚೆ ಆಯ್ತು. ನೀವು ಅಹಿಂದ ನಾಯಕರು. ಆದರೂ ಸುರಕ್ಷಿತ ಕ್ಷೇತ್ರಕ್ಕೆ ಹುಡುಕಾಟ ಮಾಡಿದ್ರಿ ಏಕೆ ಎಂದು ದೇವೇಗೌಡರು ಟಾಂಗ್ ಕೊಟ್ಟರು. ಎಷ್ಟು ಚರ್ಚೆ ಆಯ್ತು. ನೀವು ಅಹಿಂದ ಲೀಡರ್ ಆಗಿದ್ದರೆ ಎಲ್ಲಿ ಬೇಕಾದರೂ ನಿಲ್ಲಬಹುದಿತ್ತು. ನಿಮ್ಮ ಮಗ ಬಿಟ್ಟ ಕ್ಷೇತ್ರದಲ್ಲೇ ನೀವು ಸ್ಪರ್ಧೆ ಮಾಡಿದ್ರಿ. ಇದು ಅಹಿಂದಾ... ಎಂದು ಹೆಚ್‌ಡಿಡಿ ವ್ಯಂಗ್ಯವಾಡಿದರು.

ದೇವೇಗೌಡ ಮೂಲೆಲಿ ಕೂತ ಅಂತ ಲೆಕ್ಕಾ ಹಾಕಿದ್ದೀರಿ. ಗಟ್ಟಿ ಮನಸ್ಸು ಮಾಡಿದ್ದೇನೆ. ನನ್ನಲ್ಲಿನ ಹೋರಾಟ ಇನ್ನೂ ನಿಂತಿಲ್ಲ ಎಂದು ಹಳೆಯದನ್ನ ಕೆದಕಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗೌಡರು ಟಕ್ಕರ್ ಕೊಟ್ಟರು.

ಸ್ವಂತ ಬಲದಿಂದ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುತ್ತದೆ

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿರುಗೇಟು

2028ಕ್ಕೆ ಮುನ್ನವೇ ವಿಧಾನಸಭಾ ಚುನಾವಣೆ ಭವಿಷ್ಯ; ಬಿಜೆಪಿಗೆ 130–140 ಸೀಟ್ ಲಭ್ಯತೆ ವಿಶ್ವಾಸ

ಬೆಂಗಳೂರು, ಡಿ.26– ಕರ್ನಾಟಕದಲ್ಲಿ ಲೋಕಸಭೆ, ವಿಧಾನಸಭೆಗಷ್ಟೇ ಬಿಜೆಪಿ–ಜೆಡಿಎಸ್ ಮೈತ್ರಿ, ಸ್ಥಳೀಯ ಸಂಸ್ಥೆಗಳ ಚುನಾವಣೆಗಿಲ್ಲ ಎಂಬ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಹೇಳಿಕೆಯ ಹಿನ್ನೆಲೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸ್ವಂತ ಬಲದೊಂದಿಗೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ತಿರುಗೇಟು ನೀಡಿದ್ದಾರೆ.



ಬಿಜೆಪಿ ಕಚೇರಿಯಲ್ಲಿ ಮಾತನಾಡಿದ ಬಿ.ವೈ. ವಿಜಯೇಂದ್ರ, ಕಾಂಗ್ರೆಸ್ ಒಳಜಗಳ ನೋಡಿದರೆ 2028ಕ್ಕೂ ಮುನ್ನವೇ ವಿಧಾನಸಭಾ ಚುನಾವಣೆ ಬರಬಹುದು. ಬಿಜೆಪಿಯನ್ನು ಸ್ವಂತ ಶಕ್ತಿಯ ಮೇಲೆ ಅಧಿಕಾರಕ್ಕೆ ತರಲು ಕಾರ್ಯಕರ್ತರು ಸಂಕಲ್ಪ ಮಾಡಬೇಕಾಗಿದೆ. ರಾಜ್ಯಾಧ್ಯಕ್ಷನಾಗಿ ರಾಜ್ಯ ಪ್ರವಾಸ ಮಾಡಿ, ನಾಡಿಮಿಡಿತ ಅರ್ಥ ಮಾಡಿಕೊಂಡಿದ್ದೇನೆ. ಮುಂದೆ 130–140 ಸ್ಥಾನಗಳೊಂದಿಗೆ ಬಿಜೆಪಿ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರಲಿದೆ ಎಂದು ಹೇಳುವ ಮೂಲಕ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್‌ನೊಂದಿಗಿನ ಮೈತ್ರಿಯನ್ನ ತಳ್ಳಿಹಾಕಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗ್ರಾಮಸ್ಥರು : ಆ ರೌಡಿಯ ಕಾರಣದಿಂದ ನಾವು ಯಾರು ನೆಮ್ಮದಿಯಾಗಿರೋದಕ್ಕೆ ಆಗ್ತಿಲ್ಲ. ಅವನು ನಮ್ಮ ಹಳ್ಳಿಗೆ ಬರಬಾರದು ಅಂದ್ರೆ ಏನು ಮಾಡಬೇಕು?

ಗುಂಡ : ಅವನನ್ನು ಎಂಎಲ್ಎ ಮಾಡಿಬಿಡಿ. ಆಮೇಲೆ ನೀವು ಕರೆದರೂ ಅವನು ನಿಮ್ಮ ಹಳ್ಳಿ ಕಡೆ ಬರೋದಿಲ್ಲ !!!

ಮೈಸೂರು ಮಿತ್ರ

ಶನಿವಾರ, 27 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಚುಚ್ಚುವುದು ಸೂಜಿಯ ಗುಣವಾದರೂ ದಾರದ ಗೆಳೆತನ ಮಾಡಿದ ಮೇಲೆ ಸೂಜಿಯ ಗುಣ ಬದಲಾಗಿ ಎಲ್ಲವನ್ನೂ ಜೋಡಿಸಲು ಮುಂದಾಗುತ್ತದೆ. – ಶ್ರೀ ಸಿದ್ದೇಶ್ವರ ಸ್ವಾಮೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು

ನಿಮ್ಮ ಪತ್ರಗಳು

ಬಸ್ ನಿಲ್ದಾಣದ ಬಳಿ ಅಡ್ಡಾದಿಡ್ಡಿ ಆಟೋ ನಿಲುಗಡೆ, ಪ್ರಯಾಣಿಕರಿಗೆ ತೊಂದರೆ



ಮಾನ್ಯರೇ,

ಮೈಸೂರಿನ ಸಬ್ ಅರ್ಬನ್ ಬಸ್ ನಿಲ್ದಾಣದ ಪ್ರವೇಶ ಹಾಗೂ ನಿರ್ಗಮನ ದ್ವಾರಗಳ ಬಳಿ ಆಟೋಗಳನ್ನು ಅಡ್ಡಾದಿಡ್ಡಿಯಾಗಿ ನಿಲುಗಡೆ ಮಾಡುವುದರಿಂದ ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ. ಬಸ್‌ನಿಂದ ಪ್ರಯಾಣಿಕರು ಇಳಿದು ಹೊರ ಬರುತ್ತಿದ್ದಂತೆ ಕೆಲವು ಆಟೋ ಚಾಲಕರು ಎಲ್ಲಿಗೆ ಹೋಗಬೇಕು ಎಂದು ಪ್ರಶ್ನಿಸುತ್ತಾರೆ. ಅಲ್ಲದೇ ಊರಿಗೆ ಹೊಸಬರು ಎಂದು ತಿಳಿದರಂತೂ ಕನಿಷ್ಠ ದೂರಕ್ಕೂ ದುಬಾರಿ ಹಣ ಕೇಳುತ್ತಾರೆ.

ಪಕ್ಕದಲ್ಲೇ ಪ್ರಿ-ಪೇಯ್ಡ್ ಆಟೋ ಕೌಂಟರ್ ಇದೇ ಅಲ್ಲಿ ಹಣ ಕಡಿಮೆ ಇರುತ್ತದೆ. ಆದರೆ ಹೊರಗೆ ಇರುವ ಆಟೋದವರಿಗೆ ಮಾತನಾಡಿಸಿದರೆ ಅದೇ ಸ್ಥಳಕ್ಕೆ ದುಬಾರಿ ಬೆಲೆ ಕೇಳುತ್ತಾರೆ. ಆದ್ದರಿಂದ ಬಸ್ ನಿಲ್ದಾಣದ ಸುತ್ತಮುತ್ತಲಿನ ಮುಖ್ಯ ರಸ್ತೆಯನ್ನು 'ನೋ ಪಾರ್ಕಿಂಗ್' ವಲಯವೆಂದು ಘೋಷಿಸಿ, ನಿಯಮ ಉಲ್ಲಂಘಿಸುವ ಆಟೋಚಾಲಕರಿಗೆ ದಂಡ ವಿಧಿಸಬೇಕು, ಪೀಕ್ ಅವರ್‌ಗಳಲ್ಲಿ ಸಂಚಾರಿ ಪೊಲೀಸರನ್ನು ನಿಯೋಜಿಸಿ, ಆಟೋಗಳು ಅಸ್ತವ್ಯಸ್ತವಾಗಿ ನಿಲ್ಲದಂತೆ ಮತ್ತು ಟ್ರಾಫಿಕ್ ಜಾಮ್ ಆಗದಂತೆ ನಿಯಂತ್ರಿಸಬೇಕು. ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಎಚ್ಚೆತ್ತು ಈ ಸಂಚಾರ ದಟ್ಟಣೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕಿದೆ. ಅಸ್ತವ್ಯಸ್ತವಾಗಿರುವ ಈ ವ್ಯವಸ್ಥೆಯನ್ನು ಸರಿಪಡಿಸಿದರೆ ಮಾತ್ರ ಸಬ್ ಅರ್ಬನ್ ಬಸ್ ನಿಲ್ದಾಣಕ್ಕೆ ಬರುವ ಸಾವಿರಾರು ಜನರಿಗೆ ನೆಮ್ಮದಿಯ ಪ್ರಯಾಣ ಸಿಗಲು ಸಾಧ್ಯ. ಹಾಗೂ ಪ್ರಯಾಣಿಕರಿಂದ ಹೆಚ್ಚು ಹಣ ವಸೂಲಿ ಮಾಡುವ ಆಟೋ ಚಾಲಕರ ವಿರುದ್ಧ ಕ್ರಮ ಕೈಗೊಳ್ಳುವುದು ಅಗತ್ಯ.

–ಗೋವಿತ್ ಕಿರಣ್, ರಾಜೇಂದ್ರ ನಗರ, ಮೈಸೂರು.

ಮರ್ಯಾದೆಗೇಡು ಹತ್ಯೆಯಲ್ಲಿ ಜಾತಿ ಜೀವಂತಿಕೆಯ ಜಾಡು

ಮಾನ್ಯರೆ,

ಜಾತಿ ವ್ಯವಸ್ಥೆಯು ಈ ನೆಲೆಯಲ್ಲಿ ಹುಟ್ಟಿದಾಗಿನಿಂದ ಈಗಿನ ಕಾಲಘಟ್ಟದವರೆಗೂ ಅಸಮಾನತೆಯನ್ನು ಸೃಷ್ಟಿ ಮಾಡಿ, ಮನುಷ್ಯತ್ವವನ್ನು ಮನುಷ್ಯರಿಂದಲೇ ಕೊಲ್ಲಿಸಿ, ಮಾನವೀಯ ಮೌಲ್ಯಗಳನ್ನು ನಾಶ ಮಾಡಿದೆ. ಮಾತ್ರವಲ್ಲ, ಮನುಷ್ಯ-ಮನುಷ್ಯರ ನಡುವೆ ಮೇಲು ಕೀಳು ಎಂಬ ತಾರತಮ್ಯದ ಜೋಪಡಿಯಲ್ಲಿ ಕೂರಿಸಿ ಸಾಮಾಜಿಕ ಶೋಷಣೆಗಳ ಸರಮಾಲೆಗಳನ್ನು ಕಟ್ಟುವುದರ ಮುಖಾಂತರ ನೀಚ ಕ್ರೌರ್ಯ ಪರಂಪರೆಯನ್ನು ಪಾಲಿಸಿರುವ ಈ ಜಾತಿ ಈಗಲೂ ಸಹ ಜೀವಂತವಿದೆ ಎನ್ನುವುದಕ್ಕೆ ಹುಬ್ಬಳ್ಳಿ ಜಿಲ್ಲೆಯಲ್ಲಿ ಗರ್ಭಿಣಿ ಹೆಣ್ಣು ಮಗಳ ಹತ್ಯೆಯಾಗಿರುವ ಘಟನೆಯೇ ಸಾಕ್ಷಿ. ಬೇರೆ ಜಾತಿಯ ಹುಡುಗನನ್ನು ಪ್ರೀತಿಸಿ ಮದುವೆಯಾದಳು ಎಂಬ ಕಾರಣಕ್ಕೆ ತಂದೆ ಹಾಗೂ ಕುಟುಂಬಸ್ಥರು ಮಾರಣಾಂತಿಕವಾಗಿ ಹಲ್ಲೆ ಮಾಡಿ ಆರು ತಿಂಗಳ ಗರ್ಭಿಣಿ ಮಗಳನ್ನು ಕೊಲೆ ಮಾಡಿರುವುದು ನಿಜಕ್ಕೂ ಜಾತಿ ಜೀವಂತಿಕೆಯ ಕ್ರೌರ್ಯವನ್ನು ಎತ್ತಿ ತೋರಿಸಿದೆ. ಪ್ರೀತಿಯೂ ಜಾತಿಯನ್ನು ಸಹ ಮೀರಿ ನಿಲ್ಲುವ ಮೂಲಕ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ಮೂಡಿಸುವ ಶಕ್ತಿ ಇದ್ದರೂ ಜಾತಿ ಶ್ರೇಷ್ಠತೆಯನ್ನು ಪ್ರತಿಬಿಂಬಿಸುವ ಸಲುವಾಗಿ ದೌರ್ಜನ್ಯ ದಬ್ಬಾಳಿಕೆ ಮತ್ತು ಕೊಲೆ ಹೀಗೆ ಕ್ರೌರ್ಯದ ಹಾದಿ ಹಿಡಿದಿರುವ ವ್ಯವಸ್ಥೆ ಬದಲಾಗಬೇಕಾಗಿದೆ. ಹಾಗೂ ಜಾತಿಯ ನಶೆಯಲ್ಲಿದ್ದು ಇಂತಹ ಕೃತ್ಯಗಳನ್ನು ಎಸಗುವ ಸಂತತಿಯನ್ನು ಸಂವಿಧಾನದ ಅಡಿಯಲ್ಲಿ ಕಠಿಣ ಶಿಕ್ಷೆಗೆ ನೂಕಬೇಕಾಗಿದೆ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ.

ಗುಣಮಟ್ಟದ ಸ್ಯಾನಿಟರಿ ನ್ಯಾಪ್‌ಕಿನ್ ವಿತರಿಸಿ

ಮಾನ್ಯರೆ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಶುಚಿ ಕಿಟ್ ಯೋಜನೆಯಡಿ ಪ್ರತಿವರ್ಷ 10 ರಿಂದ 18 ವರ್ಷದೊಳಗಿನ ಸುಮಾರು 19 ಲಕ್ಷ ವಿದ್ಯಾರ್ಥಿನಿಯರಿಗೆ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ವಿತರಿಸಬೇಕು. ಪ್ರತಿ ಕಿಟ್‌ನಲ್ಲಿ 10 ಸ್ಯಾನಿಟರಿ ನ್ಯಾಪ್‌ಕಿನ್‌ಗಳು ಇರಬೇಕಾದುದು ಕಡ್ಡಾಯ. ಆದರೆ 2024-25ನೇ ಶೈಕ್ಷಣಿಕ ವರ್ಷದಲ್ಲಿ ಇದು ವಿತರಣೆ ಆಗಿಲ್ಲ ಎಂದು ವರದಿಯಾಗಿದೆ. ಇದರ ಪರಿಣಾಮವಾಗಿ, ಹಲವು ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಣ್ಣುಮಕ್ಕಳು ಋತುಚಕ್ರದ ಸಮಯದಲ್ಲಿ ಶಾಲೆಗೆ ಹಾಜರಾಗಲಾಗದೆ ಗೈರಾಗುತ್ತಿರುವುದು ಆತಂಕಕಾರಿ ವಿಷಯವಾಗಿದೆ. ಅಧ್ಯಯನಗಳ ಪ್ರಕಾರ, ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯ ಸೌಲಭ್ಯಗಳ ಕೊರತೆಯಿಂದಾಗಿ ಸುಮಾರು 50 ರಿಂದ 65 ಶೇಕಡಾ ಬಾಲಕಿಯರು ತಿಂಗಳಲ್ಲಿ ಕನಿಷ್ಠ ನಾಲ್ಕು ದಿನ ಶಾಲೆಗೆ ಹಾಜರಾಗುವುದಿಲ್ಲ. ಇದು ಅವರ ಶಿಕ್ಷಣ, ಆರೋಗ್ಯ ಮತ್ತು ಆತ್ಮವಿಶ್ವಾಸದ ಮೇಲೆ ದೀರ್ಘಕಾಲೀನ ದುಷ್ಪರಿಣಾಮ ಬೀರುತ್ತದೆ. ಇನ್ನು ಸರ್ಕಾರ ಹೋದ ವರ್ಷ ವಿದ್ಯಾರ್ಥಿನಿಯರಿಗೆ ಕಳಪೆ ಗುಣಮಟ್ಟದ ನ್ಯಾಪ್‌ಕಿನ್‌ಗಳನ್ನು ಪೂರೈಸಿರುವುದು ವರದಿಯಾಗಿದೆ. ಹೆಣ್ಣುಮಕ್ಕಳ ಆರೋಗ್ಯ, ಗೌರವ ಮತ್ತು ಭವಿಷ್ಯವನ್ನು ಕಾಪಾಡುವುದು ಸರ್ಕಾರದ ನೈತಿಕ ಹಾಗೂ ಸಾಮಾಜಿಕ ಜವಾಬ್ದಾರಿಯಾಗಿದೆ. ಈ ಕುರಿತು ಸರ್ಕಾರ ತಕ್ಷಣ ಪರಿಣಾಮಕಾರಿ ಮತ್ತು ಮಾನವೀಯ ಕ್ರಮ ಕೈಗೊಳ್ಳುವುದು ಅತ್ಯಾವಶ್ಯಕವಾಗಿದೆ.

–ಡಾ.ಎಚ್.ಕೆ.ವಿಜಯಕುಮಾರ, ಮೈಸೂರು.


ನಗದು ಸಹಿತದ ವಹಿವಾಟಿಗೆ ಒತ್ತಡ ಹೇರುತ್ತಿರುವುದು ಸರಿಯಲ್ಲ

ಮಾನ್ಯರೇ,

ಪ್ರಸ್ತುತ ಮೈಸೂರಿನ ಅರಮನೆ ಮೈದಾನದಲ್ಲಿ ಮೈಸೂರು ಅರಮನೆ ಮಂಡಳಿ ವತಿಯಿಂದ ನಡೆಸಲಾಗುತ್ತಿರುವ ಫಲಪುಷ್ಪ ಪ್ರದರ್ಶನ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯುತ್ತಿದ್ದು ಮೈಸೂರು ಜನರ ಹಾಗೂ ಪ್ರವಾಸಿಗರ ಮನ ತಣಿಸುತ್ತಿದೆ. ಪ್ರವೇಶಕ್ಕೆ ದರ ನಿಗದಿ ಮಾಡಿದ್ದು ಬುಕಿಂಗ್ ಕೌಂಟರ್‌ನಲ್ಲಿ ಪ್ರವೇಶ ದರವನ್ನು ನಗದು ರೂಪದಲ್ಲಿಯೇ ನೀಡಬೇಕೆಂದು ಫಲಕ ಅಳವಡಿಸಿದ್ದಾರೆ. ಅಂದರೆ ಡಿಜಿಟಲ್ ಮೂಲಕವಾಗಿ ಹಣ ಪಾವತಿಸಲು ಅವಕಾಶ ಮಾಡಿಕೊಟ್ಟಿಲ್ಲ. ಭಾರತವು ಡಿಜಿಟಲ್ ಇಂಡಿಯಾ ಯೋಜನೆ ಮೂಲಕ ಪ್ರಪಂಚಾದ್ಯಂತ ಇತರೆ ದೇಶಗಳಿಗೆ ಮಾದರಿಯಾಗಿ ಹೊರಟಿರುವ ಈ ಸಂದರ್ಭದಲ್ಲಿ ಸರ್ಕಾರದ ಅಧೀನ ಸಂಸ್ಥೆಯೊಂದು ಡಿಜಿಟಲ್ ಇಂಡಿಯಾ ಯೋಜನೆಗೆ ಪೂರಕವಾಗದೆ ನಗದು ಸಹಿತದ ವಹಿವಾಟಿಗೆ ಬಹಿರಂಗವಾಗಿಯೇ ಒತ್ತಡ ಹೇರುತ್ತಿರುವುದು ಸರಿಯಲ್ಲ. ಈಗಲಾದರೂ ಸಂಬಂಧಪಟ್ಟವರು ಈ ಕುರಿತಂತೆ ಸೂಕ್ತ ಕ್ರಮ ತೆಗೆದುಕೊಳ್ಳಲು ಆಶಿಸುತ್ತೇನೆ.

–ಎಚ್.ಬಿ. ಕೃಷ್ಣರಾವ್, ವಿ.ವಿ. ಮೊಹಲ್ಲಾ, ಮೈಸೂರು.

ಕನ್ನಡ ಕಡ್ಡಾಯವಾಗಲಿ ಕನ್ನಡ ಕವಿಗಳಿಗೆ!



ಕೆ ಎಸ್ ನರಸಿಂಹಸ್ವಾಮಿ



ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ:9916129654.

> ಕೆಎಸ್‌ಎನ್‌ರವರು ಇದ್ದಿದ್ದರೆ ಜನವರಿ 2026ಕ್ಕೆ 111 ವರ್ಷಗಳಾಗುತ್ತಿತ್ತು, ಜೀವನದ ಲಿಖಿತವೊಂದು ಇದೆಯಲ್ಲಾ ಇಂತಿಷ್ಟೇ ವರುಷ ಮಾತ್ರ ನಿನ್ನ ಬದುಕು ಎನ್ನುವುದು. ಅವರಿಲ್ಲದಿರಬಹುದು, ಅವರ ಕನ್ನಡ ಭಾಷಾ ನೈಪುಣ್ಯತೆಯ ಚಳಕದಿಂದ ಹುಟ್ಟಿದ ಕನ್ನಡ ಕವಿತೆಗಳು ಕನ್ನಡಿಗರ ಹೃದಯಗಳಲ್ಲಿ ಮಿಡಿಯುವ ಮೂಲಕ ಎಂದೆಂದೂ ಜೀವಂತ ಇರುತ್ತಾರೆ!.

ಡಿಸೆಂಬರ್ 27, ಕೆಎಸ್‌ಎನ್ ಸ್ವರ್ಗಸ್ಥರಾದ ದಿನ. ತನಿಮಿತ್ತ ಈ ಲೇಖನ

ಕನ್ನಡ ಕಾವ್ಯ ಲೋಕದಲ್ಲಿ ಅದರಲ್ಲೂ ಪ್ರೇಮಕಾವ್ಯದಲ್ಲಿ ಹೆಸರು ಮಾಡಿದ ಕಿಕ್ಕೇರಿ ಸುಬ್ಬರಾವ್ ನರಸಿಂಹಸ್ವಾಮಿಯವರ (ಕೆಎಸ್‌ಎನ್) ಹೆಸರನ್ನು ಕೇಳದೇ ಇರುವ ಕನ್ನಡಿಗರಿಲ್ಲ. ಎಲ್ಲರಿಗೂ ಮೆಚ್ಚುಗೆ ಆಗುವಂತೆ ಪ್ರೇಮ ಕಾವ್ಯದಲ್ಲಿ ಸುವಾಸನೆಯುಳ್ಳ ಮಲ್ಲಿಗೆಯ ಪರಿಮಳ ಬೀರಿ 27 ಡಿಸೆಂಬರ್ 2003 ರಂದು ತಮ್ಮ 88ನೇ ವಯಸ್ಸಿನಲ್ಲಿ ಮೈಸೂರು ಮಲ್ಲಿಗೆಯ ಹೂದಂಡೆಯೊಂದಿಗೆ ಸ್ವರ್ಗ ಸೇರಿ, ಇದೇ ಡಿಸೆಂಬರ್‌ಗೆ 22 ವರ್ಷಗಳಾದವು, 1942ರಲ್ಲಿ ಅರಳಿದ ಮೈಸೂರು ಮಲ್ಲಿಗೆ ಕವನಗಳು ಇಂದಿಗೂ ಬಾಡದಿರುವುದು ಇವರಿಗಿದ್ದ ಪದಗಳ ಜೋಡಣೆಯ ತಾಕತ್ತು.

ಲೇಖಕನಿಗೆ ಮತ್ತೊಬ್ಬರ ಸಾಹಿತ್ಯವನ್ನು ಸವಿಯುವ ಮತ್ತು ಸಾಧ್ಯವಾದರೆ ಅಲ್ಪ-ಸ್ವಲ್ಪ ಕದಿಯುವ ಗುಣವಿರಬೇಕು. ಕದ್ದರೂ ಸಿಕ್ಕಿಕೊಳ್ಳದ ಹಾಗೆ ಜಾಣ್ಮೆಯಿಂದ ಕದಿಯಬೇಕು. ಸಾರಸಗಟಾಗಿ ಪೂರ್ಣಪ್ರಮಾಣದಲ್ಲಿ ಕಳ್ಳತನಕ್ಕೆ ಕೈಹಾಕಿದರೆ ಸಿಕ್ಕಿಬೀಳುವುದಂತು ಗ್ಯಾರಂಟಿ. ಏಕೆಂದರೆ ಈಗ ಎಲ್ಲೆಲ್ಲೂ ಸಿಸಿ ಟಿವಿಗಳಿವೆ. ಅಂತರ್ಜಾಲದ ಗಾಳಿ ಇದೆ ಮತ್ತು ದೃಶ್ಯವನ್ನು ಸೆರೆ ಹಿಡಿಯಲು ಎಲ್ಲರ ಕೈಯಲ್ಲಿ ಮೊಬೈಲ್‌ಗಳಿವೆ. ಪ್ರತೀ ಕ್ಷಣವೂ ನಮ್ಮನ್ನು ಮೂರನೇ ಕಣ್ಣಿನಿಂದ ನೋಡುತ್ತಿರುತ್ತಾರೆ.

ಕೆಲ ತಿಂಗಳುಗಳ ಹಿಂದೆ ನಾನು ಹೋಗಿದ್ದ ಕವಿಗೋಷ್ಠಿಯಲ್ಲಿ ಕವಯತ್ರಿಯೊಬ್ಬರು ತಾವು ರಚಿಸಿದ ಒಂದು ಕವನವನ್ನು ವಾಚನ ಮಾಡಿದರು. ಆ ಕವನವನ್ನು ಅವರೇ ರಚಿಸಿದ್ದೋ, ಇಲ್ಲವೋ ಕೇಳುಗರಿಗಂತೂ ತಿಳಿಯುವುದಿಲ್ಲ. ರಚನೆ ಪ್ರಸಿದ್ದ ಕವಿಗಳದ್ದಾದರೆ ಗೊತ್ತಾಗಿ ಬಿಡುತ್ತದೆ. ಕವಿತೆ ಬಹಳ ಚೆನ್ನಾಗಿದ್ದರೂ ಅದು ಸಣ್ಣಪುಟ್ಟ ಕವಿಗಳ ಸೃಷ್ಟಿ ಆಗಿದ್ದರೆ ಸಾಮಾನ್ಯವಾಗಿ ತಿಳಿಯುವುದಿಲ್ಲ. ಆ ದಿನದ ಗೋಷ್ಠಿಯ ಕೇಳುಗನಾಗಿ ನಾನು ಕವಯತ್ರಿ ವಾಚಿಸಿದ ಕವನ ಕೇಳಿ ಗಾಬರಿಯಾದೆ! ಹಿಂದಿನ ದಿನ ನನ್ನ ವಾಟ್ಸ್‌ಪ್‌ಗೆ ಒಂದು ಪದವೂ ವ್ಯತ್ಯಾಸವಿಲ್ಲದೆ, ಅಷ್ಟೂ ಪದಪುಂಜಗಳು ಜೆರಾಕ್ಸ್ ಪ್ರತಿಯಂತೆ ಆಕೆ ವಾಚಿಸಿದ ಕವನದಲ್ಲಿತ್ತು.

ಈ ಅಂತರ್ಜಾಲ ಮತ್ತು ಸಿಸಿ ಟಿವಿಗಳ ಆವಿಷ್ಕಾರದಿಂದಾಗಿ ಚಿಕ್ಕಚಿಕ್ಕ ಕಳ್ಳತನಕ್ಕೂ ಕಲ್ಲು ಬಿದ್ದಿದೆ. ಇಂದಿನ ದಿನಗಳಲ್ಲಿ ಕಳ್ಳತನ ಮಾಡುವವರಿಗೆ ಎಚ್ಚರಿಕೆಯ ಅವಶ್ಯಕತೆ ಇದೆ. ಹಾಗಂತ ಕಳ್ಳತನ ಮಾಡಿ ಎಂದಲ್ಲ, ಎಚ್ಚರಿಕೆಯಿಂದ ಮಾಡುವ ಕಳ್ಳತನವೂ ತಪ್ಪೆ.

ನನಗಂತೂ ತಿಳಿಯದು ಆಕೆಯೇ ರಚಿಸಿದ್ದೋ ಅಥವಾ ಬೇರೆಯವರೋ. ಆದರೆ, ಗೋಷ್ಠಿಯಲ್ಲಿ ವಾಚಿಸಿದ್ದು ಮಾತ್ರ ಅವರೇ. ಅದೇ ಸಮಯಕ್ಕೆ ಕವಿಗೋಷ್ಠಿಯಲ್ಲಿ ಕವನ ವಾಚಿಸಲು ಬಂದಿದ್ದ ಕವಯತ್ರಿಯರಿಬ್ಬರು ಮುಂದಿನ ಸಾಲಿನಲ್ಲಿ ಗುಸುಗುಸು ಮಾತನಾಡಿಕೊಳ್ಳುತ್ತಿದ್ದರು. ನೋಡಿದರೆ ಅವರ ಮೊಬೈಲ್‌ಗಳಲ್ಲೂ ಇದೇ ಕವನವಿರುವುದನ್ನು ತೋರಿಸುತ್ತಿದ್ದಾರೆ. ಕವಿಗೋಷ್ಠಿ ಮುಗಿಯುವ ಹೊತ್ತಿಗೆ ಎಲ್ಲಾ ಕವಿಗಳಿಗೂ ಸುದ್ದಿ ತಲುಪಿ, ಕವನ ವಾಚಿಸಿದ ಕವಯತ್ರಿಯ ಮುಖ ಕಪ್ಪಿಟ್ಟಿತ್ತು.

ಈ ಕವನ ಸ್ವತಃ ವಾಚಿಸಿದವರೇ ರಚಿಸಿದ್ದರೂ, ಬಹಳ ಹಿಂದೆ ಫೇಸ್‌ಬುಕ್ ಅಥವಾ ವಾಟ್ಸ್‌ಪ್‌ನಲ್ಲಿ ಹಂಚಿರಬಹುದು ಅಥವಾ ಇಲ್ಲದಿರಬಹುದು. ಅದೇ ಕವನವನ್ನು ಗೋಷ್ಠಿಯಲ್ಲಿ ಓದಿರಬಹುದು. ಇಲ್ಲಿ ಕವನ ಸ್ವಂತದ್ದಾದರೂ ಮುಜಗರಕ್ಕೆ ಒಳಗಾಗುವ ಸನ್ನಿವೇಶ ಕವಯತ್ರಿಗೆ ಉಂಟಾಯಿತು.

ನಾನಿಲ್ಲಿ ಬಹಿರಂಗವಾಗಿಯೇ ಪ್ರೇಮಕವಿ ಕೆ.ಎಸ್. ನರಸಿಂಹಸ್ವಾಮಿಯವರ ಒಂದೆರಡು ಕವಿತೆಗಳನ್ನು ಆಯ್ದು ಇಲ್ಲಿ ತಂದಿದ್ದೇನೆ, ಇದು ಕಳ್ಳತನ ಮಾಡಿದ್ದಲ್ಲ. ವಿಷಯಕ್ಕೆ ಪೂರಕವಾಗಿರುವುದರಿಂದ ಅವುಗಳನ್ನು ಯಥಾವತ್ತಾಗಿ ಬಳಸಿದ್ದೇನೆ. ಅವರ ಪ್ರೇಮ ಕವಿತೆಗಳನ್ನು ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಂಡು ತನ್ನದೇ ಕವಿತೆಯೆಂದು ಹೇಳಿಕೊಂಡು ಕಾವ್ಯನಾಮದೊಂದಿಗೆ ಓಡಾಡುವ ಕವಿಗಳು ನಮ್ಮ ನಡುವೆ ಇದ್ದಾರೆ. ಕೆಎಸ್‌ನರವರ ಕವಿತೆಗಳನ್ನು ಕದಿಯದವರು ಯಾರಿದ್ದಾರೆ?, ಕದಿಯದಿದ್ದರೂ ಕೊನೆಯ ಪಕ್ಷ ಅವರ ಕವಿತೆಗಳಿಂದ ಪ್ರೇರಿತರಾಗಿ ತಮ್ಮದೇ ಧಾಟಿಯಲ್ಲಿ ಕವಿತೆಗಳನ್ನು ಕಟ್ಟಿರುತ್ತಾರೆ. ಇವತ್ತಿನ ಕವಿವರೇಣ್ಯರು, ಅದೆಷ್ಟೇ ಕವಿತೆಗಳನ್ನು ರಚಿಸಿದರು ಅವರು ಕನ್ನಡಾಂಬೆಯ ಮುಡಿಗೆ ಮುಡಿಸಿರುವ ಮೈಸೂರು ಮಲ್ಲಿಗೆಯ ಪರಿಮಳಕ್ಕೆ ಸರಿಸಾಟಿಯಾಗದು.

ಅವರು ಪ್ರೀತಿ-ಪ್ರೇಮದಾಚೆಗೂ ನಿಂತು ಕವಿತೆಗಳನ್ನು ರಚಿಸಿದ್ದಾರೆ, ಕಳೆದ ವರ್ಷ ಡಿಸೆಂಬರ್‌ನಲ್ಲಿ ಅದ್ದೂರಿಯಾಗಿ ಮೃಷ್ಟಾನ್ನ ಭೋಜನದೊಟ್ಟಿಗೆ ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ಕನ್ನಡದ ಅಳಿವು ಉಳಿವಿನ ಬಗ್ಗೆ ಚಿಂತಕರ ಭಾಷಣಗಳನ್ನು ಕೇಳಿದೆವು. ಶಿಕ್ಷಣ ಕನ್ನಡ ಮಾಧ್ಯಮವಾಗಬೇಕು, ಕನ್ನಡ ಶಾಲೆಗಳು ಉಳಿಯಬೇಕು, ಕರ್ನಾಟಕದಲ್ಲಿ ಕನ್ನಡಿಗರಿಗೇ ಉದ್ಯೋಗ ಎನ್ನುವ ಕನ್ನಡಿಗರ ಕೂಗು ಎಲ್ಲಾ ಸಮ್ಮೇಳನಗಳಲ್ಲಿ, ಎಲ್ಲಾ ಕಾಲಕ್ಕೂ ಜೀವಂತವಾಗಿವೆ. ಮುಂದಿನ ಸಮ್ಮೇಳನಕ್ಕೂ ಇದೇ ಕೂಗು ಇರುತ್ತದೆ. ಏಕೆಂದರೆ ಯಾವುದೂ ಬಗೆಹರಿದಿರುವುದಿಲ್ಲ. 1958ರಲ್ಲಿ ಪ್ರಥಮವಾಗಿ ಮುದ್ರಣವಾದ ಕೆಎಸ್‌ನರವರ ಶಿಲಾಲತೆ ಕವನ ಸಂಕಲನದಲ್ಲಿ ಅವರ ಒಂದು ಪದ್ಯ ಹೀಗಿದೆ;

ಶಿಕ್ಷಣ ಮಾಧ್ಯಮವಾದರೆ ಸಾಲದು
ಕನ್ನಡ–ಮಕ್ಕಳಿಗೆ;
ಕನ್ನಡ ಮಾಧ್ಯಮವಾಗಲೆ ಬೇಕು
ಮೊದಲೀ ಕವಿಗಳಿಗೆ–
ಕನ್ನಡ ಕವಿಗಳಿಗೆ!.

ಹೇಳುವವರು ಮೊದಲು ತಾವು ಹೇಳಿದಂತೆ ನಡೆದು ತೋರಿಸಬೇಕು, ಕನ್ನಡ ಹಾಳಾಗುತ್ತಿರುವುದು ವಿದ್ಯಾವಂತರಿಂದ, ಸುಶಿಕ್ಷಿತರಿಂದ ಮತ್ತು ಕನ್ನಡ ಕಟ್ಟುವ ಕೆಲಸದಲ್ಲಿ ನಿರತರಾಗಿರುವ ಕನ್ನಡ ಕವಿಗಳಿಂದ. ಮೊದಲು ಅವರು ಕನ್ನಡ ಮಾಧ್ಯಮವನ್ನು ತಮ್ಮ ಚಟುವಟಿಕೆಯಲ್ಲಿ ಅಳವಡಿಸಿಕೊಳ್ಳಬೇಕು. ಕನ್ನಡ ಕನ್ನಡವೆಂದು ಕೂಗುವ ಬಹುತೇಕ ಕನ್ನಡ ಕಟ್ಟಾಳುಗಳ ಮಕ್ಕಳು ಇಂಗ್ಲೀಷ್ ಕಾನ್ವೆಂಟ್‌ಗಳಲ್ಲಿ ಅಷ್ಟೇಕೆ ನಮ್ಮ ಕನ್ನಡ ಕವಿಗಳ ಅನೇಕರ ಮಕ್ಕಳು ಸಹ ಪಟ್ಟಣದ ಇಂಗ್ಲೀಷ್ ಶಾಲೆಗಳಲ್ಲಿ ಕಲಿತು ವಿದೇಶಗಳಲ್ಲಿ ನೆಲೆಸಿದ್ದಾರೆ.

ಕನ್ನಡಗೌಡರು ಕನ್ನಡದಲ್ಲೇ
ಮಕ್ಕಳ ಹರಸುವರು,
ದಾಸರು ಶರಣರು ಕನ್ನಡದಲ್ಲೇ
ವೇದವ ನುಡಿಸಿದರು;
ಬೆಳಕನ್ನು ಬಿಡಿಸಿದರು.

ರೈತಾಪಿ ಜನರು, ದಾಸರು ಶರಣರು ಕನ್ನಡವನ್ನು ಬಿಡರು, ಕನ್ನಡದಲ್ಲೇ ಅವರ ಬದುಕಿನ ವ್ಯವಹಾರ. ಕನ್ನಡಕ್ಕೆ ಕಂಟಕ ಬಂದಿರುವುದು ಕಲಿತವರಿಂದಲೆ. ಕನ್ನಡ ಹಬ್ಬದ ಆಚರಣೆಗಾಗಿ ಮೀಸಲಿಟ್ಟಿರುವ ನವಂಬರ್ ತಿಂಗಳು ಈಗಷ್ಟೇ ಸರಿದಿದೆ, ಮುಂದಿನದು ಇನ್ನೂ ಬಹಳ ದೂರದಲ್ಲಿದೆ, ನಾವೀಗ ಡಿಸೆಂಬರ್ ತಿಂಗಳಿನಲ್ಲಿದ್ದೇವೆ. ಕೊರೆವ ಚಳಿ ಪ್ರಾರಂಭವಾಗಿದೆ ಕುರುಕಲು ತಿಂಡಿ ತಿನ್ನುತ್ತಾ ಬಿಸಿ ಬಿಸಿ ಕಾಫಿ ಕುಡಿಯುತ್ತಾ ಭಾಷೆಯೊಟ್ಟಿಗೆ ಸಂಸ್ಕೃತಿಯನ್ನೂ ಮಲೀನಗೊಳಿಸುತ್ತಿರುವ ರಿಯಾಲಿಟಿ ಷೋಗಳನ್ನು(ಬಿಗ್‌ಬಾಸ್, ಹಳ್ಳಿಪವರ್, ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಮುಂತಾದವುಗಳು) ಮತ್ತು ಧಾರವಾಹಿಗಳನ್ನು ನೋಡುತ್ತಿದ್ದೇವೆ. ಅಲ್ಲಿಗೆ ಗ್ಯಾರಂಟಿ ಆಯಿತು. ಕನ್ನಡ ಕಟ್ಟುವ ಉಳಿಸುವ ಹೋರಾಟಗಳ ಕೂಗುಗಳು ಸಾಯುವುದಿಲ್ಲ. ಇದು ಎಂದೆಂದಿಗೂ ಚಿರಾಯು, ಕೆಲವರಿಗೆ ಕೆಲವು ಬೇಡಿಕೆಗಳು ಅಂತ್ಯ ಕಾಣದಿರುವುದೇ ಒಳ್ಳೆಯದಿರಬಹುದೇನೋ?.

ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಕನ್ನಡದಲ್ಲಿ ಕನ್ನಡದ ಬಗ್ಗೆ ಭಾಷಣ ಬಿಗಿಯಲು ಹೋಗುತ್ತಿರುವ ಕವಿಗೆ ಬೀಳ್ಕೊಡಲು ಬಾಗಿಲಲ್ಲಿ ನಗುತ್ತಾ ನಿಂತ ಹೆಂಡತಿಗೆ ತಿಳಿದಿದೆ ಗಂಡ ಎಲ್ಲಿಗೆ ಹೋಗುತ್ತಿದ್ದಾನೆ ಎಂದು ಆದರೂ ಕವಿ ಎನಿಸಿಕೊಂಡ ಗಂಡ, ಹೆಂಡತಿಗೆ ಏನು ಹೇಳುತ್ತಾನೆ ಎಂಬುದನ್ನು ಕೆಎಸ್‌ನ ಅವರ ಕಾವ್ಯದಲ್ಲಿ ಕೇಳಿ;

ನಗುವೆಯಲ್ಲೆ ನಲ್ಲೆ, ನೀನು?–
ಮುಡಿಯ ತುಂಬ ಮಲ್ಲಿಗೆ!
ಹೋಗಿ ಬರಲೆ ಈಗ ನಾನು?
ಕೇಳಬೇಡ, ಎಲ್ಲಿಗೆ?

ಕವಿಗೆ ಮುಜುಗರ ಏಕೆಂದರೆ ಹೆಂಡತಿ ಎಲ್ಲಿಗೆ ಎಂದು ಬೀದಿಯಲ್ಲಿ ಕೇಳಿದರೆ ಕನ್ನಡದ ಕೆಲಸಕ್ಕೆ ಹೋಗುತ್ತಿದ್ದೇನೆ ಎಂದರೆ ಬಂಡವಾಳ ಬಯಲಾಗುವುದು. ಕಾರಣ, ತನ್ನ ಮಕ್ಕಳೆಲ್ಲರೂ ಪಬ್ಲಿಕ್ ಶಾಲೆಗಳಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಓದುತ್ತಿರುತ್ತಾರೆ; ಅಲ್ಲಿಗೆ ಕೆಎಸ್‌ನ ರವರು ಅಂದು ಆಡಿದ ಮಾತು ಇಂದಿಗೂ ಪ್ರಸ್ತುತವಾಗಿದೆ. ಕನ್ನಡ ಮಾಧ್ಯಮವಾಗಬೇಕು ಮೊದಲೀ.... ಕವಿಗಳಿಗೆ, ಕನ್ನಡ ಕವಿಗಳಿಗೆ!.

ಇಲ್ಲಿ ಅರಳದಿಹ ಹೂವುಗಳಿಲ್ಲ,
ಹಾಡಲು ಬಾರದ ಹಕ್ಕಿಗಳಿಲ್ಲ
ಸಾವಿರ ದೀಪಗಳರಮನೆಯೊಳಗೆ
ಶರಣೆನ್ನುವೆನೀ ವೀಣಾಧ್ವನಿಗೆ
ಕನ್ನಡ ನಾಡಿದು; ಮಿಂಚುವ ಕಂಗಳ
ಸಿರಿಗನ್ನಡ ನಾಡು.

ಪ್ರೇಮಕವಿ ಕೆಎಸ್‌ಎನ್‌ರವರು ಕನ್ನಡ ಭಾಷಾ ಧ್ವನಿಯನ್ನು ವೀಣಾಧ್ವನಿಗೆ ಹೋಲಿಸಿ, ಮಿಂಚುವ ಕಣ್ಣುಗಳಿರುವ ಶ್ರೀಮಂತಿಕೆಯ ನಾಡಿದು ಎಂದು ಬಣ್ಣಿಸಿದ್ದಾರೆ. ಅವರು ಬದುಕಿದ್ದಿದ್ದರೆ ಜನವರಿ 2026ಕ್ಕೆ 111 ವರ್ಷಗಳಾಗುತ್ತಿತ್ತು. ಜೀವನದ ಲಿಖಿತವೊಂದು ಇದೆಯಲ್ಲಾ ಇಂತಿಷ್ಟೇ ವರುಷ ಮಾತ್ರ ನಿನ್ನ ಬದುಕು ಎನ್ನುವುದು. ಅವರಿಲ್ಲದಿರಬಹುದು, ಅವರ ಕನ್ನಡ ಭಾಷಾ ನೈಪುಣ್ಯತೆಯ ಚಳಕದಿಂದ ಹುಟ್ಟಿದ ಕನ್ನಡ ಕವಿತೆಗಳು ಕನ್ನಡಿಗರ ಹೃದಯಗಳಲ್ಲಿ ಮಿಡಿಯುವ ಮೂಲಕ ಎಂದೆಂದೂ ಜೀವಂತ ಇರುತ್ತಾರೆ!.

ಆಹಾರ ವಿಹಾರ ಆರೋಗ್ಯ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ



'ಆಹಾರ–ವಿಹಾರ–ಆರೋಗ್ಯ ವಿಚಾರ'ದ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಶಾಸಕರಾದ ಜಿ.ಟಿ. ದೇವೇಗೌಡ, ಡಾ.ಸಿ.ಎನ್.ಅಶ್ವಥ್ ನಾರಾಯಣ್ ಉದ್ಘಾಟಿಸಿದರು.

ಮೈಸೂರು, ಡಿ.26(ವಿವಿಹೆಚ್)– ಪ್ರತಿಯೊಬ್ಬ ನಾಗರಿಕನೂ ವೈಯಕ್ತಿಕ ಆರೋಗ್ಯ ಪಾಲನೆಯಿಂದ ಸ್ವಸ್ಥ ಕುಟುಂಬ, ಸಮಾಜ ನಿರ್ಮಾಣ ಮಾಡಬಹುದು. ಈ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಶಾಲಾ ಹಂತದಲ್ಲಿಯೇ ಆರೋಗ್ಯ ಮತ್ತು ಕ್ಷೇಮ ಪಾಲನೆ ವಿಷಯವನ್ನು ಕಡ್ಡಾಯಗೊಳಿಸಲಾಗಿದೆ ಎಂದು ಮಲ್ಲೇಶ್ವರಂ ಕ್ಷೇತ್ರದ ಶಾಸಕ ಡಾ. ಸಿ.ಎನ್. ಅಶ್ವಥ್ ನಾರಾಯಣ್ ಅಭಿಪ್ರಾಯಪಟ್ಟರು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂಐಎಂಡಿ ಸಭಾಂಗಣದಲ್ಲಿ ಡಾ.ಚಂದ್ರಶೇಖರ್ ಕಾವೇರಿ ಆಯುರ್ವೇದ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗ, ಮಹಾರಾಜ ಇನ್‌ಸ್ಟಿಟ್ಯೂಟ್ ಆಫ್ ಆಯುರ್ವೇದ ಮೆಡಿಕಲ್ ಸೈನ್ಸ್ ಕಾಲೇಜು ಸಹಯೋಗದಲ್ಲಿ ಕಾವೇರಿ ಆಯುರ್ವೇದ ವೈದ್ಯಕೀಯ ಕಾಲೇಜು ವತಿಯಿಂದ ಆಯೋಜಿಸಲಾಗಿದ್ದ 'ಆಹಾರ–ವಿಹಾರ–ಆರೋಗ್ಯ ವಿಚಾರ'ದ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ನಾವೆಲ್ಲರೂ ಮೂರನೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಂಡಿದ್ದೇವೆ. ಪ್ರೀ-ಸ್ಕೂಲ್ ಮಕ್ಕಳಿಂದ ಹಿಡಿದು ಸ್ನಾತಕೋತ್ತರ ಪದವಿವರೆಗೂ ಹಲವಾರು ಅವಕಾಶ ಕಲ್ಪಿಸಲಾಗಿದೆ. ಈ ಎಲ್ಲಾ ಹಂತಗಳಲ್ಲಿಯೂ ಜೀವನ ಕ್ರಮ ಪಾಲನೆ ಬಗ್ಗೆ ಒತ್ತಿ ಹೇಳಲಾಗುತ್ತಿದೆ. ಆರೋಗ್ಯ ಮತ್ತು ಕ್ಷೇಮ ಪಾಲನೆ ವಿಷಯನ್ನು ಕಡ್ಡಾಯಗೊಳಿಸುವ ಜೊತೆಗೆ ಕ್ರೀಡಾ ಮನೋಭಾವ, ಯೋಗ ಶಿಕ್ಷಣವನ್ನು ನೀಡುವ ಮೂಲಕ ಕಲಿಕಾ ಹಂತದಲ್ಲಿಯೇ ತನ್ನನ್ನು ಹೇಗೆ ನೋಡಿಕೊಳ್ಳಬೇಕು ಎಂಬುದನ್ನು ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತಿದೆ ಎಂದು ತಿಳಿಸಿದರು.

ವೈದ್ಯಕೀಯ ವಿಷಯ ಕುರಿತು ಅಧ್ಯಯನ ಮಾಡಿದವರೇ ಸರಿಯಾದ ಜೀವನ ಕ್ರಮ ಪಾಲಿಸದಿದ್ದಾಗ ಸಾಮಾನ್ಯ ಜನರಿಗೆ ಹೇಗೆ ತಾನೆ ಮಾಹಿತಿ ನೀಡಲು ಸಾಧ್ಯವಾಗುತ್ತದೆ. ಗುಣಮಟ್ಟದ ಜೀವನ ಪಾಲನೆ ಕುರಿತು ಸಾರ್ವಜನಿಕರಾದರೂ ಎಲ್ಲಿಂದ, ಯಾವುದರಿಂದ ಮಾಹಿತಿ ಪಡೆಯುತ್ತಾರೆ ಹೇಳಿ ಎಂದು ಪ್ರಶ್ನಿಸಿದರು.

ಆಹಾರ ಸೇವನೆ, ನಿದ್ದೆ, ದೈಹಿಕ ಚಟುವಟಿಕೆ ಸಮಸ್ಯೆ ಒಂದೆಡೆಯಾದರೆ, ಹಣದ ಗೀಳಿನಿಂದಾಗಿ ಈಗ ದೊಡ್ಡ ಸವಾಲುಗಳಾಗಿ ಮಾದಕ ದ್ರವ್ಯ ಸೇವನೆ, ಸಾಮಾಜಿಕ ಮಾಧ್ಯಮ, ಸ್ಕ್ರೀನ್ ಎಕ್ಸ್‌ಪೋಸ್ ಸೇರಿದಂತೆ ಇತರೆ ಸಮಸ್ಯೆಗಳು ಹೆಚ್ಚಾಗಿವೆ. ಇವುಗಳ ವಿರುದ್ಧ ಹೋರಾಡುವುದು ಬಹಳ ಅಗತ್ಯವಾಗಿದೆ ಎಂದು ವಿವರಿಸಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಮಾತನಾಡಿ, ದೇಶದಲ್ಲಿಯೇ ಎಲ್ಲಿಯೂ ಶುದ್ಧವಾದ ಗಾಳಿ, ಗುಣಮಟ್ಟದ ಆಹಾರ, ಕಲುಷಿತವಿಲ್ಲದ ನೀರು ಸಿಗುತ್ತಿಲ್ಲ. ಆಹಾರದಲ್ಲಿ ಮಾತ್ರವಲ್ಲದೇ ಹರಿಯುವ ನದಿಯ ನೀರೂ ಕಲುಷಿತವಾಗಿದೆ. ವಿದ್ಯಾವಂತರೆ ಇಂದು ಸ್ವಸ್ಥ ಪರಿಸರವನ್ನು ಹಾಳು ಮಾಡುವ ಕೆಲಸ ಮಾಡುತ್ತಿರುವುದು ಇಂದಿನ ಜೀವನ ಮಟ್ಟಕ್ಕೆ ತೊಡಕಾಗಿರುವ ಅಂಶ ಎಂದು ಬೇಸರಿಸಿದರು.

ಆರೋಗ್ಯ ಸಂಬಂಧ ಆಯುರ್ವೇದ ಕ್ಷೇತ್ರ ದೇವರಿಗೆ ಸೇವೆ ಸಲ್ಲಿಸುವ ಕ್ಷೇತ್ರವಾಗಿದೆ. ನಮ್ಮ ಮೂಲ ಸಂಸ್ಕೃತಿಯನ್ನು, ಚಿಕಿತ್ಸಾ ಕ್ರಮಗಳನ್ನು ಜನರ ಕಲ್ಯಾಣಕ್ಕಾಗಿ ಬಳಸಲು ಆಧುನಿಕ ವಿದ್ಯಮಾನವನ್ನು ಇದರೊಂದಿಗೆ ಬಳಸಿಕೊಂಡು ಮುನ್ನಡೆಯುತ್ತಿರುವುದು ಮೆಚ್ಚುಗೆ ಸಂಗತಿಯಾಗಿದೆ. ತಂತ್ರಜ್ಞಾನದ ಬೆಳವಣಿಗೆ ಹೆಚ್ಚಿದ್ದರೂ ನಮ್ಮ ಮೂಲಕ್ಕೆ ಹಿಂತಿರುಗುತ್ತಿರುವುದು ಸಂತಸದ ಸಂಗತಿ ಎಂದರು.

> ಸುಸ್ಥಿರ ಆರೋಗ್ಯ ರಕ್ಷಣೆಯಲ್ಲಿ ಆಧುನಿಕ ವಿಜ್ಞಾನವು ಅನನ್ಯ ಕೊಡುಗೆ ನೀಡಿದ್ದು, ದೇಶದಲ್ಲಿ ವೈದ್ಯಕೀಯ ಮತ್ತು ಔಷಧ ಆವಿಷ್ಕಾರಗಳು ಕ್ರಾಂತಿಕಾರಿಯಾಗಿ ನಡೆದಿವೆ. ಔಷಧ, ಚಿಕಿತ್ಸೆ ಆವಿಷ್ಕಾರಗಳಿಂದ ವ್ಯಕ್ತಿಯ ಆಯಸ್ಸು ಹೆಚ್ಚಾಗಿದ್ದರೂ, ಅನಾರೋಗ್ಯ ಭಾದಿಸುತ್ತಿದೆ. ದೇಶವು ಪೌಷ್ಟಿಕ ಆಹಾರ ಸಂಶೋಧನೆಯಲ್ಲಿ ಮುಂದುವರಿದಿದ್ದು, ಜಾಗತಿಕ ಕಾಣಿಕೆಯನ್ನು ನೀಡುತ್ತಿದೆ. ಸುಸ್ಥಿರ ಆರೋಗ್ಯ ಮಾರ್ಗದರ್ಶಿಯಾಗಿದೆ. ಯೋಗ, ಆಯುರ್ವೇದ ಮೊದಲಾದ ಚಿಕಿತ್ಸಾ ಕ್ರಮಗಳು ವಿಶ್ವಕ್ಕೆ ನೀಡಿದ ಕೊಡುಗೆಯಾಗಿದೆ.
>
> –ಪ್ರೊ.ವಿ.ಪ್ರಕಾಶ್, ನಿವೃತ್ತ ನಿರ್ದೇಶಕ, ಸಿಎಫ್‌ಟಿಆರ್‌ಐ

ಸಿಜಿಓಐ ಅಧ್ಯಕ್ಷ ಡಾ. ಜಿ.ಆರ್.ಚಂದ್ರಶೇಖರ್, ಭಾರತೀಯ ವೈದ್ಯಕೀಯ ಪದ್ಧತಿಯ ರಾಷ್ಟ್ರೀಯ ಆಯೋಗ (ಎನ್‌ಸಿಐಎಸ್‌ಎಂ) ಪ್ರೊ.ನಾರಾಯಣ ಎಸ್ ಜಾದವ್, ಆಯುಷ್ ಆಯುಕ್ತ ವಿಪಿನ್ ಸಿಂಗ್, ಆರ್‌ಜಿಯುಎಚ್‌ಎಸ್‌ನ ಕುಲಪತಿ ಡಾ. ಬಿ.ಸಿ.ಭಗವಾನ್, ಎಂಐಎಎಂಎಸ್‌ಸಿಎಚ್ ಪ್ರಾಂಶುಪಾಲ ಡಾ. ಎನ್.ವಿ.ಕೃಷ್ಣಮೂರ್ತಿ, ಎಂಇಟಿ ಅಧ್ಯಕ್ಷ (ಮಂಡ್ಯ) ಡಾ.ಬಿ.ಜಿ.ನರೇಶ್ ಕುಮಾರ್, ಎಸ್‌ಡಿಎಂಐಎಂಡಿ ನಿರ್ದೇಶಕ ಡಾ.ಎಸ್.ಎನ್.ಪ್ರಸಾದ್, ಸಿಜಿಓಐ ಮ್ಯಾನೇಜಿಂಗ್ ಡೈರೆಕ್ಟರ್ ಡಾ. ಸರಳ ಚಂದ್ರಶೇಖರ್ ಇದ್ದರು.

ಬಾಂಗ್ಲಾದಲ್ಲಿ ಹಿಂದೂಗಳ ನರಮೇಧ ಖಂಡಿಸಿ

ಮೈಸೂರಲ್ಲಿ ಹಿಂದೂಪರ ಸಂಘಟನೆಗಳಿಂದ ಪಂಜಿನ ಮೆರವಣಿಗೆ



ಬಾಂಗ್ಲಾದೇಶದಲ್ಲಿ ಹಿಂದೂಗಳ ನರಮೇಧ ಖಂಡಿಸಿ ಹಿಂದೂಪರ ಸಂಘಟನೆಗಳು ಮೈಸೂರಿನಲ್ಲಿ ಪಂಜಿನ ಮೆರವಣಿಗೆ ನಡೆಸಿತು.

ಮೈಸೂರು, ಡಿ.26(ಎಸ್‌ಪಿಎನ್)– ನೆರೆಯ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರಾಗಿರುವ ಹಿಂದೂಗಳ ನರಮೇಧ ಹಾಗೂ ಹಿಂದೂ ದೇವಾಲಯಗಳ ಮೇಲಿನ ದಾಳಿ ಖಂಡಿಸಿ ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಹಿಂದೂ ಪರ ಸಂಘಟನೆಗಳು ಶುಕ್ರವಾರ ಪಂಜಿನ ಮೆರವಣಿಗೆ ನಡೆಸಿದವು.

ಮೈಸೂರಿನ ಪುರಭವನದ ಮುಂಭಾಗದಲ್ಲಿ ಮೈಸೂರು ರಕ್ಷಣಾ ವೇದಿಕೆ, ಶ್ರೀ ರಾಮಸೇನೆ, ಯುವ ಬ್ರಿಗೇಡ್, ವೀರ ಸಾವರ್ಕರ್ ಯುವ ಬಳಗ, ರಾಜಸ್ತಾನಿ ವಿಷ್ಣು ಸಮಾಜ, ಮೈಸೂರು ಹನುಮಂತೋತ್ಸವ ಸಮಿತಿ, ಹಿಂದೂ ಮಹಾಸಭಾ, ಟೀಮ್ ಮೈಸೂರು, ಹಿಂದೂ ಜಾಗರಣ ವೇದಿಕೆ, ವಿಶ್ವ ಹಿಂದು ಪರಿಷತ್ ಸೇರಿದಂತೆ ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಪಂಜಿನ ಮೆರವಣಿಗೆ ನಡೆಸಲಾಯಿತು.

ಈ ವೇಳೆ 'ನಾವೆಲ್ಲಾ ಒಂದು, ನಾವೆಲ್ಲಾ ಹಿಂದೂ', 'ಏನೇ ಬರಲಿ ಒಗ್ಗಟ್ಟಿರಲಿ' ಸೇರಿದಂತೆ ವಿವಿಧ ಘೋಷಣೆಗಳನ್ನು ಕೂಗುತ್ತಾ, ಪುರಭವನದಿಂದ ಪ್ರಾರಂಭವಾದ ಪಂಜಿನ ಮೆರವಣಿಗೆ, ದೇವರಾಜ ಮಾರುಕಟ್ಟೆ ಮುಂಭಾಗದ ವಾಸವಿ ವೃತ್ತ, ದೇವರಾಜ ಅರಸು ರಸ್ತೆ ಮೂಲಕ ಸಾಗಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದವರೆಗೂ ಸಾಗಿತು.

ಬಾಂಗ್ಲಾದೇಶದಲ್ಲಿ ಚುನಾವಣೆ ಸನ್ನಿಹಿತವಾಗಿರುವ ಸಂದರ್ಭದಲ್ಲಿ ನಡೆಯುತ್ತಿರುವ ಹಿಂಸಾಚಾರವನ್ನು ಅಂತರರಾಷ್ಟ್ರೀಯ ಸಮೂಹ ಖಂಡಿಸಬೇಕಿದೆ. ಈ ಭಯೋತ್ಪಾದನೆಯ ವಿರುದ್ಧ ಒಟ್ಟಾಗಿ ನಿಂತು ಮುಕ್ತ ಚುನಾವಣೆ ನಡೆಯುವ ವಾತಾವರಣ ನಿರ್ಮಿಸಲು ಒತ್ತಡ ತರಬೇಕಾಗಿದ್ದು, ಹಿಂದುಗಳ ಪಾಲಿಗೆ ಬಾಂಗ್ಲಾದೇಶ ಪ್ರತಿನಿತ್ಯವೂ ನರಕ ಸದೃಶವಾಗಿದೆ. ಹಿಂದೂಗಳ ನರಮೇಧದಲ್ಲಿ ಪಾಕಿಸ್ತಾನದ ಕೈವಾಡವಿರುವುದನ್ನು ಸಹ ತಳ್ಳಿ ಹಾಕುವಂತಿಲ್ಲ ಎಂದು ಅನುಮಾನ ವ್ಯಕ್ತಪಡಿಸಿದರು.

ಮೆರವಣಿಗೆಯಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಆದಿತ್ಯ ಆಸ್ಪತ್ರೆಯ ಡಾ.ಚಂದ್ರಶೇಖರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಜಿಲ್ಲಾಧ್ಯಕ್ಷ ಡಿ.ಟಿ.ಪ್ರಕಾಶ್, ಅವಧೂತ ಅರ್ಜುನ್ ಗುರೂಜಿ, ಹಿಂದೂಪರ ಸಂಘಟನೆಗಳ ಒಕ್ಕೂಟದ ಸಂಚಾಲಕರಾದ ಮೈ.ಕಾ. ಪ್ರೇಮ್ ಕುಮಾರ್, ಸಹ-ಸಂಚಾಲಕರಾದ ಸಂಜಯ್, ರಾಕೇಶ್ ಭಟ್, ನಂಜನಗೂಡು ಚಂದ್ರು ಸೇರಿದಂತೆ ಇತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ. ಪಿಳ್ಳಪ್ಪ ರವರ ಪತ್ನಿ ಶ್ರೀಮತಿ. ಗಾಯಿತ್ರಿ ರವರು ನನ್ನ ಕಕ್ಷಿದಾರರಿಗೆ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧ–ರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳು, ಖಾಸಗಿ ವ್ಯಕ್ತಿಗಳು, ಶಾಸನಬದ್ಧ ಅಧಿಕಾರ ಉಳ್ಳ ಕಛೇರಿಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದು ಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವರುಣಾ ಗ್ರಾಮದಲ್ಲಿರುವ ಖುಷ್ಕಿ ಜಮೀನಿನ ಸರ್ವೆ ನಂ. 121/2, ರಲ್ಲಿ, ಒಟ್ಟು ವಿಸ್ತೀರ್ಣ 02 ಎಕರೆ ಪೈಕಿ ಪಶ್ಚಿಮ ಭಾಗದ 01 ಎಕರೆ ಜಮೀನಿಗೆ ಚಕ್ಕುಬಂದಿ. ಪೂರ್ವಕ್ಕೆ – ಸರ್ವೆ ನಂ. 121/2 ರ ಉಳಿಕೆ ಜಮೀನು, ಪಶ್ಚಿಮಕ್ಕೆ – ಸರ್ವೆ ನಂ. 121/1 & 129, ರ ಜಮೀನು ಉತ್ತರಕ್ಕೆ – ರಸ್ತೆ ಮತ್ತು ದಕ್ಷಿಣಕ್ಕೆ – ಸರ್ವೆ ನಂ. 114 ರ ಜಮೀನು.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರೀ ರಸ್ತೆ,
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com

IN THE COURT OF THE II ADDL, DISTRICT JUDGE AT MYSORE

COM. O.S.NO. 137 OF 2024

PLAINTIFF: STATE BANK OF INDIA BRINDAVAN EXTENSION BRANCH, MYSORE, REPRESENTED BY ITS BRANCH MANAGER

VS

DEFENDANT: SRI M. KAVAN

TO

SRI M.KAVAN, AGED 26 YEARS, S/O N.R.MADHUSUDAN, NO.176, 5TH CROSS, VIDYANAGAR, MYSORE-570011,

SUIT SUMMONS TO DEFENDANT BY WAY OF PAPER PUBLICATION

Whereas the Plaintiff Bank has filed the above suit against the defendant for recovery of the sum of Rs. 6,19,463-20 ps. only with court costs and current interest from the date of suit till realization. The defendant is hereby called upon to appear before this Hon'ble Court on 03.02.2026 at 11 a.m., personally or through an Advocate to answer the claim of the plaintiff. On failure to appear, the above case will be proceeded further in the absence of the defendant.

GIVEN UNDER MY HAND AND SEAL ON THIS THE 24DAY DECEMBER 2025, AT MYSORE.

BY ORDER OF THE COURT
SD/- CHIEF ADMINISTRATIVE OFFICER, PRINCIPAL DISTRICT JUDGE COURT, MYSORE.

SD/- GOWRISHANKARA.N.
ADVOCATE FOR THE PLAINTIFF,
NO.2368/2, 2ND FLOOR, NEW KANTHARAJEURS ROAD,
MYSORE-570014.

ಕರ್ನಾಟಕ ಸರ್ಕಾರ

ಪಟ್ಟಣ ಪಂಚಾಯಿತಿ ಕಾರ್ಯಾಲಯ, ರಮ್ಮನಹಳ್ಳಿ, ಮೈಸೂರು ಜಿಲ್ಲೆ.

e-mail : ka.rammanahalli.tp@gmail.com, web:www.rammanahallitown.mrc.gov.in

ಸಂ:ಪಪಂರ/ಜೆ.ಇ.03/ಟೆ.ಪ್ರ/ಪಿ.ಆರ್–03/2025–26 ದಿನಾಂಕ: 22.12.2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ ಬೀದಿ ನಾಯಿಗಳನ್ನು ಹಿಡಿದು ಸಂತಾನ ಹರಣ ಚಿಕಿತ್ಸೆ ಮಾಡಲು ಮತ್ತು ಎಸ್.ಎಫ್.ಸಿ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಅನುದಾನದಲ್ಲಿ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಪ.ಜಾತಿ ಮತ್ತು ಪ.ಪಂಗಡ ಮಹಿಳೆಯರಿಗೆ ಹೊಲಿಗೆ ತರಬೇತಿ ನೀಡಲು 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಕಾಮಗಾರಿಗಳನ್ನು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನ **https://kppp.karnataka.gov.in** ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆಂದು ತಿಳಿಸಿದೆ.

1. ಟೆಂಡರ್‌ನ್ನು ಸಲ್ಲಿಸಲು ಕಡೆಯ ದಿನಾಂಕ: 10.01.2025 ಸಂಜೆ 5.30 ಗಂಟೆಯವರೆಗೆ 2. ಟೆಂಡರ್ ತೆರೆಯುವ ದಿನಾಂಕ: 13.01.2025ರಂದು ಕಛೇರಿಯ ಅವಧಿಯಲ್ಲಿ ಅಥವಾ ಮುಂದೆ ಸೂಚಿಸುವ /ನಿಗಧಿಪಡಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರಸಂ	ವಿವರ	ಅಂದಾಜು ಮೊತ್ತ(ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ ರೂಗಳಲ್ಲಿ	ಷರ
1.	DMA/2025-26/SE6890	10.00	25,000/-	
2.	DMA/2025-26/SE6922	2.00	5,000/-	

ಸೂಚನೆ:1. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳು ಇದ್ದರೆ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಆದರೆ ಕೆ.ಪಿ.ಪಿ.ಪಿ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು https://kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ

ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ

DIPR/DDMYS/1430/KSMCA/813/2025-26

ಮೈಸೂರು ಮಿತ್ರ ಶನಿವಾರ 27 ಡಿಸೆಂಬರ್ 2025

ಗುರುಪುರ ಬಳಿ ಹುಲಿ ದಾಳಿಗೆ ಜಾನುವಾರು ಬಲಿ

- ಗ್ರಾಮಸ್ಥರಿಂದ ರಸ್ತೆ ತಡೆ, ಅರಣ್ಯಾಧಿಕಾರಿಗಳ ವಿರುದ್ಧ ಆಕ್ರೋಶ
- ತಕ್ಷಣದಿಂದಲೇ ಕೂಂಬಿಂಗ್ ಕಾರ್ಯಾಚರಣೆ, ಕೂಡಲೇ ಪರಿಹಾರದ ಭರವಸೆ




ನಿಲುವಾಗಿಲಿನಲ್ಲಿ ಹುಲಿ ದಾಳಿಗೆ ಬಲಿಯಾದ ಹಸು.

ಹನಗೋಡು, ಡಿ.26– ಹನಗೋಡು ಹೋಬಳಿಯ ಗುರುಪುರ ಗ್ರಾಮದ ಕೆರೆ ಬಳಿ ಹುಲಿ ದಾಳಿ ನಡೆಸಿ ಜಾನುವಾರುಗಳನ್ನು ಬಲಿ ತೆಗೆದುಕೊಂಡಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ವಿರುದ್ಧ ಆಕ್ರೋಶಗೊಂಡ ಹಲೇವಾರಂಚಿ, ಗುರುಪುರ ಗ್ರಾಮಸ್ಥರು ಗುರುಪುರ ಮುಖ್ಯ ರಸ್ತೆಯಲ್ಲಿ ದಿಡೀರ್ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು.

ಹಲೇವಾರಂಚಿಯ ಮುನ್ನಾ ಅವರಿಗೆ ಸೇರಿದ ಲಕ್ಷ ರೂ. ಬೆಲೆ ಬಾಳುವ ಎತ್ತನ್ನು ಶುಕ್ರವಾರ ಮಧ್ಯಾಹ್ನವೇ ಗುರುಪುರದ ಕೆರೆ ಬಳಿಯ ಜಮೀನಿನಲ್ಲಿ ಹುಲಿ ಕೊಂದು ಹಾಕಿತ್ತು. ದನ ಮೇಯಿಸಲು ತೆರಳಿದ್ದ ಮುನ್ನಾರ ಪುತ್ರ ಮಹಮದ್ ಫಯಾಜ್ ಶುಕ್ರವಾರವಾದ್ದರಿಂದ ಪ್ರಾರ್ಥನೆಗೆ ತೆರಳಿದ್ದರಿಂದ ಆತ ಹುಲಿ ದಾಳಿಯಿಂದ ಪಾರಾಗಿದ್ದಾನೆ.



ಹುಲಿ ದಾಳಿಗೆ ಬಲಿಯಾದ ಹಸುವಿನ ಕಳೇಬರವನ್ನು ಟ್ರ್ಯಾಕ್ಟರ್‌ನಲ್ಲಿಟ್ಟು ಪ್ರತಿಭಟನೆ ನಡೆಸಿದರು.



ಗುರುಪುರದಲ್ಲಿ ರಸ್ತೆ ತಡೆ ವೇಳೆ ಅರಣ್ಯಾಧಿಕಾರಿಗೆ ತರಾಟೆ ತೆಗೆದುಕೊಂಡ ರೈತರು.

ಗ್ರಾಮಸ್ಥರ ಪ್ರತಿಭಟನೆ: ತಿಂಗಳ ಹಿಂದಷ್ಟೆ ಗುರುಪುರಕ್ಕೆ ಸಮೀಪದ ಗೌಡನಕಟ್ಟೆ ಬಳಿ ತಾಯಿ ಹುಲಿ, ನಾಲ್ಕು ಮರಿಗಳನ್ನು ಸೆರೆ ಹಿಡಿಯಲಾಗಿತ್ತು. ಅಲ್ಲದೆ ಸಮೀಪದ ಹುಣಸೆಕಟ್ಟೆ ಹಳ್ಳದ ಬಳಿಯ ಟಿಬೆಟ್ ಕ್ಯಾಂಪ್ ಬಳಿ ನಾಲ್ಕು ದಿನಗಳ ಹಿಂದಷ್ಟೆ ಹಸುವನ್ನು ಕೊಂದು ಹಾಕಿತ್ತು. ಇದರಿಂದ ಹುಲಿಯು ಯಾವಾಗ ಮನುಷ್ಯರನ್ನು ಬಲಿ ಪಡೆಯುವುದೋ ಎಂದು ಹಾಗೂ ಅರಣ್ಯ ಇಲಾಖೆ ಹುಲಿ ಹಾವಳಿ ತಪ್ಪಿಸುವಲ್ಲಿ, ಹುಲಿಗಳನ್ನು ಸೆರೆ ಹಿಡಿಯುವಲ್ಲಿ ವಿಫಲರಾಗಿದ್ದಾರೆ. ಸಕಾಲದಲ್ಲಿ ಪರಿಹಾರವೂ ನೀಡಿಲ್ಲ, ಘಟನೆ ನಡೆದಾಗ ಕರೆ ಮಾಡಿದರೂ ಅರಣ್ಯ ಇಲಾಖೆ ಅಧಿಕಾರಿಗಳು ಸಕಾಲಕ್ಕೆ ಬರಲ್ಲವೆಂದು ಆಕ್ರೋಶಗೊಂಡ ಗ್ರಾಮಸ್ಥರು ನೂರಾರು ಸಂಖ್ಯೆಯಲ್ಲಿ ಗುರುಪುರ ಬಳಿಯ ಹೆದ್ದಾರಿಯಲ್ಲಿ ಹುಲಿ ಸಾಯಿಸಿದ್ದ ಹಸುವಿನ ಕಳೇಬರವನ್ನು ಟ್ರ್ಯಾಕ್ಟರ್‌ನಲ್ಲಿ ತಂದು ಅರ್ಧ ಗಂಟೆಗೂ ಹೆಚ್ಚು ಕಾಲ ದಿಡೀರ್ ರಸ್ತೆ ತಡೆ ನಡೆಸಿದರು.

ಅರಣ್ಯ ಇಲಾಖೆ ವಿರುದ್ಧ ಧಿಕ್ಕಾರ ಕೂಗಿದರು. ಇದರಿಂದಾಗಿ ಎರಡೂ ಕಡೆ ನೂರಾರು ವಾಹನಗಳು ಸಾಲುಗಟ್ಟಿ ನಿಂತಿದ್ದವು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಇನ್ಸ್‌ಪೆಕ್ಟರ್ ಮುನಿಯಪ್ಪ, ಎಸ್.ಐ.ರಾಧಾ ಸೇರಿದಂತೆ ಸಿಬ್ಬಂದಿ ಮನವೊಲಿಸಿದರೂ ಅರಣ್ಯಾಧಿಕಾರಿಗಳು ಸ್ಥಳಕ್ಕಾಗಮಿಸುವ ವರೆಗೂ ಪ್ರತಿಭಟನೆ ಹಿಂಪಡೆಯಲ್ಲವೆಂದು ಪಟ್ಟು ಹಿಡಿದರು.

ಸ್ಥಳಕ್ಕೆ ಪ್ರಾದೇಶಿಕ ಅರಣ್ಯ ವಿಭಾಗದ ಆರ್.ಎಫ್.ಓ. ನಂದಕುಮಾರ್, ಡಿ.ಆರ್.ಎಫ್.ಓ.ಮಲ್ಲಿಕಾರ್ಜುನ್ ಹಾಗೂ ಸಿಬ್ಬಂದಿ ಬಂದ ವೇಳೆ ಹುಲಿ ಕಾಟತಪ್ಪಿಸುವಲ್ಲಿ ವಿಫಲವಾಗಿದ್ದೀರಾ, ಪರಿಹಾರವೂ ಸರಿಯಾಗಿ ಕೊಡಲ್ಲ ಎಂದು ತರಾಟೆ ತೆಗೆದುಕೊಂಡರು. ಈ ವೇಳೆ ಶೀಘ್ರವೇ ಪರಿಹಾರ ಕೊಡಿಸಲಾಗುವುದು, ಇಂದಿನಿಂದಲೇ ಕೂಂಬಿಂಗ್ ನಡೆಸಲಾಗುವುದೆಂಬ ಭರವಸೆ ಇತ್ತರು. ನಂತರ ರೈತರ ಮನವೊಲಿಸಿ ರಸ್ತೆ ತಡೆಯನ್ನು ತೆರವುಗೊಳಿಸಿ, ವಾಹನಗಳ ಸುಗಮ ಸಂಚಾರಕ್ಕೆ ಪೊಲೀಸರು ಅವಕಾಶ ಮಾಡಿಕೊಟ್ಟರು.

ಪ್ರತಿಭಟನೆಯಲ್ಲಿ ಗ್ರಾ.ಪಂ.ಮಾಜಿ ಅಧ್ಯಕ್ಷ ಪ್ರಶಾಂತ್, ಗ್ರಾಮಸ್ಥರಾದ ಶಿವಣ್ಣ, ಮುನ್ನ, ಖಾಲಿದ್, ಆಲಿಜಾನ್, ಮುಬಾರಕ್, ಪ್ರಕಾಶ್, ಬಸವಶೆಟ್ಟಿ, ಬೀರೇಗೌಡ, ಇಸ್ರಾರ್ ಅಹಮದ್ ಸೇರಿದಂತೆ ಇನ್ನೂರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಮೈಸೂರಿನ ಯೋಗ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಜ.1ರಂದು ಭಕ್ತಾದಿಗಳಿಗೆ 2 ಲಕ್ಷ ಲಡ್ಡು ವಿತರಣೆ

ಲೋಕ ಕಲ್ಯಾಣದೊಂದಿಗೆ ಹೊಸ ವರ್ಷವನ್ನು ಸಂಭ್ರಮದಿಂದ ಸ್ವಾಗತಿಸಲು ಸಿದ್ಧತೆ

ಮೈಸೂರು, ಡಿ.26(ಜಿಎ)– ಹೊಸ ವರ್ಷವನ್ನು ಸ್ವಾಗತಿಸಲು ಸಾಂಸ್ಕೃತಿಕ ನಗರಿ ಮೈಸೂರು ಸಜ್ಜಾಗುತ್ತಿದ್ದು, ಲೋಕ ಕಲ್ಯಾಣದೊಂದಿಗೆ ಹೊಸ ವರ್ಷವನ್ನು ಸಂಭ್ರಮದಿಂದ ಸ್ವಾಗತಿಸಲು ವಿಜಯನಗರದ ಶ್ರೀ ಯೋಗ ನರಸಿಂಹಸ್ವಾಮಿ ದೇವಸ್ಥಾನದಲ್ಲಿ 2 ಲಕ್ಷ ಲಡ್ಡುಗಳನ್ನು ತಯಾರಿಸಲಾಗುತ್ತಿದೆ.

ಶ್ರೀ ಯೋಗ ನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ದೇವಸ್ಥಾನದ ಸಂಸ್ಥಾಪಕರಾದ ಪ್ರೊ.ಭಾಷ್ಯಂ ಸ್ವಾಮೀಜಿ ಈ ವಿಷಯ ತಿಳಿಸಿ, ಜ.1ರಂದು ದೇವಸ್ಥಾನಕ್ಕೆ ಬರುವ ಭಕ್ತರಿಗೆ ಲಡ್ಡುಗಳನ್ನು ವಿತರಿಸಲಾಗುತ್ತಿದ್ದು, ಅದಕ್ಕಾಗಿ ತಿರುಪತಿ ಮಾದರಿಯ 2 ಲಕ್ಷ ಲಡ್ಡುಗಳು ಸಿದ್ಧವಾಗುತ್ತಿವೆ. ಅಂದು ಬೆಳಗ್ಗೆ 4 ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ ಭಕ್ತಾದಿಗಳಿಗೆ ಲಡ್ಡುಗಳನ್ನು ವಿತರಿಸಲಾಗುತ್ತದೆ ಎಂದರು.

1994ರಿಂದ ಲಡ್ಡು ವಿತರಿಸುವ ಕಾರ್ಯವನ್ನು ನಡೆಸಿಕೊಂಡು ಬರಲಾಗಿದ್ದು, ಈ ವರ್ಷವೂ ನೂತನ ವರ್ಷಾರಂಭದ ಅಂಗವಾಗಿ ಜ.1ರ ಬೆಳಗ್ಗೆ 4 ಗಂಟೆಯಿಂದ ಪ್ರಾರಂಭಿಸಿ ಶ್ರೀ ಯೋಗಾನರಸಿಂಹ ಸ್ವಾಮಿಯವರಿಗೆ ವಿಶೇಷ ಅಲಂಕಾರ ಮತ್ತು ಶ್ರೀರಂಗ, ಮಧುರೈ ಕ್ಷೇತ್ರದಿಂದ ತರಿಸಿರುವ ವಿಶೇಷ ತೋಮಾಲೆ ಮತ್ತು ಸ್ವರ್ಣಪುಷ್ಪದಿಂದ ಶ್ರೀಸ್ವಾಮಿಗೆ ಸಹಸ್ರನಾಮಾರ್ಚನೆ ಮತ್ತು ದೇವಾಲಯದ ಉತ್ಸವ ಮೂರ್ತಿಯಾದ ರಂಗನಾಥಸ್ವಾಮಿಗೆ ದೇವಾಲಯದ ಆವರಣದಲ್ಲಿ ಏಕಾದಶ ಪ್ರಾಕಾರೋತ್ಸವ ಹಾಗೂ 50 ಕ್ವಿಂಟಾಲ್ ಪುಳಿಯೋಗರೆ ನೈವೇದ್ಯ ಮಾಡಲಾಗುತ್ತಿದ್ದು, ದೇವಾಲಯಕ್ಕೆ ಆಗಮಿಸುವ ಎಲ್ಲಾ ಭಕ್ತಾದಿಗಳಿಗೆ ಎರಡು ಲಕ್ಷ ತಿರುಪತಿ ಮಾದರಿಯ ಲಡ್ಡು ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅವರು ವಿವರಿಸಿದರು.

ಲೋಕ ಕಲ್ಯಾಣಾರ್ಥವಾಗಿ, ದೇಶದ ಜನರ ಒಳಿತಿಗಾಗಿ, ಸರ್ವರಿಗೂ ಸುಖ, ಶಾಂತಿ ನೆಮ್ಮದಿ ದೊರೆಯಲಿ ಎಂದು ಪ್ರಾರ್ಥಿಸಲು ಈ ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವಿಶ್ವಶಾಂತಿ, ಜಾತೀಯತೆ, ಮತೀಯತೆ ತೊಲಗಿಸಿ ಸಮಾನತೆ, ಸರ್ವಧರ್ಮ ಸಾಮರಸ್ಯತೆ ಆಚರಿಸುವ ಸಲುವಾಗಿ ಹೊಸ ವರ್ಷಾಚರಣೆ ಮಾಡಲಾಗುತ್ತಿದೆ.



ಶ್ರೀ ಯೋಗ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಸಿದ್ಧಗೊಳ್ಳುತ್ತಿರುವ ಲಡ್ಡುಗಳನ್ನು ದೇವಸ್ಥಾನದ ಸಂಸ್ಥಾಪಕರಾದ ಪ್ರೊ.ಭಾಷ್ಯಂ ಸ್ವಾಮೀಜಿ ವೀಕ್ಷಿಸಿದರು. ಈ ಸಂದರ್ಭದಲ್ಲಿ ನಟ ದಿವಂಗತ ಡಾ.ರಾಜ್‌ಕುಮಾರ್ ಪುತ್ರಿ ಲಕ್ಷ್ಮಿ, ಅಳಿಯ ಎಸ್.ಎ.ಗೋವಿಂದರಾಜು, ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಲಡ್ಡು ತಯಾರಿಕೆಗೆ ಬಳಸಿರುವ ಸಾಮಾಗ್ರಿಗಳು

ಲಡ್ಡು ತಯಾರಿಕೆಗೆ 100 ಕ್ವಿಂಟಾಲ್ ಕಡ್ಲೆಹಿಟ್ಟು, 200 ಕಿಂಟಾಲ್ ಸಕ್ಕರೆ, 10 ಸಾವಿರ ಲೀಟರ್ ಖಾದ್ಯ ತೈಲ, 500 ಕೆ.ಜಿ ಗೋಡಂಬಿ, 500 ಕೆ.ಜಿ ಒಣದ್ರಾಕ್ಷಿ, 250 ಕೆ.ಜಿ ಬಾದಾಮಿ, 1 ಸಾವಿರ ಕೆ.ಜಿ ಡೈಮಂಡ್ ಸಕ್ಕರೆ, 2 ಸಾವಿರ ಕೆ.ಜಿ ಬೂರಾ ಸಕ್ಕರೆ, 50 ಕೆ.ಜಿ ಪಿಸ್ತಾ, 50 ಕೆ.ಜಿ ಏಲಕ್ಕಿ, 50 ಕೆ.ಜಿ ಜಾಕಾಯಿ ಮತ್ತು ಜಾಪತ್ರೆ, 50 ಕೆ.ಜಿ ಪಚ್ಚೆ ಕರ್ಪೂರ, 200 ಕೆ.ಜಿ ಲವಂಗಗಳನ್ನು ಬಳಸಲಾಗುತ್ತಿದೆ.

ವರ್ಷವನ್ನು ಒಳ್ಳೆಯ ಕಾರ್ಯದ ಮೂಲಕ ಆರಂಭಿಸಬೇಕಿರುವ ಹಿನ್ನೆಲೆಯಲ್ಲಿ ವಿಶೇಷ ಸಂಕಲ್ಪ ಮಾಡಿ ಸಾರ್ವಜನಿಕರಿಗೆ ಸಿಹಿ ವಿತರಿಸಲಾಗುತ್ತಿದೆ ಎಂದು ತಿಳಿಸಿದರು.


ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಮಾತನಾಡಿ, ಡಾ.ರಾಜಕುಮಾರ್ ದಂಪತಿಗಳ ಪ್ರೇರಣೆಯಿಂದ 1994ರಲ್ಲಿ 1 ಸಾವಿರ ಲಡ್ಡು ವಿತರಣೆಯೊಂದಿಗೆ ಆರಂಭವಾದ ಈ ಸೇವೆ ಇಂದು 2 ಲಕ್ಷ ಲಡ್ಡು ವಿತರಣೆಯೊಂದಿಗೆ ನಿರಾತಂಕವಾಗಿ ನಡೆಯುತ್ತಿದೆ. ಜ.1ರಂದು ಭಕ್ತರು ದೇವಸ್ಥಾನಕ್ಕೆ ಆಗಮಿಸಿ ದೇವರ ದರ್ಶನ ಪಡೆಯುವುದರ ಜತೆಗೆ ಲಡ್ಡು ಪ್ರಸಾದ ಸ್ವೀಕರಿಸಬೇಕು ಎಂದರು.

ತಿರುಪತಿ ಮಾದರಿಯ 2 ಲಕ್ಷ ಲಡ್ಡು: ಈ ವರ್ಷ ಅಂದಾಜು 2 ಕೆಜಿ ತೂಕದ 10 ಸಾವಿರ ಲಡ್ಡುಗಳು ಹಾಗೂ 150 ಗ್ರಾಂ ತೂಕದ 2 ಲಕ್ಷ ಲಡ್ಡುಗಳನ್ನು ದೇವಾಲಯಕ್ಕೆ ಬರುವ ಎಲ್ಲಾ ಭಕ್ತಾದಿಗಳಿಗೆ ಯಾವುದೇ ಜಾತಿ, ಮತ ಭೇದವಿಲ್ಲದೆ ಉಚಿತವಾಗಿ ವಿತರಿಸಲಾಗುವುದು. ಲಡ್ಡು ಪ್ರಸಾದವನ್ನು ವಿಶೇಷವಾಗಿ 150 ಮಂದಿ ನುರಿತ ಬಾಣಸಿಗರಿಂದ ತಯಾರಿಸಲಾಗಿದ್ದು, ಡಿ.20ರಿಂದ ಪ್ರಾರಂಭಿಸಿ 31ರವರೆಗೂ ಲಡ್ಡು ತಯಾರಿ ಕಾರ್ಯ ನಡೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಡಾ.ರಾಜ್‌ಕುಮಾರ್ ಪುತ್ರಿ ಲಕ್ಷ್ಮೀ, ಅಳಿಯ ಗೋವಿಂದರಾಜು, ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕೇರಳದಲ್ಲಿ ಇತಿಹಾಸ ಸೃಷ್ಟಿಸಿದ ಬಿಜೆಪಿ

ತಿರುವನಂತಪುರಂನ ಮೇಯರ್ ಆಗಿ ವಿ.ವಿ. ರಾಜೇಶ್ ಆಯ್ಕೆ



ತಿರುವನಂತಪುರಂ, ಡಿ.26– ಬಿಜೆಪಿಯಿಂದ ಮೊದಲ ಬಾರಿಗೆ ತಿರುವನಂತಪುರಂ ನಗರ ಮೇಯರ್ ಆಗಿ ಆಯ್ಕೆಯಾಗುವ ಮೂಲಕ ವಿವಿ ರಾಜೇಶ್ ಇತಿಹಾಸ ನಿರ್ಮಿಸಿದ್ದಾರೆ. 49 ವರ್ಷದ ರಾಜೇಶ್ ತಿರುವನಂತಪುರ ಸಿಟಿ ಕಾರ್ಪೋರೇಷನ್ ನಲ್ಲಿ ನಾಲ್ಕು ದಶಕಗಳ ಎಡ ಪ್ರಜಾಸತ್ತಾತ್ಮಕ ರಂಗದ (ಎಲ್‌ಡಿಎಫ್) ಆಳ್ವಿಕೆಗೆ ಅಂತ್ಯ ಹಾಡಿದ್ದಾರೆ. ರಾಜೇಶ್ ಚುನಾವಣೆಯಲ್ಲಿ 51 ಮತಗಳನ್ನು ಪಡೆದರು. ಎರಡು ಮತಗಳನ್ನು ಅಮಾನ್ಯವೆಂದು ಘೋಷಿಸಲಾಯಿತು.

ಪ್ರಮಾಣವಚನ ಸಮಾರಂಭವನ್ನು ವೀಕ್ಷಿಸಲು ನೂರಾರು ಪಕ್ಷದ ಕಾರ್ಯಕರ್ತರು ಕಾರ್ಪೋರೇಷನ್ ಹಾಲ್ ಮತ್ತು ಅದರ ಆವರಣದಲ್ಲಿ ಜಮಾಯಿಸಿದ್ದರು.

ಇತ್ತೀಚಿನ ಚುನಾವಣೆಯಲ್ಲಿ ಒಟ್ಟು 101 ಸ್ಥಾನಗಳಲ್ಲಿ ಐವತ್ತು ಸ್ಥಾನಗಳನ್ನು ಪಡೆಯುವ ಮೂಲಕ ಬಿಜೆಪಿ ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಇಬ್ಬರು ಸ್ವತಂತ್ರ ಅಭ್ಯರ್ಥಿಗಳಲ್ಲಿ ಒಬ್ಬರಾದ ಕಣ್ಣಮೂಲ ವಾರ್ಡ್‌ನಿಂದ ಗೆದ್ದ ಪಟ್ಟೂರ್ ರಾಧಾಕೃಷ್ಣನ್ ಅವರ ಬೆಂಬಲವನ್ನು ಪಡೆಯುವಲ್ಲಿ ಬಿಜೆಪಿ ಯಶಸ್ವಿಯಾಯಿತು , ಸರಳ ಬಹುಮತ ಪಡೆಯಿತು. ಎಲ್‌ಡಿಎಫ್ ಮತ್ತು ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಪ್ರಜಾಸತ್ತಾತ್ಮಕ ರಂಗ ಕ್ರಮವಾಗಿ 29 ಮತ್ತು 19 ಸ್ಥಾನಗಳನ್ನು ಗೆದ್ದವು. ಕಾನೂನು ಪದವೀಧರರಾದ ವಿ.ವಿ. ರಾಜೇಶ್ ಪ್ರಸ್ತುತ ಬಿಜೆಪಿಯ ರಾಜ್ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಮೂರನೇ ಪುಟದಿಂದ

ಮಂಜುಳಾ, ಬೆಂಗಳೂರಿನ ಲಕ್ಷ್ಮಿ ಸಾವು

ಕಡೆ ಹೋಗುತ್ತಿದ್ದಾಗ ಹೀಲಿಯಂ ಸಿಲಿಂಡರ್ ಸ್ಫೋಟ ಸಂಭವಿಸಿ ತೀವ್ರವಾಗಿ ಗಾಯಗೊಂಡಿದ್ದರು.

ಒಟ್ಟಿಗೆ ಊಟ ಮಾಡಿದ್ದೆವು: ಮಂಜುಳ ಅವರ ಸಹೋದರ ನಾಗೇಂದ್ರ, ಪತ್ರಕರ್ತರೊಂದಿಗೆ ಮಾತನಾಡಿ, ನೆನ್ನೆ ಬೆಳಗ್ಗೆ ಕುಟುಂಬ ಸದಸ್ಯರೆಲ್ಲರೂ ಒಟ್ಟಿಗೆ ಊಟ ಮಾಡಿದ್ದೆವು. ಹೂವು ಖರೀದಿಸಲು ಮೈಸೂರಿಗೆ ಬಂದು, ಬಸ್ ನಿಲ್ದಾಣಕ್ಕೆ ನಡೆದುಕೊಂಡು ಹೋಗುವಾಗ ಈ ದುರ್ಘಟನೆಗೆ ಒಳಗಾಗಿದ್ದಾರೆ. ನಮಗೆ ಇಂದು ಬೆಳಗ್ಗೆ ವಿಷಯ ಗೊತ್ತಾಗಿ ಆಸ್ಪತ್ರೆಗೆ ಬಂದಿದ್ದೆವು. ಬೆಳಗ್ಗೆ ಐಸಿಯುನಲ್ಲಿ ಅವರನ್ನು ನೋಡಲು ಹೋಗಿದ್ದೆ. ಆಗ ಮಾತನಾಡುವ ಪ್ರಯತ್ನ ಮಾಡಿದರು. ಆದರೆ ಆಗಲಿಲ್ಲ. ಈಗ ನೋಡಿದರೆ ಸಂಜೆ ನಿಧನರಾಗಿರುವುದಾಗಿ ವೈದ್ಯರು ತಿಳಿಸಿದರು ಎಂದು ಕಂಬನಿ ಮಿಡಿದರು. ಸ್ಫೋಟದಲ್ಲಿ ಹೊಟ್ಟೆ, ಕೈ–ಕಾಲು ಸೇರಿದಂತೆ ದೇಹದ ಇನ್ನಿತರೆ ಭಾಗದಲ್ಲಿ ತೀವ್ರತರನಾದ ಗಾಯವಾಗಿ, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬೆಂಗಳೂರಿನ ಕಾಮಾಕ್ಷಿಪಾಳ್ಯದ ನಿವಾಸಿ ಲಕ್ಷ್ಮಿ ಅವರು ರಾತ್ರಿ 8.30ರ ಸುಮಾರಿನಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಇವರು ತಮ್ಮ ಮಕ್ಕಳು, ಬಂಧುಗಳೊಂದಿಗೆ ಮೈಸೂರಿಗೆ ಬಂದಿದ್ದರು.

ಘಟನೆಯ ಭೀಕರತೆ ಬಿಚ್ಚಿಟ್ಟ ಬಾಲಕಿ

ನಂತರ ಅಲ್ಲಿದ್ದ ಪೊಲೀಸರು ಆಟೋ ಚಾಲಕರೊಂದಿಗೆ ಸೇರಿ ಆಸ್ಪತ್ರೆಗೆ ಸೇರಿಸಿದರು ಎಂದು ಘಟನೆಯನ್ನು ವಿವರಿಸಿದರು.

ಬೆಂಗಳೂರಿನಿಂದ ಬಂದ ಸಂಬಂಧಿಕರು: ಗಾಯಾಳು ಲಕ್ಷ್ಮೀ ಅವರ ಪತಿ ರಾಜೇಶ್ ಬೆಂಗಳೂರಲ್ಲಿ ಆಟೋ ಚಾಲಕರಾಗಿದ್ದು, ಇಂದು ಬೆಳಗ್ಗೆ ಸಂಬಂಧಿಕರೊಂದಿಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಆಗಮಿಸಿದರು. ಈ ವೇಳೆ ರಾಜೇಶ್ ಮಾತನಾಡಿ, ಕ್ರಿಸ್‌ಮಸ್ ರಜೆ ಇದ್ದ ಕಾರಣ ಮಗಳೊಂದಿಗೆ ಪತ್ನಿ ಮೈಸೂರಿಗೆ ಬಂದಿದ್ದರು. ವಿವಿಧ ದೇವಾಲಯಕ್ಕೆ ಹೋಗಿ ದಸರಾ ವಸ್ತುಪ್ರದರ್ಶನ ವೀಕ್ಷಿಸಿ, ಅರಮನೆ ಮುಂದೆ ನಡೆದುಕೊಂಡು ಬರುವಾಗ ಸಿಲಿಂಡರ್ ಸ್ಫೋಟಿಸಿ ಗಾಯಗೊಂಡಿದ್ದಾರೆ. ಅವರ ಸ್ಥಿತಿ ಗಂಭೀರವಾಗಿದೆ ಎಂದು ವೈದ್ಯರು ತಿಳಿಸಿದರು. ಮಗಳು ಡಿಂಪಲ್‌ಗೆ ಸಣ್ಣಪುಟ್ಟ ಗಾಯವಾಗಿ ಅಪಾಯದಿಂದ ಪಾರಾಗಿದ್ದಾಳೆ ಎಂದು ಕಂಬನಿ ಮಿಡಿದರು.

ರಸಾಯನಿಕವುಳ್ಳ ವಸ್ತು ಮಾರಾಟ ನಿಷಿದ್ಧ

ಸಿಲಿಂಡರ್ ಸ್ಫೋಟದಿಂದ ಗಾಯಗೊಂಡು ಮೈಸೂರಿನ ಕೆ.ಆರ್.ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನು ಭೇಟಿಯಾಗಿ ಯೋಗ ಕ್ಷೇಮ ವಿಚಾರಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹೀಲಿಯಂ ಸಿಲಿಂಡರ್ ಸ್ಫೋಟ ಪ್ರಕರಣ ಅನಿರೀಕ್ಷಿತ ಘಟನೆ. ಆಕಸ್ಮಿಕವಾಗಿ ಸಿಲಿಂಡರ್ ಸ್ಫೋಟಿಸಿ ಸಾವು–ನೋವು ಸಂಭವಿಸಿದೆ. ಅಮೂಲ್ಯ ಜೀವಗಳು ಹೋಗಿವೆ. ಗಾಯಾಳುಗಳಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದೆ. ಉಳಿದವರು ಚೇತರಿಸಿಕೊಳ್ಳುತ್ತಿದ್ದಾರೆ. ಗಾಯಾಳುಗಳ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದು ತಿಳಿಸಿದರು.

ಮೃತ ಸಲೀಮ್ ಸೀಜನ್, ಸೀಜನ್‌ಗೆ ಅನುಗುಣವಾಗಿ ವ್ಯಾಪಾರ ಮಾಡುತ್ತಿದ್ದ. ಮೊದಲು ಐಸ್‌ಕ್ಯಾಂಡಿ, ಈಗ ಹೀಲಿಯಂ ಸಿಲಿಂಡರ್ ಬಳಸಿ ಬಲೂನ್ ಮಾರಾಟ ಮಾಡುತ್ತಿದ್ದ ಎಂದು ಮಾಹಿತಿ ಇದೆ.

ಎನ್‌ಐಎ ಮಾಹಿತಿ ಸಂಗ್ರಹ: ಹೀಲಿಯಂ ಸಿಲಿಂಡರ್ ಸ್ಫೋಟ ಪ್ರಕರಣದ ಬಗ್ಗೆ ಎನ್‌ಐಎ ಮಾಹಿತಿ ಪಡೆದುಕೊಂಡಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಇಂತಹ ಘಟನೆಗಳು ನಡೆದಾಗ ಎನ್‌ಐಎ ಮಾಹಿತಿ ಪಡೆಯುವುದು ಸಹಜ ಪ್ರಕ್ರಿಯೆ. ಅವರು ತನಿಖೆ ನಡೆಸುವುದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ಇದೊಂದು ಆಕಸ್ಮಿಕ ಘಟನೆಯಾದ್ದರಿಂದ ಸಾರ್ವಜನಿಕರು ಯಾವುದೇ ಆತಂಕ ಪಡುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಈ ಘಟನೆ ಕಟ್ಟೆಚ್ಚರದ ಕ್ರಮ: ಮುಂದಿನ ದಿನಗಳಲ್ಲಿ ಮತ್ತಷ್ಟು ಕಟ್ಟೆಚ್ಚರದ ಕ್ರಮ ಕೈಗೊಳ್ಳಲು ಪಾಠ ಕಲಿಸಿದೆ. ಹೀಲಿಯಂ ಬಳಸದೆ ಕಾಸ್ಟಿಕ್ ಸೋಡ ಅಥವಾ ಇನ್ನಿತರ ವಸ್ತುವನ್ನು ಬಳಸಿದ್ದರೆ ದೊಡ್ಡ ಮಟ್ಟದ ಅನಾಹುತವಾಗುತ್ತಿತ್ತು. ಅದೃಷ್ಟವಶಾತ್ ದೊಡ್ಡ ಮಟ್ಟದ ಅನಾಹುತ ಆಗಿಲ್ಲ. ಆದರೂ, ಇಬ್ಬರು ಮೃತಪಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಸಾರ್ವಜನಿಕ ಸ್ಥಳ ಹಾಗೂ ಪ್ರವಾಸಿ ತಾಣಗಳಲ್ಲಿ ಹೀಲಿಯಂ ಸೇರಿದಂತೆ ಅಪಾಯಕಾರಿ ರಾಸಾಯನಿಕ ವಸ್ತುಗಳನ್ನು ಬಳಸಿದ ಯಾವುದೇ ವಸ್ತುಗಳನ್ನು ಮಾರಾಟ ಮಾಡುವುದಕ್ಕೆ ಅವಕಾಶ ನೀಡದಿರುವಂತೆ ಸೂಚಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿಗಳಾದ ಆರ್.ಎನ್.ಬಿಂದುಮಣಿ, ಸುಂದರ್‌ರಾಜ್, ಕೆ.ಆರ್.ಆಸ್ಪತ್ರೆಯ ಡೀನ್ ಡಾ.ದಾಕ್ಷಾಯಿಣಿ, ವೈದ್ಯಕೀಯ ಅಧೀಕ್ಷಕರಾದ ಶೋಭ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಸೇರಿದಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮಾಲಿನ್ಯ ಪರೀಕ್ಷಾ ಕೇಂದ್ರಗಳು ಬಂದ್

ಉಂಟಾಗಿದೆ. ಇದು ನಕಲಿಯನ್ನು ತಡೆಗಟ್ಟಲು ಕಡ್ಡಾಯ ಅವಶ್ಯಕತೆಯಾಗಿದೆ. ಹಾಗಾಗಿ ಮಾಲಿನ್ಯ ಪರಿಶೀಲನಾ ಕೇಂದ್ರಗಳು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ ಎಂದಿದ್ದಾರೆ. ಈ ಬಿಕ್ಕಟ್ಟು ಸಾರಿಗೆ ಇಲಾಖೆಯೊಳಗಿನ ಆಡಳಿತಾತ್ಮಕ ಅಡಚಣೆ ಮತ್ತು ಕಳಪೆ ಸಮನ್ವಯವನ್ನು ಬಹಿರಂಗಪಡಿಸುತ್ತದೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಾವು ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಆದರೆ, ಅವರು ಒಂದಲ್ಲ ಒಂದು ಕಾರಣವನ್ನು ಉಲ್ಲೇಖಿಸಿ ಸುಮಾರು ಎರಡು ತಿಂಗಳಿನಿಂದ ಸ್ಟಿಕ್ಕರ್ ಪೂರೈಸಿಲ್ಲ. ಈಗ ಹಣಕಾಸು ಇಲಾಖೆಗೆ ಕಳುಹಿಸಿದ್ದಾರೆ. ಅಲ್ಲಿ ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂದು ಯಾರಿಗೂ ತಿಳಿದಿಲ್ಲ. ಸುಮಾರು ಒಂದು ತಿಂಗಳಿಂದ ನಾವು ತುರ್ತು ಕ್ರಮವಾಗಿ 5 ಲಕ್ಷ ಹೊಲೊಗ್ರಾಮ್ ಸ್ಟಿಕ್ಕರ್‌ಗಳನ್ನು ವಿತರಿಸಿದ್ದೇವೆ. ಆದರೆ ಈಗ ನಾವು ಅದನ್ನು ಮುಂದುವರಿಸಲು ಸಾಧ್ಯವಿಲ್ಲ ಎಂದಿದ್ದಾರೆ.

ಕೆಲವರು ನಕಲಿ ಹೊಲೊಗ್ರಾಮ್‌ಗಳನ್ನು ಬಳಸಿ ಎಮಿಷನ್ ಟೆಸ್ಟ್ ಕೇಂದ್ರಗಳನ್ನು ನಡೆಸುತ್ತಿದ್ದಾರೆ ಎಂಬ ದೂರುಗಳು ಬಂದಿವೆ. ಸ್ಟಿಕ್ಕರ್‌ಗಳ ಸರಬರಾಜು ಮಾಡುವಂತೆ ಸರ್ಕಾರದ ಮೇಲೆ ಒತ್ತಡ ಹೆಚ್ಚುತ್ತಿದೆ.

ಡಿ.ಕೆ. ಸುರೇಶ್ ಸ್ಫೂರ್ತಿ ಸಂದೇಶ

ಒತ್ತಾಯಿಸಲು ದೆಹಲಿಗೆ ತೆರಳಿದ್ದ ಶಿವಕುಮಾರ್ ನಿರಾಸೆಯಿಂದ ಹಿಂತಿರುಗಿದ್ದರು. ಈ ತಿಂಗಳ 28 ರಿಂದ ದೆಹಲಿಯಲ್ಲಿ ನಡೆಯುವ ಕಾಂಗ್ರೆಸ್ ಕಾರ್ಯಕಾರಿಣಿ (ಸಿಡಬ್ಲೂಸಿ) ಸಭೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಹ್ವಾನ ನೀಡಿದ್ದು, ಉಪಮುಖ್ಯಮಂತ್ರಿ ಅವರಿಗೆ ಕರೆ ಇಲ್ಲ. ಮಕ್ಕಳು ಅತ್ತು ತಾಯಿಯ ಗಮನ ಸೆಳೆದು ಹಾಲು ಕುಡಿಯುತ್ತವೆ. ನಿಮಗೆ ಬರಬೇಕಾದ ಅಧಿಕಾರ ಸಿಗಬೇಕಾದರೆ ರಾಜಕೀಯ ನಡೆ ಇಡಿ. ಯಾವುದೇ ಗುರಿ ತಲುಪಬೇಕು ಎಂದರೆ ವಿಶ್ರಮಿಸಬಾರದು. ಆ ಗುರಿ ಮುಟ್ಟುವವರೆಗೂ ನೀವು ಸಾಗುತ್ತಿರಬೇಕು ಎಂಬ ಸಂದೇಶ ಜಲತಾಣದಲ್ಲಿ ಪೋಸ್ಟ್ ಮಾಡಲಾಗಿದೆ.

ನನ್ನ ಹೇಳಿಕೆಗೆ ಬದ್ಧ: ಈ ಮಧ್ಯೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಯತೀಂದ್ರ, ಅಧಿಕಾರ ಯಾರಿಗೂ ಶಾಶ್ವತವಲ್ಲ. ಅಧಿಕಾರ ಹಸ್ತಾಂತರ ಕುರಿತಂತೆ ನಾನು ಇನ್ನು ಮುಂದೆ ಪ್ರತಿಕ್ರಿಯಿಸುವುದಿಲ್ಲ ಎಂದಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆದರೆ, ನಾನು ಈ ಹಿಂದೆ ಏನು ಹೇಳಿಕೆ ನೀಡಿದ್ದೆ ಅದಕ್ಕೆ ಬದ್ಧನಾಗಿದ್ದೇನೆ. ಅಧಿಕಾರ ಹಸ್ತಾಂತರ ಕುರಿತಂತೆ ನಮ್ಮ ತಂದೆ ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಅವರೇ ಹೇಳಿದ ಮೇಲೆ ನಾವು ಹೇಳುವುದೇನಿದೆ ಎಂದರು.


ಕರ್ನಾಟಕ ಪ್ರವಾಸೋದ್ಯಮಕ್ಕೆ ಹಿನ್ನಡೆ

ಆಂಡ್ ರೆಸಾರ್ಟ್ಸ್ ದಿನಕ್ಕೆ ಅಂದಾಜು 30 ಲಕ್ಷ ನಷ್ಟ ಅನುಭವಿಸುತ್ತಿದೆ. ಅರಣ್ಯ ಇಲಾಖೆಗೆ ದಿನಕ್ಕೆ ಸಫಾರಿ ಶುಲ್ಕ ರೂಪದಲ್ಲಿ ಬರುತ್ತಿದ್ದ ಅಂದಾಜು 30 ಲಕ್ಷ ಆದಾಯ ನಿಂತಿದೆ ರಾಜ್ಯದ ಖಜಾನೆಗೆ ದಿನಕ್ಕೆ ಅಂದಾಜು 60–70 ಲಕ್ಷ ಜಿಎಸ್‌ಟಿ ಹಣ ಖೋತಾ ಆಗುತ್ತಿದ್ದು, ಒಟ್ಟು ಮೂರು ಕೋಟಿ ರೂ.ಗಳಿಗಿಂತ ಹೆಚ್ಚಿನ ಆದಾಯದ ಮೇಲೆ ಪರಿಣಾಮ ಉಂಟಾಗಿದೆ.

ಸಂಕಷ್ಟದಲ್ಲಿ 4 ಸಾವಿರ ಉದ್ಯೋಗಿಗಳ ಜೀವನ: ಸಫಾರಿ ಕ್ಷೇತ್ರವು ಸುಮಾರು 8,000 ಜನರಿಗೆ ಉದ್ಯೋಗ ಒದಗಿಸುತ್ತಿದ್ದು, ಇವರಲ್ಲಿ ಶೇ. 80ರಷ್ಟು ಜನರು ಅರಣ್ಯ ಪ್ರದೇಶಗಳ ಸುತ್ತಮುತ್ತಲಿನ ಗ್ರಾಮಗಳು ಮತ್ತು ಆದಿವಾಸಿ ಸಮುದಾಯಗಳಿಗೆ ಸೇರಿದವರು. ಸಫಾರಿ ಬಂದ್ ಆಗಿರುವ ಕಾರಣ ಮುಂದಿನ 30 ದಿನಗಳಲ್ಲಿ 1,200–1,500 ದಿನಗೂಲಿ ಮತ್ತು ಒಪ್ಪಂದ ಆಧಾರಿತ ಉದ್ಯೋಗಗಳು ನಷ್ಟವಾಗುವ ಸಾಧ್ಯತೆ ಇದೆ. ಇದು ಹೀಗೆ ಮುಂದುವರಿದರೆ ನಿಯಮಿತ ಸಿಬ್ಬಂದಿಯನ್ನು ಒಳಗೊಂಡಂತೆ ಸುಮಾರು 4,000 ಜನರ ಜೀವನ ಸಂಕಷ್ಟಕ್ಕೆ ಸಿಲುಕಲಿದೆ.

ವನ್ಯಜೀವಿ ಪ್ರವಾಸೋದ್ಯಮ ದಕ್ಷಿಣ ಭಾರತದ ಮೂಲಸ್ತಂಭ. ಹೀಗಿರುವಾಗ ಅಂತರಾಷ್ಟ್ರೀಯ ಪ್ರವಾಸೋದ್ಯಮ ಸಂಯೋಜಕರು ಈಗಾಗಲೇ ವಿದೇಶಿ ಪ್ರವಾಸಿಗರನ್ನು ಕರ್ನಾಟಕ ಬಿಟ್ಟು ಬೇರೆಡೆಗೆ ಕರೆದೊಯ್ಯಲು ಆರಂಭಿಸಿದ್ದಾರೆ. ಈ ರೀತಿಯ ಪ್ರವಾಸಗಳು ಸಾಮಾನ್ಯವಾಗಿ 3–6 ತಿಂಗಳು ಮುಂಚಿತವಾಗಿ ಯೋಜಿಸಲಾಗುತ್ತವೆ. ಆದರೆ ಹಠಾತ್ ಆಗಿ ಅವು ರದ್ದಾದಾಗ ಜಾಗತಿಕ ಮಟ್ಟದಲ್ಲಿ ನಕಾರಾತ್ಮಕ ವಿಮರ್ಶೆಗಳಿಗೆ ಒಳಗಾಗಿ, ಕರ್ನಾಟಕದ ಹೆಸರಿಗೆ ಚ್ಯುತಿ ಬರಲಿದೆ ಎಂದು ಕೆಇಟಿಆರ್‌ಎ ತಿಳಿಸಿದೆ.

ಟಿ.ಕೆ. ಸಂದೀಪ್‌ಗೆ ಪಿಹೆಚ್‌ಡಿ



ಮೈಸೂರು, ಡಿ. 26– ಡಾ. ಮೌಲ್ಯ ಬಾಲಾಡಿ ಅವರ ಮಾರ್ಗದರ್ಶನದಲ್ಲಿ ಟಿ.ಕೆ. ಸಂದೀಪ್ ಅವರು ದೃಶ್ಯ ಸಂವಹನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಅಮೃತ ವಿದ್ಯಾಪೀಠಂ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಮ್ಮ ಸಾಧನೆಗಳ ಕ್ರೆಡಿಟ್ ತೆಗೆದುಕೊಳ್ಳುವ ಮೂಲಕ ವೈಷ್ಣವ್ ಕರ್ನಾಟಕದ ಯಶಸ್ಸನ್ನು ಕದಿಯುತ್ತಿದ್ದಾರೆ



ಸಿದ್ದರಾಮಯ್ಯ

ಬೆಂಗಳೂರು, ಡಿ.26– ರಾಜ್ಯದ ಸಾಧನೆಗಳ ಕ್ರೆಡಿಟ್ ತೆಗೆದುಕೊಳ್ಳುವ ಮೂಲಕ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಕರ್ನಾಟಕದ ಯಶಸ್ಸನ್ನು ಕದಿಯುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತರಾಟೆಗೆ ತೆಗೆದುಕೊಂಡಿದ್ದಾರೆ. ಡಬಲ್ ಎಂಜಿನ್ ಸರ್ಕಾರ ಇರುವ ರಾಜ್ಯಗಳಲ್ಲಿ ಕರ್ನಾಟಕದ ಈ ಪ್ರಗತಿ ಸಾಧಿಸಲು ಏಕೆ ಸಾಧ್ಯವಾಗಿಲ್ಲ ಎಂದು ಪ್ರಶ್ನಿಸಿದರು.

ಕರ್ನಾಟಕದಲ್ಲಿ ಘಟಕ ತೆರೆದ 8–9 ತಿಂಗಳಲ್ಲಿ 30 ಸಾವಿರ ಮಂದಿಗೆ ತೈವಾನ್ ಮೂಲದ ಫಾಕ್ಸ್‌ಕಾನ್ ಕಂಪನಿ ಉದ್ಯೋಗ ನೀಡಿದ ಸುದ್ದಿಯನ್ನು ಹಂಚಿಕೊಂಡ ರಾಹುಲ್ ಗಾಂಧಿ ಇದು ಕರ್ನಾಟಕ ಮಾದರಿ ಎಂದು ಟ್ವೀಟ್ ಮಾಡಿದ್ದರು. ಈ ಪೋಸ್ಟ್‌ಗೆ ಅಶ್ವಿನಿ ವೈಷ್ಣವ್ ಪ್ರತಿಕ್ರಿಯಿಸಿ, ಪ್ರಧಾನಿ ನರೇಂದ್ರ ಮೋದಿ ಅವರ ಮೇಕ್ ಇನ್ ಇಂಡಿಯಾ ಕಾರ್ಯಕ್ರಮದ ಯಶಸ್ಸನ್ನು ಒಪ್ಪಿಕೊಂಡಿದ್ದಕ್ಕಾಗಿ ರಾಹುಲ್ ಗಾಂಧಿಗೆ ಧನ್ಯವಾದಗಳು. ನೀವು ಗಮನಿಸಿದಂತೆ ನಮ್ಮ ಪ್ರಧಾನಿಯವರ ದೃಷ್ಟಿಕೋನವನ್ನು ನಾವು ಕಾರ್ಯಗತಗೊಳಿಸುತ್ತಿದ್ದಂತೆ ನಾವು ಉತ್ಪಾದಕ ಆರ್ಥಿಕತೆಯಾಗುತ್ತಿದ್ದೇವೆ ಎಂದು ಬರೆದು ಟಾಂಗ್ ನೀಡಿದ್ದರು.

ಕೇಂದ್ರ ಸಚಿವರ ವಿರುದ್ಧ ವಾಗ್ದಾಳಿ ನಡೆಸಿದ ಸಿದ್ದರಾಮಯ್ಯ, ಮೇಕ್ ಇನ್ ಇಂಡಿಯಾ ನಿಜವಾಗಿಯೂ ಯಶಸ್ವಿಯಾದರೆ, ಬಿಜೆಪಿಯ ಡಬಲ್–ಎಂಜಿನ್ ರಾಜ್ಯಗಳು ಕರ್ನಾಟಕ ನೀಡಿರುವ ಸಾಧನೆಗಳಿಗೆ ಹೊಂದಿಕೆಯಾಗಲು ಏಕೆ ಸಾಧ್ಯವಿಲ್ಲ ಎಂದು ಪ್ರಶ್ನಿಸಿದರು. ನಿಮ್ಮಲ್ಲಿ ಯಾವುದೇ ಸಾಧನೆಗಳು ಇಲ್ಲದಿರುವಾಗ, ನೀವು ಇತರರ ಯಶಸ್ಸನ್ನು ಕದಿಯುತ್ತೀರಿ ಮತ್ತು ಕ್ರೆಡಿಟ್ ತೆಗೆದುಕೊಳ್ಳುತ್ತೀರಿ ಎಂದು ಸಿದ್ದರಾಮಯ್ಯ ಬರೆದುಕೊಂಡಿದ್ದಾರೆ. ತೈವಾನ್‌ನ ಎಲೆಕ್ಟ್ರಾನಿಕ್ಸ್ ದೈತ್ಯ ಫಾಕ್ಸ್‌ಕಾನ್ ಐಫೋನ್‌ಗಳ ಅತಿದೊಡ್ಡ ತಯಾರಕರಾಗಿದ್ದು, ಚೀನಾದ ಹೊರಗೆ ಅದರ ಎರಡನೇ ಅತಿದೊಡ್ಡ ಘಟಕ ಬೆಂಗಳೂರಿನ ದೇವನಹಳ್ಳಿಯಲ್ಲಿದೆ.

ಮಾಧುರಿ ತಾತಾಚಾರಿಯವರಿಗೆ ರೋಟರಿ ಐವರಿ ಮಾರ್ಗದರ್ಶಕ ಪ್ರಶಸ್ತಿ ಪ್ರದಾನ



ಸಮಾಜ ಸೇವಕರಾದ ಮಾಧುರಿ ತಾತಾಚಾರಿ ಅವರಿಗೆ ರೋಟರಿ ಐವರಿ ಮಾರ್ಗದರ್ಶಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಡಿ.26– ಮೈಸೂರಿನ ರೋಟರಿ ಐವರಿ ಸಿಟಿ ಮೈಸೂರು 10ನೇ ವಾರ್ಷಿಕೋತ್ಸವದ ಅಂಗವಾಗಿ 2025ರ ರೋಟರಿ ಐವರಿ ಮಾರ್ಗದರ್ಶಕ ಪ್ರಶಸ್ತಿಯನ್ನು ಖಾಸಗಿ ಹೋಟೇಲ್‌ನಲ್ಲಿ ಪ್ರಧಾನ ಮಾಡಲಾಯಿತು.

ಈ ವೇಳೆ ನಿಕಟಪೂರ್ವ ಜಿಲ್ಲಾ ರೋಟರಿ ಗೌವರ್ನರ್ ರೋ.ವಿಕ್ರಂದತ್ತ ಮಾತನಾಡಿ, ಬಹುಮುಖ ಪ್ರತಿಭೆಯ ವ್ಯಕ್ತಿತ್ವವನ್ನು ಜೀವನದಲ್ಲಿ ಮೈಗೂಡಿಸಿಕೊಂಡಿರುವ ನಿಸ್ವಾರ್ಥ ಸಮಾಜ ಸೇವಕಿ ಮಾಧುರಿ ತಾತಾಚಾರಿ ಅವರಿಗೆ ಈ ಬಾರಿಯ ರೋಟರಿ ಮಾರ್ಗದರ್ಶಕ ಪ್ರಶಸ್ತಿ ಲಭಿಸಿರುವುದು ಅತ್ಯಂತ ಸಂತಸದ ವಿಚಾರವಾಗಿದೆ. ಇವರದು ಬಹುಮುಖ ವ್ಯಕ್ತಿತ್ವ ಮತ್ತು ವಿಶೇಷ ಪ್ರತಿಭೆ. ಇವರು ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದು, ವಯಸ್ಸಾದ ವೃದ್ಧರಿಗೆ ಹಾಗೂ ಅನಕ್ಷರಸ್ಥರಿಗೆ ಶಿಕ್ಷಣ ನೀಡುವಲ್ಲಿ, ಓದು ಬರಹ ಅರಿವು ಮೂಡಿಸುವ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಜೊತೆಗೆ ಸಮಾಜದಲ್ಲಿ ನೊಂದವರಿಗೆ ಹಾಗೂ ಅಸಹಾಯಕರಿಗೆ ಸಹಾಯ ನೀಡುತ್ತಾ ಬಂದಿರುವುದು ಪ್ರಶಂಸನೀಯ ಸಂಗತಿ. ನಿಸ್ವಾರ್ಥ ಸೇವೆಯು ಸಾಮಾಜಿಕ ಚೌಕಟ್ಟನ್ನು ಬಲಪಡಿಸುತ್ತದೆ. ಪರಸ್ಪರ ಸಹಕಾರ, ಪ್ರೀತಿ ವಿಶ್ವಾಸದ ಜಾಲವನ್ನು ಎತ್ತಿ ಹಿಡಿಯುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

ರೋಟರಿ ಐವರಿ ಸಿಟಿ ಮೈಸೂರಿನ ಅಧ್ಯಕ್ಷ ರೋ.ಕೇಶವ್ ಕಾಂಚನ್ ಮಾತನಾಡಿ, ರೋಟರಿ ಸಂಸ್ಥೆಯು ಸಮಾಜಮುಖಿ ಕೆಲಸಗಳಿಗೆ ಮುಂದಾಗಿದ್ದು, ಸೇವಾ ಕಾರ್ಯಗಳಲ್ಲಿ ತೃಪ್ತಿಯನ್ನು ಕಾಣುತ್ತ ಬಂದಿರುವುದು ನಮಗೆಲ್ಲ ಹರ್ಷದಾಯಕ ಸಂಗತಿ. ಯುವಕರು ಸೇವಾಮನೋಭಾವವನ್ನು ಬೆಳೆಸಿಕೊಳ್ಳುವಲ್ಲಿ ಮುಂದಾಗಬೇಕೆಂದು ತಿಳಿಸಿದರು. ವೇದಿಕೆಯಲ್ಲಿ ನಿಕಟಪೂರ್ವ ರೋಟರಿ ಅಧ್ಯಕ್ಷರಾದ ರೋ.ಹೆಚ್.ಆರ್. ಕೇಶವ್, ರೋ.ಸುನಿಲ್ ಬಾಳಿಗಾ, ರೊ.ಡಾ. ಸಚ್ಚಿದಾನಂದನ್, ರೋ.ಡಾ.ಜಿ.ಎಲ್.ಶೇಖರ್, ರೋಟರಿ ಐವರಿ ಸಿಟಿ ಕಾರ್ಯದರ್ಶಿ ರೋ.ಎಂ.ಕೆ. ಮುಖೇಶ್, ರೋ.ಹರೀಶ್, ರೋ.ತೇನು ಮೌಳಿ, ರೋ.ಡಾ.ಲಕ್ಷ್ಮಿ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮಹಾರಾಷ್ಟ್ರ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ 5 ಜೆಡಿಎಸ್ ಅಭ್ಯರ್ಥಿಗಳ ಗೆಲುವು

ಬೆಂಗಳೂರು: ಮಹಾರಾಷ್ಟ್ರದಲ್ಲಿ ನಡೆದಿದ್ದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜೆಡಿಎಸ್‌ನ ಐವರು ಅಭ್ಯರ್ಥಿಗಳು ಗೆಲುವು ಸಾಧಿಸಿದ್ದು, ಇದಕ್ಕೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಸಂತಸ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಮಹಾರಾಷ್ಟ್ರದ ಜೆಡಿಎಸ್ ರಾಜ್ಯಾಧ್ಯಕ್ಷ ಶ್ರೀನಾಥ ಹರಿಬ್ರಾಹು ಶೇವಾಲೆಗೆ ಪತ್ರ ಬರೆದಿರುವ ಗೌಡರು, ಸ್ಥಳೀಯ ಸಂಸ್ಥೆಯ ಚುನಾವಣೆಯಲ್ಲಿ ತಮ್ಮ ಪಕ್ಷದಿಂದ ಆಯ್ಕೆಯಾಗಿರುವ ಐದು ಮಂದಿ ಕೌನ್ಸಿಲರ್‌ಗಳನ್ನು ಅಭಿನಂದಿಸಿದ್ದಾರೆ.

ಮಹಾರಾಷ್ಟ್ರದಲ್ಲಿ ಪಕ್ಷ ಬಲಗೊಳ್ಳುತ್ತಿರುವುದರ ಸೂಚನೆ ಇದಾಗಿದೆ. ಈ ಗೆಲುವು ಒಂದು ಮೈಲಿಗಲ್ಲಾಗಿದೆ. ಮುಂಬರುವ ಬೃಹತ್ ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ ಚುನಾವಣೆ ಹಾಗೂ ಭವಿಷ್ಯದ ಚುನಾವಣೆಗಳಲ್ಲಿ ಇನ್ನೂ ಹೆಚ್ಚಿನ ಸ್ಥಾನಗಳನ್ನು ಜೆಡಿಎಸ್ ಗಳಿಸುವ ವಿಶ್ವಾಸವಿದೆ ಎಂದು ಗೌಡರು ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. ಕೊಲ್ಲಾಪುರ ಜಿಲ್ಲೆಯ ಗಧಿಂಗ್ಲಾಜ್ ಪರಿಷತ್‌ನಲ್ಲಿ ಜೆಡಿಎಸ್ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದ ಸಂಜಯ್ ರೋಟೆ, ಸ್ವಾತಿ ತೈಕೋರಿ, ನಿತಿನ್ ದೇಸಾಯಿ ಹಾಗೂ ಪೂರ್ಣಾ ಪರಿಷತ್‌ನಲ್ಲಿ ಸ್ಪರ್ಧಿಸಿದ್ದ ಪ್ರಕಾಶ್ ಕಾಂಬ್ಳೆ, ರೇಖಾ ಖಾರ್ಗಖರಾತಿ ಚುನಾಯಿತರಾಗಿದ್ದಾರೆ.


ಚಾಮುಂಡೇಶ್ವರಿ ವಿಧಾನಸಭಾಕ್ಷೇತ್ರದ ಪ್ರಭಾವಿ ಕಾಂಗ್ರೆಸ್ ಮುಖಂಡರು
ಹಾಗೂ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ
ರಾಕೇಶ್ ಪಾಪಣ್ಣರವರಿಗೆ
ಜನ್ಮದಿನದ ಶುಭಾಶಯಗಳು
ಕಡಕೊಳ ಶಿವಲಿಂಗ
ಕಾಂಗ್ರೆಸ್ ಯುವ ಮುಖಂಡರು
ಶುಭಕೋರುವವರು : ರಾಕೇಶ್ ಪಾಪಣ್ಣ ಸ್ನೇಹಿತರು ಮತ್ತು ಅಭಿಮಾನಿಗಳು
ಲೋಕೇಶ್ ಕುಮಾರ್
ಕಾಂಗ್ರೆಸ್ ಯುವ ಮುಖಂಡರು

ಈ ತಿಂಗಳ ಮಾಸಾಂತ್ಯದಲ್ಲಿ ನಿವೃತ್ತರಾಗಲಿರುವ

ಮೈಸೂರು ವಿವಿ ಲಲಿತಾ ಕಲಾ ಕಾಲೇಜಿನ ಪ್ರಾಂಶುಪಾಲೆ ಪ್ರೊ.ಅನಿಟ ವಿಮಲಾ ಬ್ರ್ಯಾಗ್ಸ್‌ಗೆ ಬೀಳ್ಕೊಡುಗೆ

ಮೈಸೂರು, ಡಿ.26(ಜಿಎ)–ಮೈಸೂರು ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜಿನ ಪ್ರಾಂಶುಪಾಲ ಹುದ್ದೆಯಿಂದ ಈ ಮಾಸಾಂತ್ಯದಲ್ಲಿ ವಯೋನಿವೃತ್ತಿ ಹೊಂದುತ್ತಿರುವ ಪ್ರೊ.ಅನಿಟ ವಿಮಲಾ ಬ್ರ್ಯಾಗ್ಸ್ ಅವರಿಗೆ ಕಾಲೇಜಿನ ಸಭಾಂಗಣದಲ್ಲಿ ಶಿಷ್ಯ ಬಳಗದ ವತಿಯಿಂದ ಬೀಳ್ಕೊಡಲಾಯಿತು.



ಮೈಸೂರು ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜಿನ ಪ್ರಾಂಶುಪಾಲ ಹುದ್ದೆಯಿಂದ ಈ ಮಾಸಾಂತ್ಯದಲ್ಲಿ ವಯೋನಿವೃತ್ತಿ ಹೊಂದುತ್ತಿರುವ ಪ್ರೊ.ಅನಿಟ ವಿಮಲಾ ಬ್ರ್ಯಾಗ್ಸ್ ಅವರಿಗೆ ಕಾಲೇಜಿನ ಸಭಾಂಗಣದಲ್ಲಿ ಶಿಷ್ಯ ಬಳಗದ ವತಿಯಿಂದ ಬೀಳ್ಕೊಡಲಾಯಿತು.

ಈ ವೇಳೆ ಯುವರಾಜ ಕಾಲೇಜಿನ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ.ಸಿ.ಡಿ.ಪರಶುರಾಮ ಮಾತನಾಡಿ, ಪ್ರೊ.ಅನಿಟ ಅವರು ವಿವಿಯಲ್ಲಿ 38 ವರ್ಷಗಳ ಸೇವಾವಧಿಯಲ್ಲಿ ಮಹಾರಾಜ ಕಾಲೇಜಿನಲ್ಲಿಯೇ 35 ವರ್ಷ ಸೇವೆ ಸಲ್ಲಿಸಿದ್ದಾರೆ. ಈ ಪೈಕಿ ಮೂರು ವರ್ಷಗಳ ಕಾಲ ಪ್ರಾಂಶುಪಾಲರಾಗಿದ್ದರು. ಆ ಸಂದರ್ಭದಲ್ಲಿ ನಾನು ಮಹಾರಾಜ ಹಾಸ್ಟೆಲ್‌ನ ನಿಲಯಪಾಲಕನಾಗಿದ್ದೆ. ಪ್ರೊ.ಅನಿಟ ಅವರು ಹಾಸ್ಟೆಲ್‌ನ 552 ವಿದ್ಯಾರ್ಥಿಗಳಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿದ್ದರು. ಮಾನವೀಯತೆ ಹಾಗೂ ವಿದ್ಯಾರ್ಥಿಗಳ ಬಗ್ಗೆ ಕಾಳಜಿಗೆ ಮತ್ತೊಂದು ಹೆಸರು ಪ್ರೊ.ಅನಿಟ ವಿಮಲಾ ಬ್ರ್ಯಾಗ್ಸ್ ಎಂದು ತಿಳಿಸಿದರು.

ಮಹಾರಾಜ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ.ಸರ್ವಮಂಗಳ ಬಾಯಿ ಮಾತನಾಡಿ, ಪ್ರೊ.ಅನಿಟ ಅವರು ದಕ್ಷತೆ, ಪ್ರಾಮಾಣಿಕತೆಯಿಂದ ವೃತ್ತಿ ನಿರ್ವಹಿಸಿದ್ದಾರೆ. ಹಿಂದೆ ಗುರು– ಶಿಷ್ಯರ ನಡುವೆ ಅತ್ಯುತ್ತಮ ಬಾಂಧವ್ಯವಿತ್ತು. ಅಂತಹ ವಾತಾವರಣವನ್ನು ನಿರ್ಮಿಸುವ ಜವಾಬ್ದಾರಿ ಅಧ್ಯಾಪಕರ ಕೈಯಲ್ಲಿಯೇ ಇರುತ್ತದೆ. ಅನಿಟ ವೃತ್ತಿಯಿಂದ ನಿವೃತ್ತರಾದರೂ ಪ್ರವೃತ್ತಿಯಿಂದ ನಿವೃತ್ತರಾಗುವುದಿಲ್ಲ. ಇದು ಬದುಕಿನ ಇನ್ನೊಂದು ಮಜಲು ಎಂದರು.

ಮಹಾರಾಜ ಕಾಲೇಜಿನ ಜಾನಪದ ವಿಭಾಗದ ಮುಖ್ಯಸ್ಥೆ ಪ್ರೊ.ಹೆಚ್.ಆರ್. ಚೇತನಾ ಮಾತನಾಡಿ, ಯಾವುದೇ ಪ್ರತಿಫಲ ಬಯಸದೇ ತಮ್ಮ ವೃತ್ತಿಯನ್ನು ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸುವ ವ್ಯಕ್ತಿತ್ವ ಪ್ರೊ.ಅನಿಟ ಅವರದು. ಅಧ್ಯಾಪಕರು, ವಿದ್ಯಾರ್ಥಿಗಳ ಬಗ್ಗೆ ಅವರ ಕಾಳಜಿ, ಪ್ರಾಮಾಣಿಕತೆ, ಸಮಾನತೆ ಎದ್ದು ಕಾಣುವ ಗುಣಗಳು ಎಂದರು.

ಸನ್ಮಾನ ಸ್ವೀಕರಿಸಿದ ಪ್ರೊ.ಅನಿಟ ವಿಮಲಾ ಬ್ರ್ಯಾಗ್ಸ್ ಮಾತನಾಡಿ, ರಾಜ್ಯ ಸರ್ಕಾರ ವಿವಿಧ ಭಾಗ್ಯಗಳನ್ನು ಜಾರಿ ಮಾಡಿದೆ. ನನಗೆ ವಿದ್ಯಾರ್ಥಿಗಳ, ಸಹೋದ್ಯೋಗಿಗಳ ಹಾಗೂ ಕುಟುಂಬದ ಪ್ರೀತಿಯ ಭಾಗ್ಯ ಸಿಕ್ಕಿದೆ ಎಂದು ಭಾವುಕರಾದರು. 38 ವರ್ಷಗಳ ಸೇವೆ ಸಂತೋಷ ಹಾಗೂ ತೃಪ್ತಿ ಕೊಟ್ಟಿದೆ ಎಲ್ಲಿಯೇ ಆದರೂ ವಿದ್ಯಾರ್ಥಿಗಳು ಸಿಕ್ಕಿ ಅತ್ಯಂತ ಪ್ರೀತಿ.ಗೌರವದಿಂದ ಮಾತನಾಡಿಸುತ್ತಾರೆ. ನನ್ನ ಸೇವಾವಧಿಯಲ್ಲಿ ಯಾವುದೇ ಕೋರ್ಸ್‌ಗಳು ಬಂದ್ ಆಗದಂತೆ ನೋಡಿಕೊಂಡಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ಮಹಾರಾಜ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕಿ ಹೆಚ್.ಎಂ.ವಸಂತಮ್ಮ, ಪ್ರೊ.ಅನಿಟ ಅವರ ಪತಿ ನೆಸ್ಟರ್ ಡಿಸೋಜ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ಸಿ. ನಾಗರಾಜು, ಶ್ರೀದೇವಿ, ಲತಾ ಕೆ. ಬಿದ್ದಪ್ಪ, ಇಂದಿರಮ್ಮ, ತಿಮ್ಮರಾಯಪ್ಪ ರಾಚಯ್ಯ, ಬಿ.ಕೆ. ಜ್ಞಾನಪ್ರಕಾಶ್, ಎಸ್. ಕೃಷ್ಣಪ್ಪ, ಆರ್. ನಿಂಗರಾಜು, ನಿಂಗರಾಜು ಹಳೇಬೀಡು, ಗ್ರಂಥಪಾಲಕ ಡಾ.ಸೋಮಶೇಖರ್, ಬಸವರಾಜು ಕುರಬೂರು, ಜೆ, ಹೇಮಂತ್, ಸಬಿತಾ, ಪ್ರಜ್ವಲ್, ಸಿಂಥಿ, ಮಹೇಶ್, ಭವ್ಯಾ ಮತ್ತಿತರರು ಪಾಲ್ಗೊಂಡಿದ್ದರು.

ಕೋವಿಡ್ ಬಳಿಕ ವಾಯುಮಾಲಿನ್ಯವೇ ಭಾರತಕ್ಕೆ ಅತಿ ದೊಡ್ಡ ಬಿಕ್ಕಟ್ಟು

ಬ್ರಿಟನ್ ಶ್ವಾಸಕೋಶ ಶಾಸ್ತ್ರಜ್ಞರ ಎಚ್ಚರಿಕೆ

ನವದೆಹಲಿ, ಡಿ.26– ಕೋವಿಡ್ ಸಾಂಕ್ರಾಮಿಕದ ನಂತರ ಭಾರತ ಎದುರಿಸುತ್ತಿರುವ ಅತಿದೊಡ್ಡ ಬಿಕ್ಕಟ್ಟು ಎಂದರೆ ಅದು ವಾಯುಮಾಲಿನ್ಯ. ಅದನ್ನು ನಿಯಂತ್ರಿಸದಿದ್ದರೆ ವರ್ಷದಿಂದ ವರ್ಷಕ್ಕೆ ಅದು ಹೆಚ್ಚುತ್ತಲೇ ಹೋಗುತ್ತದೆ ಎಂದು ಭಾರತ ಮೂಲದ ಬ್ರಿಟನ್ (ಯುಕೆ) ಶ್ವಾಸಕೋಶ ಶಾಸ್ತ್ರಜ್ಞರು ಎಚ್ಚರಿಕೆ ನೀಡಿದ್ದಾರೆ.

ಸುದ್ದಿ ಸಂಸ್ಥೆ ಜತೆ ಬ್ರಿಟನ್‌ನ ವೈದ್ಯರು ಮಾತನಾಡಿದ್ದು, ಭಾರತ ಸರ್ಕಾರ ವಾಯುಮಾಲಿನ್ಯವನ್ನು ನಿಯಂತ್ರಿಸುವತ್ತ ಗಮನ ನೀಡುತ್ತಿದೆ. ಆದರೆ ಅದು ತಡವಾಗಿದೆ. ಉತ್ತರ ಭಾರತದಲ್ಲಿ ವಾಸಿಸುತ್ತಿರುವ ಲಕ್ಷಾಂತರ ಜನರಿಗೆ ಈಗಾಗಲೇ ಹಾನಿಯಾಗಿದೆ. ಕಳಪೆ ಗುಣಮಟ್ಟದ ಗಾಳಿಯಿಂದಾಗಿ ಅನಾರೋಗ್ಯವು ಸದ್ದಿಲ್ಲದೆ ಆವರಿಸುತ್ತಿರುವುದು ಹೊರೆಯಾಗಿ ಪರಿಣಮಿಸಲಿದೆ. ಜತೆಗೆ ಭಾರತದ ನಾಗರಿಕರು ಮತ್ತು ಅಲ್ಲಿನ ಆರೋಗ್ಯ ವ್ಯವಸ್ಥೆ ಮೇಲೆ ಇದು ಭಾರಿ ಮತ್ತು ದೀರ್ಘಕಾಲದವರೆಗೂ ದುಬಾರಿಯಾಗಿ ಪರಿಣಮಿಸುವ ಎಲ್ಲಾ ಸಾಧ್ಯತೆಗಳೂ ಇವೆ ಎಂದು ಲಿವರ್‌ಪೂಲ್‌ನಲ್ಲಿ ಶ್ವಾಸಕೋಶ ಸಲಹೆಗಾರ ಮತ್ತು ಭಾರತದ ಆರೋಗ್ಯ ಇಲಾಖೆಯ ಕೋವಿಡ್–19 ಸಲಹಾ ಸಮಿತಿಯ ಮಾಜಿ ಸದಸ್ಯ ಮನೀಶ್ ಗೌತಮ್ ಹೇಳಿದ್ದಾರೆ.

ಹೆಚ್ಚು ಕಾಲ ವಾಯು ಮಾಲಿನ್ಯಕ್ಕೆ ಒಡ್ಡಿಕೊಳ್ಳುವುದರಿಂದ ಆರಂಭದಲ್ಲಿ ತಲೆನೋವು, ಸುಸ್ತು, ಕಫ, ಕಿರಿಕಿರಿ, ಜೀರ್ಣಕ್ರಿಯೆಯಲ್ಲಿ ತೊಂದರೆ, ಕಣ್ಣುಗಳಲ್ಲಿ ಉರಿ, ಚರ್ಮದ ಸಮಸ್ಯೆ ಸೇರಿದಂತೆ ಹಲವು ಸಣ್ಣಪುಟ್ಟ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಇವೇ ಮುಂದೆ ಗಂಭೀರ ಕಾಯಿಲೆಯಾಗಿ ಮಾರ್ಪಾಡಾಗಬಲ್ಲದು ಎಂದು ಲಂಡನ್‌ನ, ಸೇಂಟ್ ಜಾರ್ಜ್ ವಿಶ್ವವಿದ್ಯಾಲಯ ಆಸ್ಪತ್ರೆ ಹೃದ್ರೋಗ ತಜ್ಞ ರಾಜಯ್ ನಾರಾಯಣ್ ಹೇಳಿದ್ದಾರೆ.

ನಗರಗಳಲ್ಲಿ ವಿಮಾನ, ವಾಹನಗಳು ಹೊರಸೂಸುವ ಕೆಟ್ಟ ಗಾಳಿಯಿಂದಾಗಿ ಅದರಲ್ಲೂ ಪ್ರಮುಖವಾಗಿ ಭಾರತ, ಬ್ರಿಟನ್ ಸೇರಿ ಹಲವು ದೇಶಗಳಲ್ಲಿ ಬೊಜ್ಜಿನ ಸಮಸ್ಯೆ ಮಾತ್ರವಲ್ಲ ಹೃದಯ ಸಂಬಂಧಿ ಕಾಯಿಲೆಗಳೂ ದಶಕಗಳಿಂದೀಚೆಗೆ ಏರಿಕೆಯಾಗುತ್ತಿದೆ ಎಂದಿದ್ದಾರೆ. ದೆಹಲಿಯಲ್ಲಿ ಶೇ.40ರಷ್ಟು ವಾಯುಮಾಲಿನ್ಯ ಸಮಸ್ಯೆಗೆ ಕಾರಣ ಪಳೆಯುಳಿಕೆ ಇಂಧನಗಳಿಗೆ ಅವಲಂಬಿತವಾಗಿರುವ ವಾಹನಗಳ ಹೊಗೆ ಎಂದು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಕೆಲ ದಿನಗಳ ಹಿಂದೆ ಹೇಳಿದ್ದರು.

ನಾಳೆ ಸೀಬರ್ಡ್ ನೌಕಾನೆಲೆಗೆ ರಾಷ್ಟ್ರಪತಿ ಭೇಟಿ; ಸಬ್‌ಮರೀನ್‌ನಲ್ಲಿ ಪ್ರಯಾಣ

ಕಾರವಾರ, ಡಿ.26– ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಡಿಸೆಂಬರ್ 28ರಂದು ಕಾರವಾರದ ಏಷ್ಯಾದ ಅತೀ ದೊಡ್ಡ ನೌಕಾನೆಲೆ 'ಸೀಬರ್ಡ್'ಗೆ ಭೇಟಿ ನೀಡಲಿದ್ದಾರೆ. ರಾಷ್ಟ್ರಪತಿಗಳ ಆಗಮನದ ಹಿನ್ನೆಲೆ ಯಲ್ಲಿ ನೌಕಾನೆಲೆ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಬಿಗಿ ಭದ್ರತೆ ಕೈಗೊಳ್ಳಲಾಗಿದ್ದು, ನೌಕಾಪಡೆ ಸಕಲ ಸಿದ್ಧತೆ ನಡೆಸಿದೆ.


ದ್ರೌಪದಿ ಮುರ್ಮು

ಐಎನ್‌ಎಸ್ ವಿಕ್ರಾಂತ್ ಹಾಗೂ ಸಬ್‌ಮರೀನ್ ವೀಕ್ಷಣೆ: ರಾಷ್ಟ್ರಪತಿಗಳು ನಾಳೆ ಗೋವಾದಲ್ಲಿ ತಂಗಲಿದ್ದು, ನಾಡಿದ್ದು (ಡಿ.28) ಬೆಳಿಗ್ಗೆ ಹೆಲಿಕಾಪ್ಟರ್ ಮೂಲಕ ಕಾರವಾರಕ್ಕೆ ಆಗಮಿಸಲಿದ್ದಾರೆ. ಅಂದು ಬೆಳಿಗ್ಗೆ 10 ಗಂಟೆಗೆ ಅವರು ಐಎನ್‌ಎಸ್ ವಿಕ್ರಾಂತ್ (INS Vikrant) ಯುದ್ಧನೌಕೆಗೆ ಭೇಟಿ ನೀಡಲಿದ್ದಾರೆ. ಬಳಿಕ ಸಬ್‌ಮರೀನ್‌ಗೆ (ಜಲಾಂತರ್ಗಾಮಿ) ಭೇಟಿ ನೀಡಿ, ಸಮುದ್ರದ ಆಳದಲ್ಲಿ ಸ್ವಲ್ಪ ಕಾಲ ಪ್ರಯಾಣ ಬೆಳೆಸುವ ಮೂಲಕ ನೌಕಾ ಪಡೆಯ ಕಾರ್ಯಕ್ಷಮತೆಯನ್ನು ವೀಕ್ಷಿಸಲಿದ್ದಾರೆ.

ಮೀನುಗಾರಿಕೆಗೆ ತಾತ್ಕಾಲಿಕ ನಿಷೇಧ: ರಾಷ್ಟ್ರಪತಿಗಳ ಭೇಟಿ ಮತ್ತು ಭದ್ರತೆಯ ದೃಷ್ಟಿಯಿಂದ ಡಿ.28ರಂದು ಕಾರವಾರ–ಅಂಕೋಲಾ ವ್ಯಾಪ್ತಿಯಲ್ಲಿ ಮೀನು ಗಾರಿಕೆಗೆ ನಿರ್ಬಂಧ ಹೇರಲಾಗಿದೆ. ಅಂದು ಬೆಳಿಗ್ಗೆಯಿಂದ ಮಧ್ಯಾಹ್ನ 3.30ರವರೆಗೆ ಮಾಜಾಳಿಯಿಂದ ಹಾರಾವಾಡದವರೆಗೆ ಯಾವುದೇ ಮೀನುಗಾರಿಕಾ ಬೋಟ್‌ಗಳು ಸಮುದ್ರಕ್ಕೆ ಇಳಿಯದಂತೆ ಮೀನುಗಾರಿಕಾ ಇಲಾಖೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ನೌಕಾನೆಲೆಯಲ್ಲಿ ಹೈ ಅಲರ್ಟ್: ವಿಶ್ವದ ಗಮನ ಸೆಳೆಯುತ್ತಿರುವ ಕಾರವಾರ ನೌಕಾನೆಲೆಯಲ್ಲಿ ರಾಷ್ಟ್ರಪತಿಗಳ ಈ ಭೇಟಿ ಅತ್ಯಂತ ಮಹತ್ವದ್ದಾಗಿದೆ. ಸಬ್ ಮರೀನ್‌ನಲ್ಲಿ ರಾಷ್ಟ್ರಪತಿಗಳು ಪ್ರಯಾಣಿಸಲಿರುವುದು ವಿಶೇಷವಾಗಿದ್ದು, ಈ ಹಿನ್ನೆಲೆಯಲ್ಲಿ ನೌಕಾದಳದ ಉನ್ನತ ಅಧಿಕಾರಿಗಳು ಸ್ಥಳದಲ್ಲೇ ಮೊಕ್ಕಾಂ ಹೂಡಿ ಭದ್ರತಾ ವ್ಯವಸ್ಥೆಗಳ ಉಸ್ತುವಾರಿ ವಹಿಸಿದ್ದಾರೆ.

ವಿಜಯಲಕ್ಷ್ಮಿ ಬಗ್ಗೆ ಅಶ್ಲೀಲ ಕಾಮೆಂಟ್

ಆರೋಪಿಗಳ ಪತ್ತೆಗೆ ಸಿಸಿಬಿ ಪೊಲೀಸರಿಂದ 3 ವಿಶೇಷ ತಂಡ

ಬೆಂಗಳೂರು, ಡಿ.26– ನಟ ದರ್ಶನ್ ಪತ್ನಿ ವಿಜಯಲಕ್ಷ್ಮಿಯವರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಕೆಟ್ಟದಾಗಿ ಕಾಮೆಂಟ್ ಮಾಡಿದ್ದವರಿಗಾಗಿ ಸಿಸಿಬಿ ಸೈಬರ್ ಕ್ರೈಂ ಪೊಲೀಸರು ಬೆನ್ನು ಬಿದ್ದಿದ್ದಾರೆ. ಪ್ರಾಥಮಿಕ ತನಿಖೆ ನಡೆಸಿರುವ ಪೊಲೀಸರು ಮೂರು ವಿಶೇಷ ತಂಡಗಳನ್ನು ರಚಿಸಿ ಆರೋಪಿಗಳ ಪತ್ತೆಗೆ ಮುಂದಾಗಿದ್ದಾರೆ.

ಇದರ ಜೊತೆಗೆ ಹದಿನೆಂಟು ಅಕೌಂಟ್‌ಗಳ ಪರಿಶೀಲನೆ ವೇಳೆ ಬಹುತೇಕ ಅಕೌಂಟ್‌ಗಳನ್ನು ಡಿಲಿಟ್ ಮಾಡ್ಕೊಂಡಿದ್ದಾರೆ. ಇನ್ನೂ ಕೆಲವರು ಅಕೌಂಟ್‌ಗಳ ಜೊತೆಗೆ ಮೊಬೈಲ್ ಕೂಡ ಸ್ವಿಚ್ಡ್ ಆಫ್ ಮಾಡ್ಕೊಂಡು ಎಸ್ಕೇಪ್ ಆಗಿದ್ದಾರೆ. ಹಾಗಾಗಿ ದೂರಿನಲ್ಲಿರುವ ಅಕೌಂಟ್‌ಗಳ ಖಾತೆಗಳ ಡೀಟೆಲ್ಸ್ ನೀಡುವಂತೆ ಇನ್ಸ್ಟಾ ಸಂಸ್ಥೆಗೆ ಪತ್ರ ಬರೆಯಲಾಗಿದೆ. ಎರಡು ದಿನದಲ್ಲಿ ಆ ಎಲ್ಲಾ ಮಾಹಿತಿ ಸಿಗುವ ಸಾಧ್ಯತೆ ಇದೆ. ಆ ಡಿಟೇಲ್ಸ್ ಆಧಾರದ ಮೇಲೆ ಆರೋಪಿಗಳನ್ನು ಪತ್ತೆ ಹಚ್ಚಲು ಸಿದ್ಧತೆ ಮಾಡ್ಕೊಂಡಿದ್ದಾರೆ.

ಅಶ್ಲೀಲ ಕಾಮೆಂಟ್ ಮಾಡಿದವ್ರ ವಿರುದ್ಧ ಸಿಸಿಬಿ ಸೈಬರ್ ಕ್ರೈಂ ಠಾಣೆಯಲ್ಲಿ ಕೇಸ್ ದಾಖಲಾಗಿದೆ. 18 ಖಾತೆಗಳ ವಿರುದ್ಧ ಐಟಿ ಕಾಯ್ದೆ ಹಾಗೂ ಬಿಎನ್‌ಎಸ್ ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದೆ. ಯಾವಾಗ ಸಿಸಿಬಿ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ತಮ್ಮ ತಮ್ಮ ಅಕೌಂಟ್‌ಗಳು ದೂರಿನಲ್ಲಿ ಉಲ್ಲೇಖವಾಗಿವೆ ಅನ್ನೋದು ಗೊತ್ತಾಯ್ತೋ ಕೂಡಲೇ ಅಕೌಂಟ್ ಡಿಲೀಟ್ ಮಾಡಿ ಕೂತಿದ್ದಾರೆ.

ಜೊತೆಗೆ ವಿದ್ಯಾರ್ಥಿ ದಿಸೆಯಲ್ಲೇ ನಾನಾ ಕಲಾ ಪ್ರಕಾರಗಳ ಕಲಿಕೆಗೆ ಆದ್ಯತೆ ನೀಡುವುದು ಅವಶ್ಯ

ಸಂಗೀತ ವಿವಿ ಕುಲಪತಿ ಡಾ.ನಾಗೇಶ್ ಬೆಟ್ಟಕೋಟೆ ಅಭಿಮತ



ಸ.ಪ.ಸ ಸಂಗೀತ ವಿದ್ಯಾಲಯದ ಲೋಗೋವನ್ನು ಡಾ.ನಾಗೇಶ್ ವಿ.ಬೆಟ್ಟಕೋಟೆ ಬಿಡುಗಡೆಗೊಳಿಸಿದರು.

ಮೈಸೂರು, ಡಿ.26(ಎಸ್‌ಪಿಎನ್)– ವಿದ್ಯಾರ್ಥಿ ದಿಸೆಯಲ್ಲಿ ಓದಿನ ಜೊತೆಗೆ ವಿವಿಧ ಕಲಾ ಪ್ರಕಾರಗಳ ಕಲಿಕೆಗೂ ಆದ್ಯತೆ ನೀಡಬೇಕು. ಇದರಿಂದ ವಿದ್ಯಾರ್ಥಿಗಳು ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಲು ಸಹಕಾರಿಯಾಗುತ್ತದೆ ಎಂದು ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಕುಲಪತಿ ಡಾ. ನಾಗೇಶ್ ವಿ.ಬೆಟ್ಟಕೋಟೆ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಸಭಾಂಗಣದಲ್ಲಿ ಬೆಂಗಳೂರಿನ ಅಖಿಲ ಕರ್ನಾಟಕ ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟ, ಮೈಸೂರಿನ ಸ.ಪ.ಸ ಸಂಗೀತ ವಿದ್ಯಾಲಯ ಸಹಯೋಗದೊಂದಿಗೆ ಏರ್ಪಡಿಸಿದ್ದ ಭಾವಗೀತೆಗಳ ಭಾವಾಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸ.ಪ.ಸ ಸಂಗೀತ ವಿದ್ಯಾಲಯ, ಸಂಗೀತ ವಿವಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ಈ ವಿದ್ಯಾಲಯದ ವಿದ್ಯಾರ್ಥಿಗಳು ಸಂಗೀತಾಭ್ಯಾಸ ಮಾಡಿ, ನಮ್ಮ ವಿವಿಯ ಪ್ರಮಾಣ ಪತ್ರ ಪಡೆದುಕೊಳ್ಳುತ್ತಾರೆ. ಸಂಗೀತ, ನೃತ್ಯ, ನಾಟಕ ಹಾಗೂ ಸುಗಮ ಸಂಗೀತ ಸೇರಿದಂತೆ ಇತರೆ ಕಲೆಗಳ ಕಲಿಕೆಗೆ ವಿದ್ಯಾರ್ಥಿಗಳಿಗೂ ಸಹಕಾರಿಯಾಗಲಿದೆ. ಇದರಿಂದ ತಮ್ಮ ವ್ಯಕ್ತಿತ್ವ, ನಡವಳಿಕೆ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು, ತಮ್ಮ ಓದಿನ ಜೊತೆಗೆ ಒಂದಿಲ್ಲೊಂದು ಕಲೆಗಳ ಕಲಿಕೆಗೆ ಮುಂದಾಗುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ. ಸ.ಪ.ಸ ಸಂಗೀತ ವಿದ್ಯಾಲಯದ ಅಧ್ಯಕ್ಷರಾದ ಮಾ.ರಾಜಪ್ಪ ಕಿರಗಸೂರು ನೇತೃತ್ವದಲ್ಲಿ ಹಲವು ವಿದ್ಯಾರ್ಥಿಗಳು ಸಂಗೀತ, ನಾಟಕ ಸೇರಿದಂತೆ ಇತರೆ ಕಲೆಗಳನ್ನು ಕಲಿತು ಉತ್ತಮ ಹೆಸರು ಗಳಿಸಲಿ ಎಂದು ಆಶಿಸಿದರು.

ಈ ವೇಳೆ ಗಾಯಕರಾದ ಆನಂದ ಮಾದಲಗೆರೆ, ಮಲ್ಲಿಕಾರ್ಜುನ ಕೆಂಕೆರೆ, ಇಂಚರ ಪ್ರವೀಣ್ ಕುಮಾರ್, ರಾಜಶೇಖರ್ ನೂಲಿ, ಎರ್ರಿಸ್ವಾಮಿ, ಪುರುಷೋತ್ತಮ್ ಕಿರಗಸೂರು, ಎಂ.ಮಹಾಲಿಂಗ, ಭವತಾರಿಣಿ ನೇತೃತ್ವದಲ್ಲಿ ಸುಗಮ ಸಂಗೀತ ಗಾಯನ ಸೊಗಸಾಗಿ ಮೂಡಿಬಂತು. ರಘುನಾಥ್(ತಬಲಾ), ಗುರುದತ್ತ(ರಿದಂ ಪ್ಯಾಡ್), ದರ್ಶನ್ ಸೋಮಹಳ್ಳಿ (ಕೀಬೋರ್ಡ್) ವಾದ್ಯ ಸಹಕಾರ ನೀಡಿದ್ದಾರೆ.

ವೇದಿಕೆಯಲ್ಲಿ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಕುಲಸಚಿವ ಡಾ.ಎಂ.ಜಿ.ಮಂಜುನಾಥ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅಧ್ಯಕ್ಷತೆ ವಹಿಸಿದ್ದರು. ಅಖಿಲ ಕರ್ನಾಟಕ ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಡಾ.ಕಾ.ವೆಂ.ಶ್ರೀನಿವಾಸ ಮೂರ್ತಿ, ಮೈಸೂರು ನಗರ ಪಾಲಿಕೆ ಮಾಜಿ ಅಧ್ಯಕ್ಷ ಮಾ.ವಿ.ರಾಮಪ್ರಸಾದ್, ಬಿಲ್ಡರ್ಸ್ ಅಸೋಸಿಯೇಷನ್ ಮತ್ತು ಸಾಂಸ್ಕೃತಿಕ ಸಮಿತಿ ಸದಸ್ಯ ಎಸ್.ಉಮೇಶ್, ಗಾಯಕ ಪುರುಷೋತ್ತಮ್ ಕಿರಗಸೂರು, ಡಾ.ಆರ್.ನಿಂಗರಾಜು, ಡಾ.ಐ.ಡಿ.ಲೋಕೇಶ್, ಸಿ.ಎಸ್. ಮಧುಸೂದನ್ ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.26– ಜಯನಗರ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಡಿ.27 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಬೃಂದಾವನ 1ನೇ ಮತ್ತು 2ನೇ ಹಂತ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು. ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ರಾಮಾನುಜ ರಸ್ತೆ, ಬಸವೇಶ್ವರ ರಸ್ತೆ 1 ರಿಂದ 14ನೇ ಕ್ರಾಸ್, ನಾರಾಯಣ ಶಾಸ್ತ್ರಿ ರಸ್ತೆ 1 ರಿಂದ 6ನೇ ಕ್ರಾಸ್, ಮಧ್ವಾಚಾರ್ ರಸ್ತೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಬಿಕ್ಲು ಶಿವ ಕೊಲೆ ಕೇಸ್ ಬೈರತಿಗೆ ರಿಲೀಫ್; ಮಧ್ಯಂತರ ನಿರೀಕ್ಷಣಾ ಜಾಮೀನು

ಬೆಂಗಳೂರು, ಡಿ.26– ರೌಡಿ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಹತ್ಯೆಗೆ 5 ನೇ ಆರೋಪಿಯಾಗಿರುವ ಕೆ.ಆರ್. ಪುರದ ಬಿಜೆಪಿ ಶಾಸಕ ಬೈರತಿ ಬಸವರಾಜ್‌ಗೆ ಷರತ್ತುಬದ್ಧ ಮಧ್ಯಂತರ ನಿರೀಕ್ಷಣಾ ಜಾಮೀನು ಲಭಿಸಿದೆ. ಪ್ರಕರಣದಲ್ಲಿ ಐದನೇ ಆರೋಪಿಯಾಗಿದ್ದು, ಬಂಧನ ಭೀತಿ ಎದುರಿಸುತ್ತಿದ್ದ ಬೈರತಿ ಅವರಿಗೆ ಡಿಸೆಂಬರ್ 23ರಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಿರೀಕ್ಷಣಾ ಜಾಮೀನು ನಿರಾಕರಿಸಿದ್ದ ಹಿನ್ನೆಲೆಯಲ್ಲಿ ಬುಧವಾರ ಆದೇಶ ಪ್ರಶ್ನಿಸಿ ಹೈಕೋರ್ಟ್‌ಗೆ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದರು. ಶುಕ್ರವಾರ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಷರತ್ತುಬದ್ಧ ಮಧ್ಯಂತರ ನಿರೀಕ್ಷಣಾ ಜಾಮೀನು ನೀಡಿದೆ.



ಅಮಾಯಕ ಎಂದಿದ್ದ ಬೈರತಿ: ಪ್ರಕರಣದಲ್ಲಿ ತಾವು ಅಮಾಯಕ. ದೂರಿನಲ್ಲಿ ಆರೋಪಿಸಿರುವಂತೆ ಬಿಕ್ಲು ಶಿವ ಕೊಲೆಗೆ ಸಂಬಂಧಿಸಿದ ಯಾವುದೇ ಅಪರಾಧ ಕೃತ್ಯದಲ್ಲಿ ತಾವು ಭಾಗಿಯಾಗಿಲ್ಲ. ನಿರೀಕ್ಷಣಾ ಜಾಮೀನು ನಿರಾಕರಿಸಲು ವಿಶೇಷ ನ್ಯಾಯಾಲಯ ನೀಡಿರುವ ಕಾರಣಗಳು ದೋಷಪೂರಿತವಾಗಿವೆ. ತಮ್ಮ ವಿರುದ್ಧದ ಆರೋಪಗಳು ಸಂಪೂರ್ಣ ಸುಳ್ಳು ಮತ್ತು ಅಸ್ಪಷ್ಟತೆಯಿಂದ ಕೂಡಿವೆ. ಕಸ್ಟೋಡಿಯಲ್ ವಿಚಾರಣೆಗೆ ಅಗತ್ಯವಿದ್ದೇವೆ ಎಂದು ಪ್ರತಿಪಾದಿಸುವ ಅಪರಾಧ ಕೃತ್ಯಗಳನ್ನು ಎಸಗಿಲ್ಲ. ರಾಜಕೀಯ ದ್ವೇಷದಿಂದ ತಮ್ಮನ್ನು ಬಂಧಿಸಿ ಕಿರುಕುಳ ನೀಡಲು ಸಿಐಡಿ ಪೊಲೀಸರು ಸರ್ವ ಪ್ರಯತ್ನ ನಡೆಸುತ್ತಿದ್ದಾರೆ. ಇದರಿಂದ ನಿರೀಕ್ಷಣಾ ಜಾಮೀನು ನೀಡಬೇಕು ಎಂದು ಶಾಸಕ ಬೈರತಿ ಬಸವರಾಜು ಅರ್ಜಿಯಲ್ಲಿ ಮನವಿ ಮಾಡಿದ್ದರು. ಬೈರತಿ ಬಸವರಾಜ್ ಪರ ವಕೀಲ ಸಂದೇಶ್ ಚೌಟ ವಾದ ಮಂಡಿಸಿದ್ದರು.

ಪ್ರಧಾನಿ ಮೋದಿ ನೇತೃತ್ವದಲ್ಲಿ ಭಾರತ ಪ್ರಗತಿ ಸಾಧಿಸುತ್ತಿದೆ; ಕಾಂಗ್ರೆಸ್‌ನಿಂದ ಕರ್ನಾಟಕ ಅವನತಿಯತ್ತ ಸಾಗಿದೆ...!

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ

ಬೆಂಗಳೂರು, ಡಿ.26– ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗುವಂತಿದ್ದರೆ, ಕಾಂಗ್ರೆಸ್ ಸರ್ಕಾರದ ಅಡಿಯಲ್ಲಿ ಕರ್ನಾಟಕ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.



ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮದಿನಾಚರಣೆಯ ಕಾರ್ಯಕ್ರಮ, ಅಟಲ್ ಪ್ರಶಸ್ತಿ ಪ್ರದಾನ ಮತ್ತು ಉತ್ತಮ ಆಡಳಿತ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡಿದ ಅವರು, ಕರ್ನಾಟಕವು ಒಂದು ಕಾಲದಲ್ಲಿ ಆಡಳಿತ ಮತ್ತು ಅಭಿವೃದ್ಧಿಗೆ ಮಾದರಿ ರಾಜ್ಯವಾಗಿತ್ತು ಎಂದು ಹೇಳಿದರು.

ಕರ್ನಾಟಕವು ಇಡೀ ರಾಷ್ಟ್ರಕ್ಕೆ ನಾಯಕನಾಗಿ ಹೊರಹೊಮ್ಮಿತ್ತು. ಆದರೆ, ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ, ಈ ಎಲ್ಲವೂ ಕಳೆದುಹೋಗಿವೆ ಮತ್ತು ರಾಜ್ಯವು ಈಗ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ ಎಂದರು.

ಸದ್ಯದ ಆಡಳಿತವು ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣವಾಗಿ ಹಾನಿಗೊಳಿಸಿದೆ. ಕರ್ನಾಟಕವು ಒಂದು ಕಾಲದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿತ್ತು. ಉತ್ತಮ ರಾಜ್ಯದಲ್ಲಿ ಈಗ ಕ್ಷುಲ್ಲಕ ರಾಜಕೀಯ ನಡೆಯುತ್ತಿದೆ. ಆರೋಗ್ಯ, ಶಿಕ್ಷಣ, ಕೃಷಿ ಮತ್ತು ಕಂದಾಯ ಸೇರಿದಂತೆ ಎಲ್ಲ ಇಲಾಖೆಗಳಲ್ಲಿ ಆಡಳಿತ ಹದಗೆಟ್ಟಿದೆ. ಜನರು ಈಗ ಗಂಭೀರವಾಗಿ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಹೇಳಿದರು.

ಉತ್ತಮ ಆಡಳಿತದ ಯುಗ ಮತ್ತೆ ಬರಬೇಕು ಎಂದು ಪ್ರತಿಪಾದಿಸಿದ ಕುಮಾರಸ್ವಾಮಿ, ಈ ಸರ್ಕಾರದ ದುರಾಡಳಿತದಿಂದ ಜನರು ಬೇಸತ್ತಿದ್ದಾರೆ. ಒಂದು ಕಾಲದಲ್ಲಿ ಐಟಿ–ಬಿಟಿ ರಾಜಧಾನಿ ಮತ್ತು ಶಿಕ್ಷಣ ಮತ್ತು ತಂತ್ರಜ್ಞಾನದ ಕೇಂದ್ರವಾಗಿದ್ದ ಬೆಂಗಳೂರು, ಮೂಲಸೌಕರ್ಯ ವಿಚಾರದಲ್ಲಿ ಸಂಪೂರ್ಣವಾಗಿ ಹದಗೆಟ್ಟಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರವು ಸದುದ್ದೇಶ ಮತ್ತು ತಜ್ಞರ ಸಲಹೆಯನ್ನು ಸ್ವೀಕರಿಸುವ ಮನಸ್ಥಿತಿಯನ್ನು ಹೊಂದಿಲ್ಲ. ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಬಗ್ಗೆಯೂ ಬೇಜವಾಬ್ದಾರಿಯಿಂದ ಮಾತನಾಡುವ ಸಂಸ್ಕೃತಿಯನ್ನು ಅದು ಬೆಳೆಸಿಕೊಂಡಿದೆ. ರಾಜ್ಯವು ಅಭಿವೃದ್ಧಿ ಹೊಂದಲು ಅಗತ್ಯವಿರುವ ಎಲ್ಲ ಸಾಮರ್ಥ್ಯ ಹೊಂದಿದೆ ಎಂದು ಹೇಳಿದರು.

ಮೋದಿ ಸರ್ಕಾರದ ಅಡಿಯಲ್ಲಿ ಭಾರತ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಲು ಹೆಜ್ಜೆ ಹಾಕುತ್ತಿರುವ ಸಮಯದಲ್ಲಿ, ಕರ್ನಾಟಕ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಎಲ್ಲರೂ ಆಶ್ಚರ್ಯಪಡುತ್ತಾರೆ. ಅದು ಹಿಂದಕ್ಕೆ ಚಲಿಸುತ್ತಿದೆ ಮತ್ತು ಅವನತಿಯತ್ತ ಜಾರುತ್ತಿದೆ ಎಂದು ಅವರು ತಿಳಿಸಿದರು.

ಶತ್ರುಗಳಿಲ್ಲದ ನಾಯಕ, ರಾಷ್ಟ್ರಕ್ಕೆ ದೀರ್ಘ ಕಾಲ ಮತ್ತು ವಿಶಿಷ್ಟ ಸೇವೆ ಸಲ್ಲಿಸಿದ ವಾಜಪೇಯಿ ಅವರು 'ಅಜಾತಶತ್ರು' ಆಗಿದ್ದಾರೆ. ವಾಜಪೇಯಿ ಅವರಂತಹ ನಾಯಕರು ಇಂದು ಅಪರೂಪ. ವಿದೇಶಾಂಗ ಸಚಿವರಾಗಿ, ವಿರೋಧ ಪಕ್ಷದ ನಾಯಕರಾಗಿ ಮತ್ತು ಪ್ರಧಾನಿಯಾಗಿ ಅವರ ಕೊಡುಗೆಗಳು ಅಪಾರ. ಅವರು ಬಿಜೆಪಿಯನ್ನು ಸಂಸತ್ತಿನಲ್ಲಿ ಕೇವಲ ಎರಡು ಸ್ಥಾನಗಳಿಂದ 170 ಸ್ಥಾನಗಳಿಗೆ ಕೊಂಡೊಯ್ದ ದೂರದೃಷ್ಟಿಯ ನಾಯಕರಾಗಿದ್ದರು ಎಂದು ಕುಮಾರಸ್ವಾಮಿ ಹೇಳಿದರು.

ಕೆಪಿಸಿಎಲ್‌ನ 622 ಹುದ್ದೆಗೆ ಮರು ಪರೀಕ್ಷೆ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿಎಲ್) ಒಟ್ಟು 622 ಹುದ್ದೆಗಳ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಡಿ.27 ಮತ್ತು 28ರಂದು ನಗರದಲ್ಲಿ ಮರು ಪರೀಕ್ಷೆ ನಡೆಸುತ್ತಿದ್ದು, ಬಿಗಿ ಕ್ರಮಗಳನ್ನು ಕೈಗೊಂಡಿದೆ.

ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಈ ಹುದ್ದೆಗಳಿಗೆ ಮರು ಪರೀಕ್ಷೆ ನಡೆಸಲಾಗುತ್ತಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ.

ಕೆಮಿಕಲ್ ಸೂಪರ್ ವೈಸರ್, ವಿವಿಧ ವಿಭಾಗಗಳ ಸಹಾಯಕ ಎಂಜಿನಿಯರ್‌ಗಳ ನೇಮಕಕ್ಕೆ ಬೆಂಗಳೂರಿನ 17 ಕೇಂದ್ರಗಳಲ್ಲಿ ಡಿ.27ರಂದು ಲಿಖಿತ ಪರೀಕ್ಷೆ ನಡೆಯಲಿದೆ. ಒಟ್ಟು 8,622 ಮಂದಿ ಪರೀಕ್ಷೆ ಬರೆಯಲು ಅರ್ಹತೆ ಪಡೆದಿದ್ದಾರೆ ಎಂದು ವಿವರಿಸಿದ್ದಾರೆ.

ಡಿ.28ರಂದು ಕೆಮಿಸ್ಟ್, ವಿವಿಧ ವಿಭಾಗಗಳ ಕಿರಿಯ ಎಂಜಿನಿಯರ್ ಹುದ್ದೆಗಳಿಗೆ ಬೆಂಗಳೂರಿನ 21 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಒಟ್ಟು 10,136 ಮಂದಿ ಪರೀಕ್ಷೆ ಬರೆಯಲಿದ್ದಾರೆ ಎಂದರು. ಡಿ.28ರಂದು ಕನ್ನಡ ಭಾಷಾ ಪರೀಕ್ಷೆ ಕೂಡ ನಡೆಯಲಿದೆ ಎಂದು ಅವರು ಹೇಳಿದರು.

ಕ್ರಿಕೆಟಿಗ ವೈಭವ್ ಸೂರ್ಯವಂಶಿ ಸೇರಿ 20 ಮಕ್ಕಳಿಗೆ ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ಪ್ರಶಸ್ತಿ



ನವದೆಹಲಿ, ಡಿ.26– ಶೌರ್ಯ, ಸಾಮಾಜಿಕ ಸೇವೆ, ಪರಿಸರ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ 20 ಮಕ್ಕಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಶುಕ್ರವಾರ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ಪ್ರದಾನ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ದ್ರೌಪದಿ ಮುರ್ಮು ಅವರು, ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ಪುರಸ್ಕೃತರನ್ನು ಅಭಿನಂದಿಸಿದರು ಮತ್ತು ಪ್ರಶಸ್ತಿ ವಿಜೇತ ಮಕ್ಕಳು ತಮ್ಮ ಕುಟುಂಬಗಳು, ಸಮುದಾಯಗಳು ಮತ್ತು ಇಡೀ ದೇಶಕ್ಕೆ ಹೆಮ್ಮೆ ತಂದಿದ್ದಾರೆ ಎಂದು ಹೇಳಿದರು.

ಈ ಪ್ರಶಸ್ತಿಗಳು ದೇಶಾದ್ಯಂತದ ಎಲ್ಲಾ ಮಕ್ಕಳಿಗೆ ಸ್ಫೂರ್ತಿ ನೀಡುತ್ತವೆ ಎಂದು ಮುರ್ಮು ವಿಶ್ವಾಸ ವ್ಯಕ್ತಪಡಿಸಿದರು ಮತ್ತು ಅವರ ಪ್ರೋತ್ಸಾಹಕ್ಕಾಗಿ ಈ ಪ್ರಶಸ್ತಿಯನ್ನು ಅವರಿಗೆ ನೀಡಲಾಗಿದೆ ಎಂದು ಹೇಳಿದರು.

ಡಿಸೆಂಬರ್ 26ರಂದು ಆಚರಿಸಲಾಗುವ ವೀರ್ ಬಲ್ ದಿವಸ್‌ನ ಮಹತ್ವದ ಬಗ್ಗೆ ಮಾತನಾಡುತ್ತಾ, ಸುಮಾರು 320 ವರ್ಷಗಳ ಹಿಂದೆ, ಎಲ್ಲಾ ಭಾರತೀಯರಿಂದ ಪೂಜಿಸಲ್ಪಡುವ ಹತ್ತನೇ ಸಿಖ್ ಗುರು ಗುರು ಗೋವಿಂದ್ ಸಿಂಗ್ ಜಿ ಮತ್ತು ಅವರ ನಾಲ್ವರು ಪುತ್ರರು ಸತ್ಯ ಮತ್ತು ನ್ಯಾಯಕ್ಕಾಗಿ ಹೋರಾಡುತ್ತಾ 'ಸರ್ವೋಚ್ಚ ತ್ಯಾಗ'ಗಳನ್ನು ಮಾಡಿದರು ಎಂದು ಅವರು ಹೇಳಿದರು.

ಬಾಬಾ ಜೋರಾವರ್ ಸಿಂಗ್ ಮತ್ತು ಬಾಬಾ ಫತೇ ಸಿಂಗ್ ಎಂಬ ಇಬ್ಬರು ಕಿರಿಯ ಸಾಹಿಬ್‌ಜಾದಾಸ್ ಅವರ ಧೈರ್ಯವನ್ನು ಭಾರತ ಮತ್ತು ವಿದೇಶಗಳಲ್ಲಿ ಗೌರವಿಸಲಾಗುತ್ತದೆ. ಸತ್ಯ ಮತ್ತು ನ್ಯಾಯಕ್ಕಾಗಿ ಹೆಮ್ಮೆಯಿಂದ ತಮ್ಮ ಪ್ರಾಣವನ್ನೇ ಅರ್ಪಿಸಿದ ಮಹಾನ್ ಬಾಲ ವೀರರನ್ನು ಅವರು ಗೌರವದಿಂದ ಸ್ಮರಿಸಲಾಗುತ್ತದೆ ಎಂದರು.

ಒಂದು ದೇಶದ ಮಕ್ಕಳು ದೇಶಭಕ್ತಿ ಮತ್ತು ಉನ್ನತ ಆದರ್ಶಗಳಿಂದ ತುಂಬಿದಾಗ ಆ ದೇಶದ ಶ್ರೇಷ್ಠತೆ ಖಚಿತ ಎಂದು ರಾಷ್ಟ್ರಪತಿಗಳು ಹೇಳಿದರು. ಮಕ್ಕಳು ಶೌರ್ಯ, ಕಲೆ ಮತ್ತು ಸಂಸ್ಕೃತಿ, ಪರಿಸರ, ನಾವೀನ್ಯತೆ, ವಿಜ್ಞಾನ ಮತ್ತು ತಂತ್ರಜ್ಞಾನ, ಸಾಮಾಜಿಕ ಸೇವೆ ಮತ್ತು ಕ್ರೀಡೆಗಳಂತಹ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಅಸಾಧಾರಣ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ ಎಂದು ಗಮನಿಸಲು ಸಂತೋಷವಾಯಿತು ಎಂದು ಹೇಳಿದರು.

ಏಳು ವರ್ಷದ ವಾಕಾ ಲಕ್ಷ್ಮಿ ಪ್ರಾಗ್ನಿಕಾ ಅವರಂತಹ ಪ್ರತಿಭಾನ್ವಿತ ಮಕ್ಕಳ ಕಾರಣದಿಂದಾಗಿ ಭಾರತವನ್ನು ವಿಶ್ವ ವೇದಿಕೆಯಲ್ಲಿ ಚೆಸ್ ಶಕ್ತಿ ಕೇಂದ್ರವೆಂದು ಪರಿಗಣಿಸಲಾಗಿದೆ. ತಮ್ಮ ಧೈರ್ಯ ಮತ್ತು ಬುದ್ಧಿವಂತಿಕೆಯಿಂದ ಇತರರ ಜೀವಗಳನ್ನು ಉಳಿಸಿದ ಅಜಯ್ ರಾಜ್ ಮತ್ತು ಮೊಹಮ್ಮದ್ ಸಿದಾನ್ ಪಿ ಅವರು ಪಡೆಯುವ ಎಲ್ಲಾ ಪ್ರಶಂಸೆಗೆ ಅರ್ಹರು ಎಂದು ಅವರು ಹೇಳಿದರು.

ಒಂಬತ್ತು ವರ್ಷದ ಮಗಳು ವ್ಯೋಮ ಪ್ರಿಯಾ ಮತ್ತು 11 ವರ್ಷದ ಧೈರ್ಯಶಾಲಿ ಮಗ ಕಮಲೇಶ್ ಕುಮಾರ್ ತಮ್ಮ ಧೈರ್ಯದಿಂದ ಇತರರ ಜೀವಗಳನ್ನು ಉಳಿಸುವಾಗ ಪ್ರಾಣ ಕಳೆದುಕೊಂಡರು. ಆಪರೇಷನ್ ಸಿಂಧೂರ್ ಸಮಯದಲ್ಲಿ ಯುದ್ಧಕ್ಕೆ ಸಂಬಂಧಿಸಿದ ಅಪಾಯಗಳ ನಡುವೆಯೂ ಹತ್ತು ವರ್ಷದ ಶ್ರವಣ್ ಸಿಂಗ್ ತನ್ನ ಮನೆಯ ಸಮೀಪ ಗಡಿಯಲ್ಲಿ ಬೀಡುಬಿಟ್ಟಿದ್ದ ಭಾರತೀಯ ಸೈನಿಕರಿಗೆ ನಿಯಮಿತವಾಗಿ ನೀರು, ಹಾಲು ಮತ್ತು ಲಸ್ಸಿಯನ್ನು ತಲುಪಿಸುತ್ತಿದ್ದರು.

ಅಂತೆಯೇ ಅಂಗವಿಕಲ ಮಗಳು ಶಿವಾನಿ ಹೊಸೂರು ಉಪ್ಪಾರ ಆರ್ಥಿಕ ಮತ್ತು ದೈಹಿಕ ಮಿತಿಗಳನ್ನು ಮೀರಿ ಕ್ರೀಡಾ ಜಗತ್ತಿನಲ್ಲಿ ಅಸಾಧಾರಣ ಸಾಧನೆಗಳನ್ನು ಮಾಡಿದ್ದಾರೆ ಎಂದು ಅವರು ಹೇಳಿದರು.

ಕ್ರಿಕೆಟ್ ತಾರೆ ವೈಭವ್: ಇದೇ ವೇಳೆ ವೈಭವ ಸೂರ್ಯವಂಶಿ ಅತ್ಯಂತ ಸ್ಪರ್ಧಾತ್ಮಕ ಮತ್ತು ಪ್ರತಿಭೆಯಿಂದ ತುಂಬಿದ ಕ್ರಿಕೆಟ್ ಜಗತ್ತಿನಲ್ಲಿ ಅನೇಕ ದಾಖಲೆಗಳನ್ನು ಸ್ಥಾಪಿಸಿದ್ದಾರೆ. ಅವರಂತಹ ಧೈರ್ಯಶಾಲಿ ಮತ್ತು ಪ್ರತಿಭಾನ್ವಿತ ಮಕ್ಕಳು ಉತ್ತಮ ಕೆಲಸ ಮಾಡುವುದನ್ನು ಮುಂದುವರಿಸುತ್ತಾರೆ ಮತ್ತು ಭಾರತದ ಭವಿಷ್ಯವನ್ನು ಉಜ್ವಲಗೊಳಿಸುತ್ತಾರೆ ಎಂದು ರಾಷ್ಟ್ರಪತಿಗಳು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿಗರ ಬೆನ್ನ ಹಿಂದಿದೆ ಅಪಾಯ... ಅಪಾಯ...

- ಸಂಬಂಧಿಸಿದ ಅಧಿಕಾರಿಗಳಿಗಿಲ್ಲ ಅರಿವು
- ಆಹಾರ ಹರಸಿ ಹೋಗುವವರಿಗೂ ಅವಘಡದ ಅರಿವೇ ಇಲ್ಲ
- ಅರಮನೆ ಮಾಗಿ ಉತ್ಸವ; ದಸರಾ ವಸ್ತು ಪ್ರದರ್ಶನ ನೋಡಲು ಬಂದ ಅಮಾಯಕರ ಬಲಿಗೆ ಹೊಣೆ ಯಾರು?



ಬೀದಿಬದಿ ಫಾಸ್ಟ್‌ಫುಡ್‌ವೊಂದರ ಪಕ್ಕದಲ್ಲೇ ಸಿಲಿಂಡರ್‌ಗಳು ಹಾಗೂ ಬಾಣಲೆಗಳನ್ನಿಟ್ಟಿರುವುದನ್ನು ಕಾಣಬಹುದು

"ಅರಮನೆ ಬಳಿ ಹೀಲಿಯಂ ಸಿಲಿಂಡರ್ ಸ್ಫೋಟದ ಬಳಿಕ ಬೀದಿಬದಿಯಲ್ಲಿ ಯಾವುದೇ ಸುರಕ್ಷತಾ ಕ್ರಮವಿಲ್ಲದೆ ಎಲ್‌ಪಿಜಿ ಸಿಲಿಂಡರ್ ಬಳಸುವುದು ಎಷ್ಟು ಸುರಕ್ಷಿತ ಎಂಬ ಪ್ರಶ್ನೆ ಹೆಚ್ಚು ಕಾಡುತ್ತದೆ. ಆದಾಗ್ಯೂ ಜೀವನೋಪಾಯಕ್ಕೆ ವ್ಯಾಪಾರ ಮಾಡುವುದನ್ನು ಆಕ್ಷೇಪಿಸುವುದಿಲ್ಲ. ಆದರೆ ಅಂತಹವರಿಗೆ ಮಾತ್ರ ಅವಕಾಶ ನೀಡಬೇಕು. ಮಹಾನಗರಪಾಲಿಕೆ ಮತ್ತು ಪೊಲೀಸ್ ಇಲಾಖೆ ಜಂಟಿಯಾಗಿ ಸುರಕ್ಷಿತ ವ್ಯಾಪಾರಕ್ಕೆ ಕ್ರಮ ವಹಿಸಬೇಕು. ಪೂರ್ವ, ಪಶ್ಚಿಮ, ಕೇಂದ್ರ, ಉತ್ತರ, ದಕ್ಷಿಣ ಫುಡ್‌ಜೋನ್‌ಗಳನ್ನು ನಿರ್ಮಿಸಿ, ಸುರಕ್ಷತೆಗೆ ಆದ್ಯತೆ ನೀಡಬೇಕು.

-ಸಿ.ನಾರಾಯಣಗೌಡ, ಅಧ್ಯಕ್ಷರು, ಮೈಸೂರು ಹೋಟೆಲ್ ಮಾಲೀಕರ ಸಂಘ

"ಫಾಸ್ಟ್‌ಫುಡ್‌ಗಳು ಹೆಚ್ಚಿದ ಪರಿಣಾಮ ಮೈಸೂರಿನ ಹೆಸರಾಂತ ಹೋಟೆಲ್‌ಗಳು ಸೇರಿದಂತೆ 150ಕ್ಕೂ ಹೆಚ್ಚು ಹೋಟೆಲ್‌ಗಳು ಮುಚ್ಚಿವೆ. ಬಾಡಿಗೆ, ವಿದ್ಯುತ್ ತರ, ಸಿಬ್ಬಂದಿ ವೇತನ, ಇಎಸ್‌ಐ, ಪಿಎಫ್, ಪಾಲಿಕೆ ರಹದಾರಿ, ಕಾರ್ಮಿಕ ಇಲಾಖೆ, ಎಫ್‌ಎಸ್‌ಎಸ್‌ಐ ಅನುಮತಿ, ಜಿಎಸ್‌ಟಿ, ಜನರೇಟರ್ ಅನುಮತಿ, ವಾಯುಮಾಲಿನ್ಯ ನಿಯಂತ್ರಣ ಮಂಡಳಿ, ಅಗ್ನಿಶಾಮಕ ದಳ ಅನುಮತಿ, ಪಾರ್ಕಿಂಗ್ ವ್ಯವಸ್ಥೆ, ಇಷ್ಟೆಲ್ಲಾ ರಹದಾರಿ ಪಡೆದು ಎಲ್ಲಾ ಸೌಲಭ್ಯಗಳೊಂದಿಗೆ ಹೋಟೆಲ್ ಉದ್ಯಮ ನಡೆಸುವುದು ಸವಾಲಾಗಿ ಪರಿಣಮಿಸಿದೆ. ಆದರೆ ಇದ್ಯಾವುದೂ ಬೀದಿಬದಿ ವ್ಯಾಪಾರಿಗಳಿಗೆ ಅನ್ವಯವಾಗುವುದಿಲ್ಲ. ಇದೇ ಪರಿಸ್ಥಿತಿ ಮುಂದುವರೆದರೆ ಉದ್ಯಮಿಗಳೂ ಬೀದಿಗಿಳಿದು ವ್ಯಾಪಾರ ನಡೆಸುವುದು ಅನಿವಾರ್ಯವಾಗುತ್ತದೆ. ಈ ಬಗ್ಗೆ ಉದ್ಯಮಿಗಳು ಒಟ್ಟಾಗಿ ಸೂಕ್ತ ನಿರ್ಣಯ ಕೈಗೊಳ್ಳಬೇಕಿದೆ.

-ನಾರಾಯಣ ವಿ.ಹೆಗಡೆ, ಹೋಟೆಲ್ ಉದ್ಯಮಿ

ಮೈಸೂರು, ಡಿ.26– ಮೈಸೂರು ಅರಮನೆ ಜಯಮಾರ್ತಾಂಡ ದ್ವಾರದ ಬಳಿ ಗುರುವಾರ ರಾತ್ರಿ ಸಂಭವಿಸಿದ ಹೀಲಿಯಂ ಸಿಲಿಂಡರ್ ಸ್ಫೋಟ ನಾಗರಿಕರನ್ನು ಬೆಚ್ಚಿಬೀಳಿಸಿದೆ. ಆದರೆ ಇಂತಹ ಅಪಾಯಕಾರಿ ಪರಿಸ್ಥಿತಿ ನಗರದೆಲ್ಲೆಡೆ ಸೃಷ್ಟಿಯಾಗಿದ್ದರೂ ಆಡಳಿತ ವ್ಯವಸ್ಥೆ ಕಣ್ಮುಚ್ಚಿ ಕುಳಿತಿರುವುದು ಆತಂಕ ಹೆಚ್ಚಿಸಿದೆ.

ಬಲೂನ್‌ಗೆ ಗ್ಯಾಸ್ ತುಂಬುವ ಹೀಲಿಯಂ ಸಿಲಿಂಡರ್ ಸ್ಫೋಟದಿಂದ ಬಲೂನ್ ವ್ಯಾಪಾರಿ ಸಲೀಂ, ಪ್ರವಾಸಿಗರಾದ ಮಂಜುಳಾ ಹಾಗೂ ಲಕ್ಷ್ಮೀ ದುರ್ಮರಣಕ್ಕೀಡಾಗಿದ್ದು, ಇನ್ನೂ ಮೂರ್‍ನಾಲ್ಕು ಮಂದಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಒಂದು ಸಣ್ಣ ಸಿಲಿಂಡರ್‌ನಿಂದ ಈ ರೀತಿ ಭೀಕರ ಅವಘಡ ಸಂಭವಿಸಿದೆ ಎಂದಾದರೆ ಅಣಬೆಗಳಂತೆ ಹಬ್ಬಿರುವ ಫಾಸ್ಟ್‌ಫುಡ್, ಇನ್ನಿತರ ತಿಂಡಿ–ತಿನಿಸುಗಳ ವ್ಯಾಪಾರಿಗಳು ರಸ್ತೆ ಬದಿಯಲ್ಲೇ ಇಟ್ಟುಕೊಳ್ಳುವ ಎಲ್‌ಪಿಜಿ ಸಿಲಿಂಡರ್‌ಗಳು ಸ್ಫೋಟಗೊಂಡರೆ ಯಾವ ಪ್ರಮಾಣದ ಸಾವು–ನೋವು ಸಂಭವಿಸಬಹುದೆಂದು ಊಹಿಸಿಕೊಂಡರೆ ಭಯವಾಗುತ್ತದೆ. ಆದರೆ ಈ ಬಗ್ಗೆ ಅಧಿಕಾರಿ ವರ್ಗ ಮಾತ್ರ ಮೌನವಹಿಸಿದೆ.

ಮೂರ್‍ನಾಲ್ಕು ವರ್ಷಗಳಲ್ಲಿ ಮೈಸೂರು ನಗರದ ಪರಿಸ್ಥಿತಿಯೇ ಬದಲಾಗಿದೆ. ಎಲ್ಲಿ ನೋಡಿದರೂ ಫಾಸ್ಟ್‌ಫುಡ್, ಚಾಟ್ಸ್ ವ್ಯಾಪಾರ ವ್ಯಾಪಿಸಿದೆ. ಪಾದಚಾರಿಗಳ ಸುರಕ್ಷಿತ ಸಂಚಾರಕ್ಕಿರುವ ಫುಟ್‌ಪಾತ್‌ಗಳು ಸಂಪೂರ್ಣ ಅತಿಕ್ರಮಣಗೊಂಡಿವೆ. ತಾವೇ ನಿಗದಿಪಡಿಸಿಕೊಂಡಿರುವ ಗಡಿಯೊಳಗೆ ವಾಹನಗಳು ಮತ್ತು ಗಾಡಿಗಳನ್ನು ನಿಲ್ಲಿಸಿಕೊಂಡು ಎಗ್ಗಿಲ್ಲದೆ ವ್ಯಾಪಾರ ನಡೆಸಲಾಗುತ್ತಿದೆ. ಎಲ್ಲಾ ಬಗೆಯ ಚಾಟ್ಸ್‌ಗಳು, ವೆಜ್ ಹಾಗೂ ನಾನ್‌ವೆಜ್ ಆಹಾರ ಖಾದ್ಯಗಳು ರಸ್ತೆಯಲ್ಲೇ ಸಿಗುತ್ತವೆ. ಸಾರ್ವಜನಿಕರೂ ರಸ್ತೆ ಬದಿ ಆಹಾರಕ್ಕೆ ಆಕರ್ಷಿತರಾಗಿದ್ದಾರೆ. ಕಡಿಮೆ ದರ ಎಂಬ ಕಾರಣಕ್ಕೆ ಕೂಲಿ ಕಾರ್ಮಿಕರು, ವಿದ್ಯಾರ್ಥಿ ಗಳು, ಬಡವರು ಹಾಗೂ ಮಧ್ಯಮ ವರ್ಗದವರು ಫಾಸ್ಟ್‌ಫುಡ್‌ಗಳನ್ನು ಆಶ್ರಯಿಸುವ ಕಾಲ ಬದಲಾಗಿದೆ. ಶ್ರೀಮಂತರೂ ಕೂಡ ಐಷಾರಾಮಿ ಕಾರುಗಳಲ್ಲಿ ಬಂದು ಫಾಸ್ಟ್‌ಫುಡ್‌ನಲ್ಲಿ ಆಹಾರ ಸವಿಯುವ ದೃಶ್ಯ ಸಾಮಾನ್ಯವಾಗಿದೆ. ಪರಿಣಾಮ ಬೀದಿಬದಿ ಆಹಾರ ವ್ಯಾಪಾರವೂ ಎಲ್ಲೆಂದರಲ್ಲಿ ವ್ಯಾಪಿಸಿದೆ.

ಅಪಾಯದ ಅರಿವಿಲ್ಲ: ರಸ್ತೆ ಬದಿಯಲ್ಲಿ ಬಿಸಿ ಬಿಸಿಯಾದ ಆಹಾರ ಸೇವಿಸುವ ಬಹುತೇಕ ಜನರಿಗೆ ತಾವು ಎದುರಿಸಬಹುದಾದ ಅಪಾಯದ ಅರಿವಿರುವುದಿಲ್ಲ. ದೊಡ್ಡ ಬಾಣಲಿ(ಕಡಾಯಿ)ಯೊಳಗೆ ಕುದಿಯುವ ಎಣ್ಣೆಯಲ್ಲಿ ಕರಿಯುವ ವಡೆ, ಬೋಂಡಾ, ಬಜ್ಜಿ, ಪೂರಿ, ಅಗಲವಾದ ಕಲ್ಲಿನ ಮೇಲೆ ಸುಡುವ ದೋಸೆ, ಚಪಾತಿ, ರೊಟ್ಟಿಯನ್ನು ಚಪ್ಪರಿಸುವಾಗ ಪಕ್ಕದಲ್ಲೇ ಇರುವ ಎಲ್‌ಪಿಜಿ ಸಿಲಿಂಡರ್ ಕಣ್ಣಿಗೆ ಕಾಣಿಸುವುದಿಲ್ಲ. ಒಲೆಯ ಪಕ್ಕದಲ್ಲೇ ಸಿಲಿಂಡರ್ ಇಟ್ಟುಕೊಂಡಿರುತ್ತಾರೆ. ವ್ಯಾಪಾರಿಗಳು ಮಾತ್ರವಲ್ಲದೆ ಗ್ರಾಹಕರೂ ಆ ಸಿಲಿಂಡರ್ ಪಕ್ಕದಲ್ಲೇ ನಿಂತಿರುತ್ತಾರೆ, ಓಡಾಡುತ್ತಿರುತ್ತಾರೆ. ಯಾವುದೇ ಸುರಕ್ಷತೆ ಇಲ್ಲದಿರುವುದರಿಂದ ದುರಾದೃಷ್ಟವಶಾತ್ ಏನಾದರು ಸಣ್ಣ ವ್ಯತ್ಯಾಸವಾದರೂ ಸಿಲಿಂಡರ್ ಸ್ಫೋಟಿಸುವ ಸಾಧ್ಯತೆ ಇರುತ್ತದೆ. ವ್ಯಾಪಾರಿಗಳು, ಕೆಲಸಗಾರರು ಹಾಗೂ ಅಮಾಯಕ ಗ್ರಾಹಕರ ಪ್ರಾಣಕ್ಕೂ ಕುತ್ತುಂಟಾಗುತ್ತದೆ.

ಕಾಳಜಿ ಇಲ್ಲದ ಅಧಿಕಾರಿಗಳು: ಎಲ್ಲೆಂದರಲ್ಲಿ ವ್ಯಾಪಿಸುತ್ತಿರುವ ಫುಟ್‌ಪಾತ್ ವ್ಯಾಪಾರದ ಬಗ್ಗೆ ವರ್ಷಗಳಿಂದ ಎಚ್ಚರಿಸುತ್ತಿದ್ದರೂ ದಪ್ಪಚರ್ಮದ ಅಧಿಕಾರಿಗಳು ತಲೆ ಕೆಡಿಸಿಕೊಂಡಿಲ್ಲ. ವಿಜಯನಗರ ನೀರಿನ ಟ್ಯಾಂಕ್ ಬಳಿ ಹೈಟೆನ್ಷನ್ ವಿದ್ಯುತ್ ಸಂಪರ್ಕ ಮಾರ್ಗದ ಕೆಳಗೆ ಸುಮಾರು 50 ಫಾಸ್ಟ್‌ಫುಡ್ ಹಾಗೂ ಚಾಟ್ಸ್ ಗಾಡಿಗಳಿದ್ದು, ಇನ್ನೂ ಐದಾರು ಅಂಗಡಿಗಳು ಸಿದ್ಧವಾಗುತ್ತಿವೆ. ಸಂಜೆ 4ರಿಂದ 11 ಗಂಟೆವರೆಗೂ ಗ್ರಾಹಕರು ಅಧಿಕ ಸಂಖ್ಯೆಯಲ್ಲಿರುತ್ತಾರೆ. ಇಲ್ಲಿ ಮಾಂಸಾಹಾರ ಫಾಸ್ಟ್‌ಫುಡ್‌ಗಳ ಸಂಖ್ಯೆ ಹೆಚ್ಚಾಗಿದ್ದು, ಭಾರೀ ಉರಿ(ಹೈಫ್ಲೇಮ್)ಯಲ್ಲಿ ಆಹಾರ ಬೇಯಿಸಲಾಗುತ್ತದೆ. ಅಕ್ಕಪಕ್ಕ ದಲ್ಲೇ ಗಾಡಿಗಳನ್ನು ನಿಲ್ಲಿಸಿಕೊಳ್ಳುವುದರಿಂದ ಏನಾದರೂ ವ್ಯತ್ಯಾಸವಾದರೆ ಸುತ್ತಮುತ್ತಲ ಗಾಡಿಗಳಿಗೂ ಸಮಸ್ಯೆಯಾಗುವುದು ಖಚಿತ.

ಮತ್ತೆ ತಲೆ ಎತ್ತಿದ ವ್ಯಾಪಾರ: ರಾಷ್ಟ್ರಪತಿ ಪ್ರವಾಸದ ಹಿನ್ನೆಲೆಯಲ್ಲಿ ಕಳೆದ ಆಗಸ್ಟ್‌ನಲ್ಲಿ ಲಲಿತಮಹಲ್ ರಸ್ತೆ ಆರ್ಚ್ ಬಳಿಯ ಎಲ್ಲಾ ಫಾಸ್ಟ್‌ಫುಡ್‌ಗಳನ್ನು ತೆರವುಗೊಳಿಸಿ, ಆ ಸ್ಥಳವನ್ನು ಸಮತಟ್ಟು ಮಾಡಲಾಗಿತ್ತು. ಕೆಲ ದಿನಗಳ ನಂತರ ಮತ್ತೆ ಒಂದೊಂದೇ ಗಾಡಿಗಳು ಈ ರಸ್ತೆಗಿಳಿದಿದ್ದು, ಸದ್ಯ 25ಕ್ಕೂ ಹೆಚ್ಚು ಫಾಸ್ಟ್‌ಫುಡ್ ಗಾಡಿಗಳು ಸಾಲುಗಟ್ಟಿ ನಿಂತಿವೆ. ಇಲ್ಲಿಯೂ ಒಂದೊಂದು ಗಾಡಿಗಳ ಪಕ್ಕ ದಲ್ಲೂ 2–3 ಸಿಲಿಂಡರ್‌ಗಳು, ದೊಡ್ಡ ಒಲೆ, ಬೃಹತ್ ಬಾಣಲಿಗಳು ಕಾಣಸಿಗುತ್ತವೆ. ಎಲ್ಲಾ ಬಗೆಯ ಆಹಾರ ಸಿಗುವುದರಿಂದ ಸಂಜೆಯಾಗುತ್ತಿದ್ದಂತೆ ಜನಜಂಗುಳಿ ನಿರ್ಮಾಣವಾಗುತ್ತದೆ.

ಇಂತಹ ಫುಡ್‌ಕೋರ್ಟ್‌ಗಳು ನಗರದ ಹಲವೆಡೆ ನಿರ್ಮಾಣವಾಗಿವೆ. ಮಹಾರಾಣಿ ಜೂನಿಯರ್ ಕಾಲೇಜು ಬಳಿ ಸಣ್ಣ ಮಳಿಗೆಗಳಲ್ಲಿ ಫಾಸ್ಟ್‌ಫುಡ್ ನಡೆಸುತ್ತಿರುವ ಕೆಲವರು ಫುಟ್‌ಪಾತ್‌ನಲ್ಲೂ ಆಹಾರ, ಚಾಟ್ಸ್ ತಯಾರಿಸುತ್ತಾರೆ. ಸಂಜೆಯಾದರೆ ಈ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಉಂಟಾಗುತ್ತದೆ. ನಗರದ ಬಹುತೇಕ ಕಡೆಗಳಲ್ಲಿ ರಸ್ತೆ ಬದಿ ವ್ಯಾಪಾರ ವ್ಯಾಪಿಸಿಕೊಂಡಿದೆ. ಎಲ್ಲೆಡೆ ಗೃಹಬಳಕೆ ಹಾಗೂ ವಾಣಿಜ್ಯ ಬಳಕೆ ಗ್ಯಾಸ್ ಸಿಲಿಂಡರ್‌ಗಳನ್ನು ಯಾವುದೇ ಸುರಕ್ಷತಾ ಕ್ರಮಗಳಿಲ್ಲದೆ ಬಳಸಲಾಗುತ್ತಿದೆ. ಒಂದು ವೇಳೆ ಬೆಂಕಿ ಅವಘಡ ಸಂಭವಿಸಿದರೆ ತಕ್ಷಣಕ್ಕೆ ನಿಯಂತ್ರಿಸಲು ಯಾವುದೇ ಸುರಕ್ಷತಾ ಉಪಕರಣ ಅಥವಾ ಸಾಧನಗಳನ್ನು ಇಟ್ಟುಕೊಂಡಿಲ್ಲ. ಜಿಲ್ಲಾಡಳಿತ, ಮಹಾನಗರ ಪಾಲಿಕೆ ಹಾಗೂ ನಗರ ಪೊಲೀಸರು ಸಮನ್ವಯತೆಯೊಂದಿಗೆ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕಿದೆ. ವ್ಯಾಪಾರಿಗಳ ಜೀವನಕ್ಕೂ ತೊಂದರೆಯಾಗದಂತೆ ಸಾರ್ವಜನಿಕರ ಸುರಕ್ಷೆ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಜರೂರಿದೆ ಎಂದು ಜನ ಮನವಿ ಮಾಡಿಕೊಂಡಿದ್ದಾರೆ.

ಮೈಸೂರಿನ ಹಲವೆಡೆ ಬಲೂನ್ ವ್ಯಾಪಾರ ಸಾಗಿತ್ತು!

ಮೈಸೂರು, ಡಿ.26(ಎಂಟಿವೈ)– ಹೀಲಿಯಂ ಸಿಲಿಂಡರ್ ಸ್ಫೋಟದಿಂದ ಮೃತಪಟ್ಟಿರುವ ಸಲೀಂ ಹಲವು ತಿಂಗಳಿಂದ ಮೈಸೂರಲ್ಲಿ ವ್ಯಾಪಾರ ಮಾಡುತ್ತಿದ್ದ ಎಂದು ಸಾರ್ವಜನಿಕರು ಮಾಹಿತಿ ನೀಡಿದ್ದಾರೆ. ಮೈಸೂರಿನ ಅರಮನೆ, ಮೃಗಾಲಯ, ದಸರಾ ವಸ್ತುಪ್ರದರ್ಶನ ಗೇಟ್, ಮಹಾರಾಜ ಕಾಲೇಜು, ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ನಡೆಯುವ ವಿವಿಧ ವಸ್ತುಪ್ರದರ್ಶನದ ವೇಳೆ ಅಲ್ಲೆಲ್ಲಾ ನಿಂತುಕೊಂಡು ಬಲೂನು ಮಾರಾಟ ಮಾಡುತ್ತಿರುವುದನ್ನು ಹಲವರು ನೋಡಿರುವುದಾಗಿ ತಿಳಿಸಿದ್ದಾರೆ. ಅಲ್ಲದೆ, ನಾರಾಯಣಶಾಸ್ತ್ರಿ ರಸ್ತೆಯ ಜೂನಿಯರ್ ಮಹಾರಾಣಿ ಕಾಲೇಜಿನ ಮುಂಭಾಗದ ಫುಡ್ ಸ್ಟ್ರೀಟ್ ಹಾಗೂ ದೇವರಾಜ ಅರಸ್ ರಸ್ತೆಯಲ್ಲಿಯೂ ಆಗಾಗ ಬಲೂನು ಮಾರಾಟ ಮಾಡುತ್ತಿದ್ದ ಎಂದು ಕೆಲವರು ಮಾಹಿತಿ ನೀಡಿದ್ದಾರೆ.

ಜನ ಸಂದಣಿ ಸ್ಥಳದಲ್ಲಿ ಆಂಬುಲೆನ್ಸ್, ಅಗ್ನಿಶಾಮಕ ವಾಹನ ನಿಯೋಜನೆ ಅವಶ್ಯ

ಮೈಸೂರು, ಡಿ. 26 (ಆರ್‌ಕೆ)– ಮೈಸೂರು ಅರಮನೆ ಹಾಗೂ ದಸರಾ ವಸ್ತುಪ್ರದರ್ಶನಕ್ಕೆ ಪ್ರತಿನಿತ್ಯ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಿರುವುದರಿಂದ ಅವರ ಸುರಕ್ಷತೆಗಾಗಿ ಅಗ್ನಿಶಾಮಕ ಹಾಗೂ ಆಂಬುಲೆನ್ಸ್ ವಾಹನ ಸೌಲಭ್ಯವನ್ನು ಒದಗಿಸುವುದು ಅತ್ಯಗತ್ಯ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ.



ಸಾಮಾನ್ಯವಾಗಿ ಪ್ರವಾಸಿ ತಾಣಗಳಲ್ಲಿ ವಾರಾಂತ್ಯ ಹಾಗೂ ರಜಾ ದಿನಗಳಲ್ಲಿ ಹೆಚ್ಚು ಮಂದಿ ಸೇರುತ್ತಾರೆ. ಪ್ರವಾಸಿಗರು, ಮಕ್ಕಳು, ವ್ಯಾಪಾರಿಗಳು ಇರುವೆಡೆ ಬಲೂನ್ ಮಾರಾಟ ಮಾಡುವುದು ಸರ್ವೇ ಸಾಮಾನ್ಯವಾಗಿದೆ ಅದುಲ್ಲೂ ತಮ್ಮ ಬಳಿಯೇ ಸಿಲಿಂಡರ್‌ಗಳನ್ನು ಇಟ್ಟು ಕೊಂಡು ಗ್ಯಾಸ್ ತುಂಬಿ ಮಕ್ಕಳನ್ನು ಆಕರ್ಷಿಸುವವರ ಸಂಖ್ಯೆಯೂ ಇತ್ತೀಚೆಗೆ ಜಾಸ್ತಿಯಾಗುತ್ತಿದೆ. ಗುರುವಾರ (ಡಿ.26) ಅರಮನೆಯ ಜಯಮಾರ್ತಾಂಡ ದ್ವಾರದ ಬಳಿ ಅನಿಲ ತುಂಬಿದ ಸಿಲಿಂಡರ್ ಸ್ಫೋಟ ಗೊಂಡ ಪರಿಣಾಮ ಓರ್ವ ಸಾವನ್ನಪ್ಪಿದ್ದು ಹಲವರು ಗಾಯಗೊಂಡಿದ್ದಾರೆ.

ಘಟನೆ ನಡೆದ ವೇಳೆ ನೂರಾರು ಮಂದಿ ಅಲ್ಲಿ ನೆರೆದಿದ್ದ ಕಾರಣ, ಹಾರ್ಡಿಂಗ್ ಸರ್ಕಲ್ ಮತ್ತು ಗನ್‌ಹೌಸ್ ಸರ್ಕಲ್ ನಡುವೆ ಟ್ರಾಫಿಕ್ ಜಾಮ್ ಆಗಿದ್ದರಿಂದ ಅಲ್ಲಿಗೆ ಆಂಬುಲೆನ್ಸ್ ಮತ್ತು ಅಗ್ನಿಶಾಮಕ ವಾಹನ ಸರಿಯಾದ ಸಮಯಕ್ಕೆ ಅಲ್ಲಿಗೆ ತಲುಪಲು ಸಾಧ್ಯವಾಗಲಿಲ್ಲ. ಒಂದು ವೇಳೆ ಅರಮನೆ ಆವರಣದಲ್ಲೇ ಈ ವ್ಯವಸ್ಥೆ ಲಭ್ಯವಿದ್ದರೆ ಘಟನೆ ನಡೆದ ತಕ್ಷಣ ಸ್ಥಳಕ್ಕೆ ಧಾವಿಸಿ ಗಾಯಾಳುಗಳ ಚಿಕಿತ್ಸೆಗೆ ಸಹಕಾರಿಯಾಗುತ್ತಿತ್ತು ಹಾಗೂ ಅಗ್ನಿಶಾಮಕ ಸಿಬ್ಬಂದಿ ತಕ್ಷಣ ಕಾರ್ಯಾಚರಣೆ ಮಾಡುತ್ತಿದ್ದರು ಎಂಬ ಅಭಿಪ್ರಾಯ ಸಾರ್ವಜನಿಕರಿಂದ ಕೇಳಿ ಬರುತ್ತಿದೆ.

ಗುರುವಾರ ಆಗಿದ್ದೇನು?: ಗುರುವಾರ ರಾತ್ರಿ ಸುಮಾರು 8.30ಕ್ಕೆ ಸಿಲಿಂಡರ್ ಸ್ಫೋಟವಾಯಿತು. 8.50ಕ್ಕೆ ಗಾಯಗೊಂಡ ಪೈಕಿ ಒಬ್ಬರನ್ನು ಪಿಸಿಆರ್ ವಾಹನದಲ್ಲಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. 8.54ಕ್ಕೆ ಖಾಸಗಿ ಆಂಬುಲೆನ್ಸ್ ಬಂದಿತು. ಆದರೆ ಅದರಲ್ಲಿ ಆಮ್ಲಜನಕಯುಕ್ತ ಉಪಕರಣಗಳ ಕೊರತೆಯಿತ್ತು. ಹೊಟ್ಟೆ ಭಾಗಕ್ಕೆ ತೀವ್ರ ಗಾಯಗಳಾಗಿ ರಕ್ತಸ್ರಾವದಿಂದ ಒದ್ದಾಡುತ್ತಿದ್ದ ಮಹಿಳೆಯನ್ನು ಕಡೆಗೂ ಅದೇ ವಾಹನದಲ್ಲಿ ಸಾಗಿಸಲಾಯಿತು. ರಾತ್ರಿ 9.15 ಗಂಟೆಗೆ 108 ಆಂಬುಲೆನ್ಸ್ ಬಂದಿತು. ಅದರಲ್ಲಿ ಬಲೂನ್ ಮಾರಾಟಗಾರನ ಮೃತದೇಹವನ್ನು ಮಾತ್ರ ಸಾಗಿಸಲು ಸಾಧ್ಯವಾಯಿತು.

ಸಾವಿರಾರು ಮಂದಿ ಸೇರುವ ಅರಮನೆಯಲ್ಲಿ ಪ್ರತ್ಯೇಕ ಆಂಬುಲೆನ್ಸ್ ಮತ್ತು ಅಗ್ನಿಶಾಮಕ ವಾಹನ ಸೌಲಭ್ಯವಿದ್ದರೆ ಅಗ್ನಿ ಅವಘಡ, ಸ್ಫೋಟದಂತಹ, ತುರ್ತು ಸಂದರ್ಭಗಳಲ್ಲಿ ತಕ್ಷಣ ಕಾರ್ಯಾಚರಣೆ ನಡೆಸಲು ಅನುಕೂಲವಾಗುತ್ತದೆ. ಆದ್ದರಿಂದ ಪ್ರಾಣಾಪಾಯವನ್ನು ತಪ್ಪಿಸಬಹುದಲ್ಲದೇ ಗಾಯಾಳುಗಳನ್ನು ಸರಿಯಾದ ಸಮಯದಲ್ಲಿ ಪ್ರಥಮ ಚಿಕಿತ್ಸೆ ನೀಡಿ ಆಸ್ಪತ್ರೆ ಸಾಗಿಸಬಹುದು.

ಸಾರ್ವಜನಿಕರು ಹಾಗೂ ಪ್ರವಾಸಿಗರಿಂದ ಪ್ರವೇಶ ಶುಲ್ಕ ಸಂಗ್ರಹಿಸುತ್ತಿರುವುದರಿಂದ ಅವರಿಗೆ ಸುರಕ್ಷಾ ಸೌಲಭ್ಯಗಳನ್ನು ಕಲ್ಪಿಸುವುದು ಅರಮನೆ ಮಂಡಳಿಯ ಜವಾಬ್ದಾರಿಯಾಗಿದೆ ಎಂದೂ ನಾಗರಿಕರು ಅಭಿಪ್ರಾಯಪಟ್ಟಿದ್ದಾರೆ.

ಸ್ಫೋಟಕ ಹೀಲಿಯಂ ತಯಾರಿಕೆ ಸಂಬಂಧ ನಾನಾ ಆಯಾಮದಲ್ಲಿ ಪೊಲೀಸರ ತನಿಖೆ



ಹೆಚ್ಚಿನ ತನಿಖೆಗಾಗಿ ಸ್ಫೋಟಗೊಂಡ ಸ್ಥಳದಲ್ಲಿ ಬ್ಯಾರಿಕೇಡ್ ಅಳವಡಿಸಿರುವುದು.

ಮೈಸೂರು, ಡಿ.26(ಎಂಟಿವೈ)– ಅರಮನೆ ಮುಂಭಾಗ ಹೀಲಿಯಂ ಸಿಲಿಂಡರ್ ಸ್ಫೋಟ ಪ್ರಕರಣ ಮೇಲ್ನೋಟಕ್ಕೆ ಆಕಸ್ಮಿಕ ಘಟನೆ ಎಂದು ಕಂಡು ಬಂದರೂ, ವಿವಿಧ ಪೌಡರ್ ಬಳಸಿ ಹೀಲಿಯಂ ತಯಾರಿಸುತ್ತಿರುವ ನಿಟ್ಟಿನಲ್ಲಿ ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ಆರಂಭಿಸಿದ್ದಾರೆ.

ಬಲೂನು ಮಾರಾಟಗಾರ ಉತ್ತರ ಪ್ರದೇಶ ಮೂಲದ ಸಲೀಂ ವಿವಿಧ ರಾಸಾಯನಿಕ ಪೌಡರ್ ಬಳಸಿ ತಾನೇ ಹೀಲಿಯಂ ತಯಾರಿಸಿಕೊಳ್ಳುತ್ತಿದ್ದ ಎಂಬ ಸ್ಫೋಟಕ ಮಾಹಿತಿ ಪೊಲೀಸರಿಗೆ ಲಭ್ಯವಾಗಿದೆ. ಇದನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಾನಾ ಆಯಾಮಗಳಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದು, ಬಲೂನು ವ್ಯಾಪಾರಿ ಸಲೀಂ ಪತ್ನಿಯೊಂದಿಗೆ ವಾಸಿಸುತ್ತಿದ್ದ ಮಂಡಿ ಮೊಹಲ್ಲಾದ ಕೊಠಡಿಯೊಂದರಲ್ಲಿ ಶೋಧ ನಡೆಸಿದ್ದಾರೆ.

ಆತ ನೆಲೆಸಿದ್ದ ಬಾಡಿಗೆ ರೂಮ್ ಬಳಿ ಎರಡು ಸೈಕಲ್ ಪತ್ತೆಯಾಗಿದ್ದು, ಅವುಗಳ ಪರಿಶೀಲಿಸಲಾಗಿದೆ. ಅವುಗಳ ಮೂಲಕವೇ ಪ್ರವಾಸಿ ತಾಣಗಳಿಗೆ ಹೀಲಿಯಂ ಸಿಲಿಂಡರ್‌ನೊಂದಿಗೆ ತೆರಳಿ ಬಲೂನು ಮಾರಾಟ ಮಾಡುತ್ತಿದ್ದ ಎನ್ನಲಾಗಿದೆ.

ಎಫ್‌ಎಸ್‌ಎಲ್ ತಂಡದಿಂದ ಪರಿಶೀಲನೆ: ಹೀಲಿಯಂ ಸಿಲಿಂಡರ್ ಸ್ಫೋಟಗೊಂಡ ಸ್ಥಳಕ್ಕೆ ಎಫ್‌ಎಸ್‌ಎಲ್ ತಂಡ ಭೇಟಿ ನೀಡಿ, ಅಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಅವಶೇಷಗಳನ್ನು ಶುಕ್ರವಾರ ಬೆಳಗ್ಗೆಯೂ ಪರಿಶೀಲಿಸಿತು. ಕಳೆದ ರಾತ್ರಿಯೇ ಘಟನಾ ಸ್ಥಳಕ್ಕೆ ಆಗಮಿಸಿದ್ದ ಎಫ್‌ಎಸ್‌ಎಲ್ ತಂಡ ಕೆಲ ಮಾದರಿ ಸಂಗ್ರಹಿಸಿತ್ತು ಅಲ್ಲದೆ, ಸ್ಫೋಟದ ತೀವ್ರತೆ ಹಾಗೂ ಸಿಲಿಂಡರ್ ಛಿದ್ರವಾಗಿರುವ ಮಾದರಿ ಕಲೆ ಹಾಕಿತ್ತು. ಆದರೂ, ಇಂದು ಬೆಳಗ್ಗೆ ಮತ್ತೆ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿತು.

ಮಾಹಿತಿ ಪಡೆದ ಎನ್‌ಐಎ: ಸಿಲಿಂಡರ್ ಸ್ಫೋಟದ ಸ್ಥಳಕ್ಕೆ ರಾಷ್ಟ್ರೀಯ ತನಿಖಾ ತಂಡ (ಎನ್‌ಐಎ) ತಂಡ ಭೇಟಿ ನೀಡಿ ಪರಿಶೀಲನೆ ನಡೆಸಲಿದೆ ಎಂಬ ಮಾಹಿತಿ ಇತ್ತು. ಆದರೆ, ಸ್ಫೋಟದಲ್ಲಿ ಹೀಲಿಯಂ ಸಿಲಿಂಡರ್ ಹೊರತುಪಡಿಸಿ ಯಾವುದೇ ಸ್ಫೋಟಕ ವಸ್ತು ಬಳಕೆಯಾಗದೆ ಇರುವುದು ಖಚಿತವಾದ ಹಿನ್ನೆಲೆಯಲ್ಲಿ ಎನ್‌ಐಎ ತಂಡ ಮೈಸೂರು ಪೊಲೀಸರಿಂದ ಘಟನೆಯ ಬಗ್ಗೆ ಮಾಹಿತಿಯನ್ನಷ್ಟೇ ಪಡೆದಿದೆ ಎನ್ನಲಾಗಿದೆ.

ಅಧಿಕ ರಸಾಯನಿಕ ಪೌಡರ್ ಸ್ಫೋಟಕ್ಕೆ ಕಾರಣವಾಯ್ತಾ?

ಮೈಸೂರು,ಡಿ.26(ಎಂಟಿವೈ)– ಹೀಲಿಯಂ ಸಿಲಿಂಡರ್‌ಗೆ ಹೆಚ್ಚು ರಾಸಾಯನಿಕ ಪೌಡರ್ ತುಂಬಿದ್ದೇ ದುರಂತಕ್ಕೆ ಕಾರಣವಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಬಲೂನು ಮಾರಾಟಗಾರ ಸಲೀಂ ಗುರುವಾರ ಬೆಳಗ್ಗೆ ಹೆಚ್ಚು ಜನ ಸೇರಿದ್ದ ಸಂತ ಫಿಲೋಮಿನಾ ಚರ್ಚ್ ಬಳಿ ಬಲೂನು ಮಾರಾಟ ಮಾಡಿದ್ದಾನೆ. ಮಧ್ಯಾಹ್ನದ ನಂತರ ಅರಮನೆಯ ಜಯಮಾರ್ತಾಂಡ ಗೇಟ್ ಮುಂದೆ ಬಿ.ಎನ್.ರಸ್ತೆ ಬದಿ ಅಂಚಿನಲ್ಲಿ ಬಲೂನು ಮಾರಾಟ ಮಾಡಲಾರಂಭಿಸಿದ್ದಾನೆ. ಅರಮನೆ ಹಾಗೂ ದಸರಾ ವಸ್ತುಪ್ರದರ್ಶನಕ್ಕೆ ಬರುವ ಮಕ್ಕಳನ್ನು ಆಕರ್ಷಿಸಲು ರಸ್ತೆ ಬದಿ ಬ್ಯಾರಿಕೇಡ್‌ಗೆ ಐದಾರು ಬಲೂನು ಕಟ್ಟಿದ್ದಾನೆ.

ಸಾಕಷ್ಟು ಬಲೂನು ಸಹ ಮಾರಾಟ ಮಾಡಿದ್ದಾನೆ. ಅರಮನೆ ಹಾಗೂ ದಸರಾ ವಸ್ತು ಪ್ರದರ್ಶನದಿಂದ ಹೊರಗೆ ಬರುವ ಜನ ಬಲೂನು ಖರೀದಿಸಬಹುದೆಂಬ ನಿರೀಕ್ಷೆಯಿಂದ ಸಿಲಿಂಡರ್‌ಗೆ ರಾಸಾಯನಿಕ ಪೌಡರ್ ಅನ್ನು ಹೆಚ್ಚಿನ ಪ್ರಮಾಣದಲ್ಲಿ ತುಂಬಿ, ಸೋಡಿಯಂ ಮಿಕ್ಸ್ ಮಾಡಿರುವ ಸಾಧ್ಯತೆ ಇದೆ. ಹಾಗಾಗಿ ನಿಗಧಿಗಿಂತ ಹೆಚ್ಚಿನ ಪ್ರಮಾಣದಲ್ಲಿ ರಾಸಾಯನಿಕ ತುಂಬಿದ್ದು, ಒತ್ತಡ ಹೆಚ್ಚಾಗಿ ಸಿಲಿಂಡರ್ ಸ್ಫೋಟಗೊಂಡಿರುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಮಾದಕ ವಸ್ತುಗಳ ದುಷ್ಪರಿಣಾಮದ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಿ

ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಲ್ಲಿಕ್

ಮೈಸೂರು,ಡಿ.26– ಮಾದಕ ವಸ್ತುಗಳ ಜಾಲ ದಿನದಿಂದ ದಿನಕ್ಕೆ ಹೆಚ್ಚಾಗಿ ಬೆಳೆಯುತ್ತಿರುವುದರಿಂದ ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕು ಎಂದು ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಲ್ಲಿಕ್ ಹೇಳಿದರು.

ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ನಾರ್ಕೋ ಸಮನ್ವಯ ಕೇಂದ್ರ (NCORD) ದ ಜಿಲ್ಲಾ ಮಟ್ಟದ ಜಿಲ್ಲಾ ಕಮಿಟಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾದಕ ವಸ್ತುಗಳ ಬಗ್ಗೆ ಶಾಲಾ ಕಾಲೇಜುಗಳಲ್ಲಿ ಅರಿವು ಕಾರ್ಯಕ್ರಮ ನಡೆಸಬೇಕು. ವಿದ್ಯಾರ್ಥಿಗಳು ಕೆಲಸ ಮಾಡುವ ಕಡೆಗಳಲ್ಲಿ ಮಾದಕ ವಸ್ತುಗಳ ಬಳಕೆ ಮಾಡುವ ಸಂಭವ ಹೆಚ್ಚಾಗಿದ್ದು, ಅಂತಹ ಕಡೆಗಳಲ್ಲಿ ಹೆಚ್ಚು ಗಮನ ನೀಡಿ ಅವರಲ್ಲಿ ಅರಿವು ಮೂಡಿಸಬೇಕು. ಶಾಲಾ–ಕಾಲೇಜುಗಳಲ್ಲಿ ಸಿ.ಸಿ ಟಿವಿ ಕ್ಯಾಮರಾಗಳನ್ನು ಅಳವಡಿಸುವುದರ ಜೊತೆಗೆ ಗ್ರೇ ಏರಿಯಾಗಳು ಇರುವಂತಹ ಕಡೆ ಶಿಕ್ಷಕರು ಹೆಚ್ಚು ಗಮನ ಹರಿಸಬೇಕು ಎಂದು ತಿಳಿಸಿದರು.

ಶಾಲಾ–ಕಾಲೇಜುಗಳ ಹತ್ತಿರ, ಸಾರ್ವಜನಿಕ ಸ್ಥಳಗಳಲ್ಲಿ ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಮಾಹಿತಿ ಇರುವ ಬ್ಯಾನರ್‌ಗಳನ್ನು ಅಳವಡಿಸ ಬೇಕು. ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿ ಮಾದಕ ವಸ್ತುಗಳ ಬಳಕೆ ನಿಷೇಧ ಮಾಡುವಲ್ಲಿ ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು.

ಮಾದಕ ವಸ್ತುಗಳ ಕಳ್ಳ ಸಾಗಾಣಿಕೆ ಹಾಗೂ ಮಾದಕ ವಸ್ತುಗಳ ಜಾಲ ನಡೆಯುತ್ತಿರುವುದರ ಬಗ್ಗೆ ಮಾಹಿತಿ ತಿಳಿದುಬಂದಲ್ಲಿ ಪೊಲೀಸ್ ಅವರಿಗೆ ಮಾಹಿತಿಯನ್ನು ನೀಡಬೇಕು. ಪೊಲೀಸರ ಜೊತೆಗೂಡಿ ತನಿಖೆ ನಡೆಸುವುದು ಸೂಕ್ತ ಎಂದು ತಿಳಿಸಿದರು.

ಹೊಸ ವರ್ಷ ಪ್ರಾರಂಭವಾಗುತ್ತಿರುವುದರಿಂದ ಹೊಸ ವರ್ಷ ಆಚರಣೆಯಲ್ಲಿ ಯಾವುದೇ ಮಾದಕ ವಸ್ತುಗಳ ಬಳಕೆ ಯಾಗದಂತೆ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ತಿಳಿಸಿದರು. ಸಭೆಯಲ್ಲಿ ಡಿಸಿಪಿ ಸುಂದರ್ ರಾಜ್, ಎ.ಎಸ್.ಐ ನಾಗರಾಜ್ ನಾಯಕ್ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರಲ್ಲಿ ಸಿಲಿಂಡರ್ ಸಹಿತ ಬಲೂನ್ ಮಾರಾಟ ನಿಷೇಧಕ್ಕೆ ಡಿಸಿ ಚಿಂತನೆ

ಮೈಸೂರು, ಡಿ. 26 (ಆರ್‌ಕೆ)– ಮೈಸೂರು ಅರಮನೆಯ ಪೂರ್ವ ದ್ವಾರ (ಜಯಮಾರ್ತಾಂಡ ಗೇಟ್) ದ ಬಳಿ ಹೀಲಿಯಂ ಸಿಲಿಂಡರ್ ಸ್ಫೋಟಗೊಂಡು ಬಲೂನ್ ಮಾರಾಟಗಾರ ಸಾವನ್ನಪ್ಪಿದ್ದು, ಇತರರು ಗಾಯಗೊಂಡ ಬೆನ್ನಲ್ಲೇ ಜಿಲ್ಲಾಡಳಿತವು ಸಿಲಿಂಡರ್‌ನೊಂದಿಗೆ ಬಲೂನ್ ಮಾರಾಟ ಮಾಡುವುದನ್ನು ನಿಷೇಧಿಸಲು ಚಿಂತನೆ ನಡೆಸಿದೆ.



ಈ ಹಿಂದೆ ಬಲೂನ್ ಸ್ಫೋಟಗೊಂಡು ಹಲವರು ಗಾಯಗೊಂಡಿದ್ದ ಘಟನೆಗಳು ಸಂಭವಿಸಿದ್ದರು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಇದೀಗ ಅರಮನೆ ಬಳಿ ಸಂಭವಿಸಿದ ಸ್ಫೋಟದ ತೀವ್ರತೆ ಅರಿ ವಾಗಿ ಮುಂದೆ ಅನಿಲ ತುಂಬಿದ ಬಲೂನ್ ಮಾರಾಟ ನಿಯಂತ್ರಿಸಲು ಮುಂದಾಗಿರುವ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳೊಂದಿಗೆ ಚರ್ಚಿಸಿ ಶೀಘ್ರ ನಿರ್ಧಾರ ಕೈಗೊಂಡು ಆದೇಶ ಹೊರಡಿಸುತ್ತೇವೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಬಲೂನ್‌ಗಳನ್ನು ತುಂಬಲು ಗ್ಯಾಸ್ ಸಿಲಿಂಡರ್‌ಗಳನ್ನು ಬಳಸುವಾಗ ಅದು ಎಷ್ಟು ಅಪಾಯಕಾರಿ ಎಂದು ನಾವು ನೋಡಿದ್ದೇವೆ. ಪ್ರಸ್ತುತ, ಈ ಚಟುವಟಿಕೆಯನ್ನು ನಿಯಂತ್ರಿಸಲು ಹಾಗೂ ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಗ್ಯಾಸ್ ತುಂಬಿದ ಬಲೂನ್ ಮಾರಾಟವನ್ನು ನಿಷೇಧಿಸಲು ಚಿಂತನೆ ನಡೆಸುತ್ತಿದ್ದೇವೆ. ಈ ಹಿಂದೆ ನಡೆದಿರುವ ಇದೇ ಮಾದರಿಯ ಘಟನೆಗಳ ಬಗ್ಗೆ ಮಾಹಿತಿ ಅವಲೋಕಿಸಿ ಕ್ರಮ ಕೈಗೊಳ್ಳುತ್ತೇವೆ ಎಂದರು.

ಕೆಲ ಘಟನೆಗಳು: 2019 ರ ಫೆಬ್ರವರಿ 15 ರಂದು ಸುತ್ತೂರು ಜಾತ್ರೆಯಲ್ಲಿ ಏರ್ಪಡಿಸಿದ್ದ ಕುಸ್ತಿ ಪಂದ್ಯಾವಳಿ ಉದ್ಘಾಟನೆ ವೇಳೆ ಅನಿಲ ತುಂಬಿದ ಬಲೂನ್ ಸ್ಫೋಟಗೊಂಡ ಪರಿಣಾಮ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಗಳು ಸೇರಿದಂತೆ 10ಕ್ಕೂ ಹೆಚ್ಚು ಮಂದಿಗೆ ಸಣ್ಣ–ಪುಟ್ಟ ಗಾಯಗಳಾಗಿದ್ದವು. ಅದೇ ರೀತಿ 2018ರ ಮಾರ್ಚ್ 23ರಂದು ಶ್ರೀರಂಗಪಟ್ಟಣ ತಾಲೂಕಿನ ಕಾವೇರಿಪುರದಲ್ಲಿ ಸಾರಜನಕ ಅನಿಲ ತುಂಬಿದ ಬಲೂನ್ ಸ್ಫೋಟಗೊಂಡು 6 ಮಕ್ಕಳು ಸೇರಿದಂತೆ 11 ಮಂದಿ ಗಾಯಗೊಂಡಿದ್ದರು. ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ಅವರನ್ನು ಸ್ವಾಗತಿಸಲು ಬಲೂನ್‌ಗಳನ್ನು ಸಿದ್ಧಪಡಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಶಿವಮ್ಮ ನಿಧನ



ಮೈಸೂರು, ಡಿ.26(ಜಿಎ)– ಮೈಸೂರಿನ ದೈಹಿಕ ಶಿಕ್ಷಣ ಇಲಾಖೆ ನಿವೃತ್ತ ಅಧಿಕಾರಿ ಸಿದ್ದರಾಜು ಅವರ ತಾಯಿ ಶಿವಮ್ಮ (84) ಅವರು ಶುಕ್ರವಾರ ನಿಧನರಾದರು.

ಚಾಮರಾಜನಗರ ಜಿಲ್ಲೆಯ, ಕೊಳ್ಳೇಗಾಲ ತಾಲೂಕಿನ ಹೊಂಡರಬಾಳು ಗ್ರಾಮದವರಾಗಿರುವ ಇವರು ಕೆಲಸ ನಿಮಿತ್ತ ಸುಮಾರು ನಾಲ್ಕು ದಶಕಗಳ ಕಾಲ ನೀಲಗಿರಿ ಜಿಲ್ಲೆಯ ನಡುಬೆಟ್ಟದ ಭಾಗದಲ್ಲಿರುವ ಅಶಿಂಗ್ಟನ್ ಎಸ್ಟೇಟ್‌ನಲ್ಲಿ ಕೆಲಸ ಮಾಡಿಕೊಂಡಿದ್ದು, ಮಕ್ಕಳಿಗೆ ಕನ್ನಡದಲ್ಲಿ ವಿದ್ಯಾಭ್ಯಾಸ ನೀಡಿದ್ದರು. ಮಕ್ಕಳು ಸರ್ಕಾರಿ ಕೆಲಸದಲ್ಲಿ ಇದ್ದು ಈಗ ನಿವೃತ್ತಿ ಹೊಂದಿದ್ದಾರೆ. ಅಂತ್ಯಕ್ರಿಯೆ ಹೊಂಡರಬಾಳು ಗ್ರಾಮದಲ್ಲಿ ಶನಿವಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಇರುದಿಯ ನಾದನ್



ಮೈಸೂರು, ಡಿ.26– ಮೈಸೂರಿನ ಗಾಂಧಿನಗರದ ಮಹದೇವಪುರ ಮುಖ್ಯ ರಸ್ತೆ ನಿವಾಸಿ ಎಂ.ಇರುದಿಯ ನಾದನ್ (69) ಅವರು ಇಂದು ಮಧ್ಯಾಹ್ನ ನಿಧನರಾದರು.

ಇವರು ಮಕ್ಕಳಾದ ಅಂತೋಣಿ ಅನ್ಬನ್, ಮರಿಸೂಸಂಮೈ ಆನಂದ್, ಜೀವನ್ ಅಭಿಲಾಷ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 1 ಗಂಟೆಗೆ ಮಹದೇವಪುರ ಮುಖ್ಯ ರಸ್ತೆಯಲ್ಲಿರುವ ರೋಮನ್ ಕ್ಯಾಥೋಲಿಕ್ ಸ್ಮಶಾನದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕುಟ್ಟಂಡ ನಳಿನಿ ಉತ್ತಯ್ಯ



ಮೈಸೂರು, ಡಿ.26–ಮೈಸೂರಿನ ವಿಜಯನಗರ ಮೂರನೇ ಹಂತದ ನಿವಾಸಿ ದಿವಂಗತ ಕುಟ್ಟಂಡ ಉತ್ತಯ್ಯ ಅವರ ಪತ್ನಿ ಕುಟ್ಟಂಡ ನಳಿನಿ ಉತ್ತಯ್ಯ(ತಾಮನೆ ಪಟ್ಟಡ) ಅವರು ಶುಕ್ರವಾರ ನಿಧನರಾದರು. ಅವರಿಗೆ 82 ವರ್ಷ ವಯಸ್ಸಾಗಿತ್ತು. ಮೃತರು ಪುತ್ರ ಮಂಗಳೂರಿನ ಎಸಿಪಿ ಬೆಳ್ಳಿಯಪ್ಪ, ಪುತ್ರಿ ಕಳ್ಳಿಚಂಡ ಅನು ಕಾವೇರಮ್ಮ ಮುದ್ದುರಾಜು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನಾಳೆ (ಡಿ.27) ಮಧ್ಯಾಹ್ನ 2.30ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಎ. ಜಾನ್



ಮೈಸೂರು, ಡಿ. 26– ರೆವರೆಂಡ್ ಫಾದರ್ ರೇಮಂಡ್ ಅವರ ಚಿಕ್ಕಪ್ಪ ಹಾಗೂ ರೆವರೆಂಡ್ ಫಾದರ್ ಜೋಸೆಫ್ ಅವರ ಸೋದರಳಿಯ ಎ. ಜಾನ್(58) ಅವರು ಇಂದು ರಾತ್ರಿ ನಿಧನರಾದರು. ಇವರ ಅಂತ್ಯಕ್ರಿಯೆ ನಾಳೆ (ಡಿ. 27) ಮಧ್ಯಾಹ್ನ 3 ಗಂಟೆಗೆ ನಾಗನಹಳ್ಳಿಯ ಸೆಕ್ರೇಡ್ ಹಾರ್ಟ್ ಚರ್ಚ್ ಆವರಣದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಉತ್ತಮ ರೀತಿ ಕಾನೂನು–ಸುವ್ಯವಸ್ಥೆ ಕಾಪಾಡಬೇಕಿದೆ

ಹೀಲಿಯಂ ಬಲೂನ್ ಸ್ಫೋಟದಿಂದ ಗಾಯಗೊಂಡವರ ಭೇಟಿ ಬಳಿಕ ಸಂಸದ ಯದುವೀರ್ ಆಗ್ರಹ

ಮೈಸೂರು, ಡಿ.26– ಮೈಸೂರಲ್ಲಿ ಭದ್ರತೆ ಹಾಗೂ ಕಾನೂನು–ಸುವ್ಯವಸ್ಥೆ ಉತ್ತಮಗೊಳಿಸಬೇಕಿದೆ ಎಂದು ಸಂಸದ ಯದುವೀರ್ ಆಗ್ರಹಿಸಿದ್ದಾರೆ.

ಶಾಸಕ ಟಿ.ಎಸ್.ಶ್ರೀವತ್ಸ ಅವರೊಂದಿಗೆ ಕೆ.ಆರ್.ಆಸ್ಪತ್ರೆಗೆ ಭೇಟಿ ನೀಡಿ, ಹೀಲಿಯಂ ಸಿಲಿಂಡರ್ ಸ್ಫೋಟದಿಂದ ಗಾಯಗೊಂಡವರ ಆರೋಗ್ಯ ಸ್ಥಿತಿಯ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದ ಬಳಿಕ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

ಮೈಸೂರಲ್ಲಿ ನಡೆದಿರುವ ಅತ್ಯಾಚಾರ, ಹತ್ಯೆ, ಮಾದಕ ವಸ್ತು ತಯಾರಿಕಾ ಘಟಕ ಪತ್ತೆಯಂತಹ ಹಲವು ಪ್ರಕರಣಗಳನ್ನು ಪ್ರಸ್ತಾಪಿಸಿ, ನಗರ ಸೇರಿದಂತೆ ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಹದಗೆಟ್ಟಿದೆ ಎಂದು ಅಧಿವೇಶನದಲ್ಲಿ ಮಾತನಾಡಿದ್ದೇನೆ. ಆದರೆ ಅರಮನೆ ಜಯಮಾರ್ತಾಂಡ ದ್ವಾರದ ಬಳಿಯೇ ಗುರುವಾರ ರಾತ್ರಿ ನಡೆದ ಸಿಲಿಂಡರ್ ಸ್ಫೋಟ, ಒಂದು ಅಪಘಾತ. ಈ ವಿಚಾರದಲ್ಲಿ ನಾನು ರಾಜಕೀಯ ಮಾಡಲು ಹೋಗುವುದಿಲ್ಲ. ರಾಜ್ಯ ಸರ್ಕಾರವನ್ನೂ ದೂಷಿಸುವುದಿಲ್ಲ. ಆದಾಗ್ಯೂ ಈ ಘಟನೆ ಆಕಸ್ಮಿಕವೋ ಅಥವಾ ಉದ್ದೇಶಪೂರ್ವಕವಾಗಿ ನಡೆದಿದೆಯೋ ಎಂಬುದನ್ನು ತಜ್ಞರು ನಿರ್ಧರಿಸುತ್ತಾರೆ. ಅವರ ಮಾಹಿತಿ ನಂತರ ಸ್ಪಷ್ಟವಾಗಿ ಹೇಳಬಹುದು ಎಂದರು.



ಮೈಸೂರು–ಕೊಡಗು ಸಂಸದ ಯದುವೀರ್ ಹಾಗೂ ಶಾಸಕ ಟಿ.ಎಸ್.ಶ್ರೀವತ್ಸ ಅವರು ಕೆ.ಆರ್.ಆಸ್ಪತ್ರೆಗೆ ಶುಕ್ರವಾರ ಸಂಜೆ ಭೇಟಿ ನೀಡಿ, ಹೀಲಿಯಂ ಸಿಲಿಂಡರ್ ಸ್ಫೋಟದಿಂದ ಗಾಯಗೊಂಡವರ ಆರೋಗ್ಯ ಸ್ಥಿತಿ ವಿಚಾರಿಸಿದರು.

ಪ್ರವಾಸಿ ಕೇಂದ್ರಗಳಲ್ಲಿ ಹೆಚ್ಚಿನ ಭದ್ರತೆ ಜೊತೆಗೆ ಉತ್ತಮ ಕಾನೂನು–ಸುವ್ಯವಸ್ಥೆ ಕಾಯ್ದುಕೊಳ್ಳಬೇಕು. ಹಂಪಿಯಲ್ಲಿ ಅತ್ಯಾಚಾರ–ಹತ್ಯೆ ಪ್ರಕರಣದ ನಂತರ ಶೇ.80ರಷ್ಟು ವಿದೇಶಿ ಪ್ರವಾಸಿಗರ ಸಂಖ್ಯೆ ಕಡಿಮೆಯಾಗಿದೆ. ಎಲ್ಲಾ ಕಡೆ ಇಂತಹ ಪ್ರಕರಣಗಳು ನಡೆದರೆ ಖಂಡಿತವಾಗಿ ಪ್ರವಾಸೋದ್ಯಮದ ಆರ್ಥಿಕತೆ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಈ ನಿಟ್ಟಿನಲ್ಲಿ ಮೈಸೂರಿನಲ್ಲಿ ಪ್ರವಾಸಿಗರಿಗೆ ಸೂಕ್ತ ಭದ್ರತೆ ಹಾಗೂ ಉತ್ತಮ ಕಾನೂನು–ಸುವ್ಯವಸ್ಥೆ ನಿರ್ವಹಣೆ ಮಾಡಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳಿಗೆ ಸ್ವಾತಂತ್ರ್ಯ ನೀಡಬೇಕು ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸುತ್ತೇನೆ. ನಮ್ಮ ಕುಟುಂಬ ಹಾಗೂ ರಾಜ್ಯ ಸರ್ಕಾರದ ನಡುವೆ ಮೈಸೂರು ಹಾಗೂ ಬೆಂಗಳೂರು ಅರಮನೆ ಸಂಬಂಧ ನ್ಯಾಯಾಲಯದಲ್ಲಿ ಪ್ರಕರಣವಿದೆ. ಆದರೂ ಓರ್ವ ಜನಪ್ರತಿನಿಧಿಯಾಗಿ ಅರಮನೆಯಲ್ಲಿ ಸೂಕ್ತ ಭದ್ರತೆ ಹಾಗೂ ಸುರಕ್ಷತಾ ಕ್ರಮಕ್ಕಾಗಿ ಅರಮನೆ ಮಂಡಳಿ ಹಾಗೂ ಜಿಲ್ಲಾಡಳಿತವನ್ನು ಒತ್ತಾಯಿಸುತ್ತೇನೆ ಎಂದು ಹೇಳಿದರು.

ಎಲ್ಲಕ್ಕಿಂತ ಜನರ ಸುರಕ್ಷತೆ ಮುಖ್ಯ: ಅಸಂಘಟಿತ ಬೀದಿಬದಿ ವ್ಯಾಪಾರಿಗಳ ಸಂಘಟಿತ ವ್ಯವಸ್ಥೆಗಾಗಿ ಕೇಂದ್ರ ಸರ್ಕಾರ ಕಾಯ್ದೆ ರೂಪಿಸಿದ್ದು, ಅದರನ್ವಯ ಸ್ಥಳೀಯ ಸಂಸ್ಥೆಗಳು ಕ್ರಮ ಕೈಗೊಳ್ಳಬೇಕಿದೆ. ವ್ಯಾಪಾರಸ್ಥರ ಹಿತದೃಷ್ಟಿಯ ಜೊತೆಗೆ ಮುಖ್ಯವಾಗಿ ಜನರ ಸುರಕ್ಷತೆಗೆ ಆದ್ಯತೆ ನೀಡಬೇಕಿದೆ. ಈ ನಿಟ್ಟಿನಲ್ಲಿ ನಮ್ಮ ಪ್ರಯತ್ನವೂ ಮುಂದುವರೆಯಲಿದೆ. ಫುಡ್‌ಜೋನ್‌ಗಳಲ್ಲೇ ವ್ಯಾಪಾರಕ್ಕೆ ಅವಕಾಶ ನೀಡಬೇಕೆಂಬ ನಿಟ್ಟಿನಲ್ಲಿ ಈ ಹಿಂದೆಯೇ ಚರ್ಚೆಯಾಗಿದೆ. ಫುಡ್ ಜೋನ್‌ಗಳಲ್ಲಿ ಎಲ್ಲಾ ಸುರಕ್ಷತಾ ಕ್ರಮಗಳೊಂದಿಗೆ ವ್ಯಾಪಾರಕ್ಕೆ ಅನುವು ನೀಡಬೇಕು, ಆಹಾರ ಗುಣಮಟ್ಟದ ಬಗ್ಗೆಯೂ ಅಧಿಕಾರಿಗಳು ನಿಗಾ ವಹಿಸಬೇಕಿದೆ. ಈ ವ್ಯವಸ್ಥೆಯ ಅನಿವಾರ್ಯತೆ ಬಗ್ಗೆ ನಿನ್ನೆ ನಡೆದ ಹೀಲಿಯಂ ಸಿಲಿಂಡರ್ ಸ್ಫೋಟ ಪ್ರಕರಣ ಆಡಳಿತ ವ್ಯವಸ್ಥೆಯನ್ನು ಎಚ್ಚರಿಸಿದೆ. ಹಾಗೆಯೇ ಈವರೆಗೆ ಫುಡ್‌ಜೋನ್ ವ್ಯವಸ್ಥೆ ಅನುಷ್ಠಾನಗೊಳಿಸದಿರುವ ಬಗ್ಗೆ ಪಾಲಿಕೆ ಆಯುಕ್ತರನ್ನು ಪ್ರಶ್ನಿಸುವುದರ ಜೊತೆಗೆ ಇನ್ನೆಂದೂ ಇಂತಹ ಘಟನೆ ನಡೆಯದಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗುವುದು ಎಂದು ಸಂಸದ ಯದುವೀರ್ ತಿಳಿಸಿದರು.

ಇಂದು ರಾಕೇಶ್ ಪಾಪಣ್ಣ ಹುಟ್ಟುಹಬ್ಬ

ಅಭಿಮಾನಿಗಳಿಗೆ ನೆಚ್ಚಿನ ನಾಯಕನ ಶಾಸಕರಾಗಿ ನೋಡುವಾಸೆ

ಮೈಸೂರು, ಡಿ.26– ಮೈಸೂರಿನ ಕಾಂಗ್ರೆಸ್ ಯುವ ಮುಖಂಡ ಹಾಗೂ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರೂ ಆದ ರಾಕೇಶ್ ಪಾಪಣ್ಣ ಅವರ ಹುಟ್ಟುಹಬ್ಬವನ್ನು ಅವರ ಬೆಂಬಲಿಗರು, ಸ್ನೇಹಿತರು ಹಾಗೂ ಪಕ್ಷದ ಕಾರ್ಯಕರ್ತರು ಅರ್ಥ ಪೂರ್ಣವಾಗಿ ಆಚರಿಸಲು ಸಜ್ಜಾಗಿದ್ದಾರೆ.



ರಾಕೇಶ್

ಅತ್ಯಂತ ಸರಳ ವ್ಯಕ್ತಿತ್ವದ ರಾಕೇಶ್ ಪಾಪಣ್ಣ, ಹಿನಕಲ್ ಗ್ರಾಮ ಪಂಚಾಯಿತಿ ಸದಸ್ಯ, ನಂತರ ಅಧ್ಯಕ್ಷರಾಗಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಜನಬೆಂಬಲದಿಂದ ಜಿಲ್ಲಾ ಪಂಚಾಯಿತಿ ಸದಸ್ಯರಾಗಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ರಾಜಕೀಯದ ಜೊತೆಗೆ ಸಾಮಾಜಿಕ ಸೇವೆಯಲ್ಲೂ ಮಾದರಿಯಾಗಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಜನರ ಆರೋಗ್ಯ ರಕ್ಷಣೆಗೆ ಶ್ರಮಿಸಿದ್ದಾರೆ. ಕಷ್ಟದಲ್ಲಿರುವವರಿಗೆ ತಕ್ಷಣ ಸ್ಪಂದಿಸಿ, ತಮ್ಮ ಕೈಲಾದ ಸಹಾಯ ಮಾಡುವ ಮೂಲಕ ಎಲ್ಲರ ಮನೆಮಗನಾಗಿದ್ದಾರೆ ಎಂದು ಅವರ ಬೆಂಬಲಿಗರು ಬಣ್ಣಿಸಿದ್ದಾರೆ.

ಹಿನಕಲ್ ರಾಕೇಶ್ ಪಾಪಣ್ಣ ಅವರ ಬಗ್ಗೆ ಚಾಮುಂಡೇಶ್ವರಿ ಕ್ಷೇತ್ರದ ಪ್ರತಿಯೊಬ್ಬರಿಗೂ ಚೆನ್ನಾಗಿ ತಿಳಿದಿದೆ. ಇವರು ತಂದೆ ಕಾಲದಿಂದಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರು. ಸಿದ್ದ ರಾಮಯ್ಯ ಅವರ ಪುತ್ರ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಅತ್ಯಾಪ್ತರಲ್ಲಿ ಒಬ್ಬರು. ಅತ್ಯುತ್ತಮ ಸಂಘಟಕರಾಗಿದ್ದು, ಎಲ್ಲಾ ಚುನಾವಣೆಗಳಲ್ಲೂ ಕಾಂಗ್ರೆಸ್ ಬಲಪಡಿಸುವ ನಿಟ್ಟಿನಲ್ಲಿ ತಮ್ಮದೇ ಆದ ರೀತಿಯಲ್ಲಿ ಶಕ್ತಿ ಮೀರಿ ಶ್ರಮಿಸಿದ್ದಾರೆ. ಯುವಸಮೂಹ ಮಾತ್ರವಲ್ಲದೆ ಎಲ್ಲಾ ವಯೋಮಾನದವರನ್ನೂ ಆಕರ್ಷಿಸುವ ವಿಶೇಷ ಗುಣ ಅವರಲ್ಲಿದೆ. ಇಷ್ಟರಲ್ಲಾಗಲೇ ರಾಕೇಶ್ ಅವರಿಗೆ ಸೂಕ್ತ ಸ್ಥಾನಮಾನ ಸಿಗಬೇಕಿತ್ತು ಎಂಬ ಭಾವನೆ ಕಾರ್ಯಕರ್ತರಲ್ಲಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕು. ಅಲ್ಲದೆ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಶಾಸಕರಾಗಿ ಆಯ್ಕೆಯಾಗಿ, ಜನರ ಸೇವೆ ಮಾಡಬೇಕು ಎಂಬುದು ನಮ್ಮೆಲ್ಲರ ಆಶಯವಾಗಿದೆ ಎಂದು ಬೆಂಬಲಿಗರು ತಿಳಿಸಿದ್ದಾರೆ.

ರೈಲ್ವೆ ಟಿಕೆಟ್ ದರ ಹೆಚ್ಚಳ: 600 ಕೋಟಿ ಹೆಚ್ಚುವರಿ ಆದಾಯ ನಿರೀಕ್ಷೆ

ನವದೆಹಲಿ, ಡಿ.26– ಇಂದಿನಿಂದ ರೈಲ್ವೆ ಟಿಕೆಟ್ ದರ ಹೆಚ್ಚಳವಾಗಿದ್ದು, ಪರಿಷ್ಕೃತ ಹೊಸ ದರ ಜಾರಿಗೆ ಬಂದಿದೆ ಎಂದು ರೈಲ್ವೆ ಸಚಿವಾಲಯ ಅಧಿಕೃತವಾಗಿ ತಿಳಿಸಿದೆ. ಆರು ತಿಂಗಳ ಅವಧಿಯಲ್ಲಿ ಎರಡನೇ ಬಾರಿಗೆ ದರ ಪರಿಷ್ಕರಣೆಯಾಗಿದ್ದು, ರೈಲ್ವೆ ಇಲಾಖೆಯು ಆದಾಯ ಹೆಚ್ಚಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಹೊಸ ದರಗಳು ಸಾಮಾನ್ಯ ವರ್ಗದಲ್ಲಿ 215 ಕಿ.ಮೀ ಹೆಚ್ಚಿನ ಪ್ರಯಾಣಕ್ಕೆ ಮಾತ್ರ ಅನ್ವಯವಾಗಲಿದೆ. 215 ಕಿ.ಮೀಗಿಂತ ಹೆಚ್ಚಿನ ಪ್ರತಿ ಕಿ.ಮೀಗೆ 1 ಪೈಸೆ ಹೆಚ್ಚಳವಾಗಿದೆ. ಎಕ್ಸ್‌ಪ್ರೆಸ್ ರೈಲುಗಳ ನಾನ್–ಎಸಿ ಕ್ಲಾಸ್ ಹಾಗೂ ಎಲ್ಲಾ ಎಸಿ ಕ್ಲಾಸ್ ದರವನ್ನು ಪ್ರತಿ ಕಿ.ಮೀಗೆ 2 ಪೈಸೆ ಹೆಚ್ಚಿಸಲಾಗಿದೆ. ಇದರ ಪರಿಣಾಮವಾಗಿ 500 ಕಿ.ಮೀವರೆಗೆ ನಾನ್–ಎಸಿ ಕೋಚ್‌ನಲ್ಲಿ ಪ್ರಯಾಣಿಸುವವರು ಕೇವಲ 10 ರೂ. ಹೆಚ್ಚುವರಿ ಹಣ ಪಾವತಿಸಬೇಕಾಗುತ್ತದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.

ಕೆಲವು ವರ್ಗದ ಪ್ರಯಾಣಿಕರಿಗೆ ಯಾವುದೇ ದರ ಹೆಚ್ಚಳ ಮಾಡಿಲ್ಲ. ಉಪನಗರ ರೈಲು ಸೇವೆಗಳು, ಮಾಸಿಕ ಸೀಸನ್ ಟಿಕೆಟ್‌ಗಳು ಮತ್ತು 215 ಕಿ.ಮೀವರೆಗೆ ಸಾಮಾನ್ಯ ವರ್ಗದ ಪ್ರಯಾಣಗಳಿಗೆ ದರ ಹೆಚ್ಚಳ ಇಲ್ಲ. ಇದರಿಂದ ದಿನನಿತ್ಯ ರೈಲಿನಲ್ಲಿ ಸಂಚರಿಸುವ ಜನರಿಗೆ ಯಾವುದೇ ಹೆಚ್ಚುವರಿ ಹೊರೆ ಬೀಳುವುದಿಲ್ಲ. ರಾಜಧಾನಿ, ಶತಾಬ್ದಿ, ವಂದೇ ಭಾರತ್, ತೇಜಸ್, ಡುರೊಂಟೊ, ಗರೀಬ್ ರಥ ಸೇರಿದಂತೆ ಪ್ರಮುಖ ರೈಲು ಸೇವೆಗಳ ಮೂಲ ದರಗಳನ್ನು ಹೊಸ ದರ ರಚನೆಯ ಪ್ರಕಾರ ಪರಿಷ್ಕರಿಸಲಾಗಿದೆ. ಆದರೆ ಈ ಪರಿಷ್ಕರಣೆ ಎಲ್ಲ ವರ್ಗಗಳಲ್ಲೂ ಸಮಾನವಾಗಿ ಜಾರಿಗೆ ಬಂದಿದ್ದು, ಯಾವುದೇ ವಿಶೇಷ ಹೆಚ್ಚುವರಿ ಶುಲ್ಕ ವಿಧಿಸಲಾಗಿಲ್ಲ ಎಂದು ಸ್ಪಷ್ಟಪಡಿಸಿದೆ.

ಮೀಸಲಾತಿ ಶುಲ್ಕ, ಸೂಪರ್‌ಫಾಸ್ಟ್ ಸರ್ಚಾರ್ಜ್ ಹಾಗೂ ಇತರೆ ಹೆಚ್ಚುವರಿ ಶುಲ್ಕಗಳಲ್ಲಿ ಯಾವುದೇ ಬದಲಾವಣೆ ಇಲ್ಲ. ಜಿಎಸ್‌ಟಿ ನಿಯಮಗಳು ಮತ್ತು ದರ ಪೂರ್ಣಾಂಕ ಮಾಡುವ ವಿಧಾನಗಳು ಹಿಂದಿನಂತೆಯೇ ಮುಂದುವರಿಯುತ್ತವೆ.

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


ಗೌತಮ್
ಪಿಡಬ್ಲ್ಯುಡಿ ಕಂಟ್ರಾಕ್ಟರ್ ಹಾಗೂ
ಸಿವಿಲ್ ಇಂಜಿನಿಯರ್
ಶುಭಕೋರುವವರು
ಕೆ.ಜಿ ನಾಗರಾಜು
ಹಿನಕಲ್ ಗ್ರಾ.ಪಂ ಮಾಜಿ ಸದಸ್ಯರು
ಹಾಗೂ ಸಿವಿಲ್ ಕಂಟ್ರಾಕ್ಟರ್
ದಿನೇಶ್
ಹಿನಕಲ್ ಗ್ರಾ.ಪಂ ಮಾಜಿ ಸದಸ್ಯರು
ಹಾಗೂ ಸಿವಿಲ್ ಕಂಟ್ರಾಕ್ಟರ್
ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರು
ಹಾಗೂ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರು
ರಾಕೇಶ್ ಪಾಪಣ್ಣರವರಿಗೆ
ಜನ್ಮದಿನದ ಶುಭಾಶಯಗಳು
ಗ್ರಾಫಿಕ್ಸ್
ಫ್ಲೆಕ್ಸ್ ಪ್ರಿಂಟಿಂಗ್ 7411151112
ಪುಟ್ಟರಾಜು ಸಿವಿಲ್ ಕಂಟ್ರಾಕ್ಟರ್
ಮತ್ತು ಕಾಂಗ್ರೆಸ್ ಮುಖಂಡರು


ಚಾಮುಂಡೇಶ್ವರಿ ವಿಧಾನಸಭಾಕ್ಷೇತ್ರದ ಕಾಂಗ್ರೆಸ್ ಮುಖಂಡರು
ಹಾಗೂ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ
ಶ್ರೀ ರಾಕೇಶ್ ಪಾಪಣ್ಣ
ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಹರೀಶ್
ಹಾದ್ಯ ಗ್ರಾ.ಪಂ. ಅಧ್ಯಕ್ಷರು
ಶಂಕರ್ ಎಂ. ಹುಯಿಲಾಳು
ಸಿಂಡಿಕೇಟ್ ಸದಸ್ಯರು
ಮೈ.ವಿ.ವಿ
ರಮೇಶ್ ಹುಯಿಲಾಳು
ಸದಸ್ಯರು,
ನಾಗವಾಲ ಗ್ರಾಮ ಪಂಚಾಯಿತಿ
ಮನು ಹಿನಕಲ್
ಶುಭಕೋರುವವರು :
ಹುಯಿಲಾಳು ಗ್ರಾಮಸ್ಥರು
MM77 PRINTS 7760614743

ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

'ಮಿತ್ರ'ನ ಮಿಣುಕು | ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಡಿಸೆಂಬರ್ 27 ಶನಿವಾರ 2025

ಪುಟಗಳು: IV

ಕ್ರಿಸ್‌ಮಸ್ ರಜೆ ಸಾಂಸ್ಕೃತಿಕ ನಗರಿಗೆ ಹರಿದು ಬರುತ್ತಿದೆ ಪ್ರವಾಸಿಗರ ದಂಡು

ಮೈಸೂರು ಮೃಗಾಲಯ, ಅರಮನೆ, ಚಾಮುಂಡಿಬೆಟ್ಟದಲ್ಲಿ ಜನವೋ ಜನ



ಮೈಸೂರು, ಡಿ.26(ಬಿಎಲ್‌ಯು)– ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿಗೆ ಪ್ರವಾಸಿಗರ ದಂಡೇ ಲಗ್ಗೆ ಇಟ್ಟಿದೆ. ಮೈಸೂರು ಅರಮನೆ, ಶ್ರೀ ಚಾಮರಾಜೇಂದ್ರ ಮೃಗಾಲಯ, ಚಾಮುಂಡಿಬೆಟ್ಟ, ಸೆಂಟ್ ಫಿಲೋಮಿನಾ ಚರ್ಚ್ ಸೇರಿದಂತೆ ಇತರೆ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರು ತುಂಬಿ ತುಳುಕುತ್ತಿದ್ದಾರೆ.

ಡಿ.24 ರಂದು ಮೈಸೂರು ಅರಮನೆಗೆ 15,816 ವೀಕ್ಷಕರು ಭೇಟಿ ನೀಡಿದ್ದರು. ಕ್ರಿಸ್‌ಮಸ್ ದಿನವಾದ ಡಿಸೆಂಬರ್ 25 ರಂದು ಪ್ರವಾಸಿಗರ ಸಂಖ್ಯೆ ದುಪ್ಪಟ್ಟಾಗಿತ್ತು. ನಿನ್ನೆ ಒಂದೇ ದಿನ 21,513 ಪ್ರವಾಸಿಗರು ಅರಮನೆ ವೀಕ್ಷಣೆ ಮಾಡಿದರು.

ಅಪರೂಪ ಹಾಗೂ ಆಕರ್ಷಣೆಯ ಪ್ರಾಣಿಗಳಿರುವ ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ ಅರಮನೆ ಮೀರಿಸುವಷ್ಟು ವೀಕ್ಷಕರು ಭೇಟಿ ನೀಡಿದ್ದರು. ಕ್ರಿಸ್‌ಮಸ್ ದಿನವಾದ ನಿನ್ನೆ ಒಂದೇ ದಿನ 27,203 ಪ್ರವಾಸಿಗರು ಮೃಗಾಲಯಕ್ಕೆ ಭೇಟಿ ನೀಡಿದ್ದರು.

ಮೈಸೂರಿನ ಚಾಮುಂಡಿಬೆಟ್ಟಕ್ಕೆ ಕೂಡ ಸಾವಿರಾರು ಪ್ರವಾಸಿಗರು ಆಗಮಿಸಿ ನಾಡ ದೇವತೆ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು. ಸಹಸ್ರಾರು ಪ್ರವಾಸಿಗರ ಆಗಮನದ ಹಿನ್ನೆಲೆಯಲ್ಲಿ ದೇವಸ್ಥಾನದ ಒಳಗೆ ಹೋಗಲು ಗಂಟೆಗಟ್ಟಲೆ ಸರದಿ ಸಾಲಿನಲ್ಲಿ ನಿಂತಿದ್ದರು. 100 ರೂಪಾಯಿ ನೀಡಿ ವಿಶೇಷ ದರ್ಶನ ಪಡೆಯುವವರ ಸಾಲಿನಲ್ಲಿ ಕೂಡ ಸಹಸ್ರಾರು ಜನರು ಸೇರಿದ್ದರು.

ಕ್ರಿಸ್ ಮಸ್ ದಿನವಾದ ನಿನ್ನೆ ಮೈಸೂರಿನ ಸೆಂಟ್ ಫಿಲೋಮಿನಾ ಚರ್ಚ್ ಆಕರ್ಷಣೆಯ ಕೇಂದ್ರವಾಗಿತ್ತು. ಐತಿಹಾಸಿಕ ಹಿನ್ನೆಲೆ ಇರುವ ಸೆಂಟ್ ಫಿಲೋಮಿನಾ ಚರ್ಚ್ ಗೆ ಕೂಡ ಸಾವಿರಾರು ಜನರು ಭೇಟಿ ನೀಡಿದ್ದರು.

ಕ್ರಿಸ್‌ಮಸ್ ರಜಾ ಧಮಾಕ



ಕ್ರಿಸ್‌ಮಸ್ ಹಾಗೂ ನಾಲ್ಕನೆ ಶನಿವಾರದ ರಜಾ ಧಮಾಕ ಹಿನ್ನೆಲೆಯಲ್ಲಿ ಮೈಸೂರಿಗೆ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಲಗ್ಗೆ ಹಾಕಿದ್ದಾರೆ.

ಕ್ರಿಸ್ ಮಸ್ ದಿನ ಸರ್ಕಾರಿ ರಜೆ. ಶುಕ್ರವಾರ ಒಂದು ದಿನ ರಜಾ ಹಾಕಿ ಬಹಳಷ್ಟು ಜನರು ನಾಲ್ಕನೆ ಶನಿವಾರ ಹಾಗೂ ಭಾನುವಾರದ ರಜೆಯ ಪ್ಯಾಕೇಜ್ ಲೆಕ್ಕಾಚಾರ ಹಾಕಿಕೊಂಡು ಮೈಸೂರಿಗೆ ಬಂದಿದ್ದರು. ಡಿಸೆಂಬರ್ 25 ರಿಂದ 28 ರವರೆಗೆ ನಾಲ್ಕು ದಿನದ ರಜೆಯಲ್ಲಿ ಮೈಸೂರು ಹಾಗೂ ಸುತ್ತಮುತ್ತಲ ಪ್ರವಾಸಿ ತಾಣಗಳನ್ನು ವೀಕ್ಷಣೆ ಮಾಡುತ್ತಿದ್ದಾರೆ. ಇದರಿಂದ ಮೈಸೂರು ಮಾತ್ರವಲ್ಲದೆ ಕೆಆರ್‌ಎಸ್, ರಂಗನತಿಟ್ಟು ಪಕ್ಷಿಧಾಮ, ಶ್ರೀರಂಗಪಟ್ಟಣ ಸೇರಿದಂತೆ ಸುತ್ತಮುತ್ತಲ ಪ್ರವಾಸಿ ತಾಣವನ್ನು ವೀಕ್ಷಣೆ ಮಾಡುತ್ತಿದ್ದಾರೆ.

ಮೈಸೂರಿನಲ್ಲಿ ನೆರೆಯ ಕೇರಳದ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿತ್ತು. ಕೇರಳದಲ್ಲಿ ಕ್ರಿಶ್ಚಿಯನ್ ಸಮುದಾಯದವರು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಕ್ರಿಸ್‌ಮಸ್ ಒಂದು ದಿನ ತಮ್ಮ ಊರಿನಲ್ಲಿ ಆಚರಣೆ ಮಾಡಿ ಶುಕ್ರವಾರದಿಂದ ಮೈಸೂರಿನ ಹಲವು ಸ್ಥಳಗಳ ವೀಕ್ಷಣೆಗೆ ಆಗಮಿಸಿದ್ದಾರೆ.

ಸುಗಮ ಸಂಚಾರ ವ್ಯವಸ್ಥೆಗೆ ಸಂಚಾರಿ ಪೊಲೀಸರ ಹರಸಾಹಸ





ಕ್ರಿಸ್ ಮಸ್ ಹಿನ್ನೆಲೆಯಲ್ಲಿ ಭಾರೀ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸಿರುವ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಬಳಿ ಶುಕ್ರವಾರ ಟ್ರಾಫಿಕ್ ಜಾಮ್ ಉಂಟಾಗಿತ್ತು. ಮತ್ತೊಂದು ಚಿತ್ರದಲ್ಲಿ ಟ್ರಾಫಿಕ್ ದಟ್ಟಣೆಯನ್ನು ನಿಯಂತ್ರಿಸಲು ಮೈಸೂರು ರೇಸ್‌ಕ್ಲಬ್ ವೃತ್ತದ ಸಿಗ್ನಲ್ ಅನ್ನು ಆಫ್ ಮಾಡಿ ಪೊಲೀಸರು ಸಂಚಾರವನ್ನು ಸ್ವಯಂ ನಿಯಂತ್ರಿಸುತ್ತಿರುವುದು.

ಕಳೆದೆರಡು ದಿನದಿಂದ ಮೈಸೂರಿನ ಯಾವುದೇ ಪ್ರವಾಸಿ ತಾಣದಲ್ಲಿ ಪ್ರವಾಸಿಗರು ಕಿಕ್ಕಿರಿದು ತುಂಬಿದ್ದಾರೆ. ಕಾರು, ಬಸ್ಸು, ಮಿನಿ ಬಸ್ಸು, ಟೆಂಪೊ ಟ್ರಾವೆಲರ್ ಸೇರಿದಂತೆ ಭಾರೀ ವಾಹನ ದಟ್ಟಣೆಯಿಂದ ಮೈಸೂರಿನ ಹೃದಯ ಭಾಗದಲ್ಲಿ ಟ್ರಾಫಿಕ್ ಜಾಮ್ ಸಾಮಾನ್ಯವಾಗಿತ್ತು. ಬೆಳಿಗ್ಗೆಯಿಂದ ರಾತ್ರಿವರೆಗೆ ವಾಹನ ದಟ್ಟಣೆ ಹಿನ್ನೆಲೆಯಲ್ಲಿ ಸುಗಮ ಸಂಚಾರ ವ್ಯವಸ್ಥೆಗೆ ಸಂಚಾರಿ ಪೊಲೀಸರು ಹರಸಾಹಸ ಪಟ್ಟರು.

ಮೈಸೂರು ಅರಮನೆ ಆವರಣದ ಎರಡು ಪಾರ್ಕಿಂಗ್ ಸ್ಥಳದಲ್ಲಿ ನೂರಾರು ವಾಹನಗಳು ನಿಂತಿದ್ದವು. ಕೊನೆಗೆ ಅಲ್ಲಿ ಸ್ಥಳವಿಲ್ಲದೆ ಬಹಳಷ್ಟು ಪ್ರವಾಸಿಗರು ರಾಮಾನುಜ ರಸ್ತೆ, ಶಂಕರ ಮಠದ ರಸ್ತೆ ಸೇರಿದಂತೆ ಇತರೆಡೆ ಕಂಡ ಕಂಡಲ್ಲಿ ವಾಹನಗಳನ್ನು ನಿಲ್ಲಿಸಿದ್ದರು. ಗನ್ ಹೌಸ್ ಸರ್ಕಲ್, ಕಾಡಾ ಕಚೇರಿ–ಕಾರ್ಪೋರೇಷನ್ ಸರ್ಕಲ್, ಬಸವೇಶ್ವರ ಸರ್ಕಲ್, ಕೆ.ಆರ್.ಸರ್ಕಲ್, ಚಾಮರಾಜ ಒಡೆಯರ್ ಸರ್ಕಲ್, ಹಾರ್ಡಿಂಜ್ ಸರ್ಕಲ್ ಸೇರಿದಂತೆ ಇತರೆಡೆ ಟ್ರಾಫಿಕ್ ಜಾಮ್ ಆಗಿತ್ತು. ಉದ್ದುದ್ದ ಸಾಲಿನಲ್ಲಿ ವಾಹನಗಳು ನಿಂತಿದ್ದವು. ವಾಹನ ದಟ್ಟಣೆ ನಿಯಂತ್ರಿಸಿ ಸುಗಮ ಸಂಚಾರ ವ್ಯವಸ್ಥೆ ಮಾಡಲು ಸಂಚಾರಿ ಪೊಲೀಸರು ಹರಸಾಹಸ ಪಟ್ಟರು.

ರೈಲ್ವೆ ದರ ಏರಿಕೆ; ಬಿಜೆಪಿ ನಾಯಕರ ನಿಲುವಿಗೆ ಸಿಎಂ ಟೀಕೆ





ಬೆಂಗಳೂರು, ಡಿ.26(ಕೆಎಂಶಿ)– ರೈಲ್ವೆ ಪ್ರಯಾಣ ದರ ಏರಿಕೆಯಿಂದ ಕೇಂದ್ರ ಸರ್ಕಾರ ಜನಸಾಮಾನ್ಯರ ಮೇಲೆ ಆರ್ಥಿಕ ಹೊರೆ ಹಾಕಿರುವುದನ್ನು ರಾಜ್ಯ ಬಿಜೆಪಿ ನಾಯಕರು ಏಕೆ ಪ್ರಶ್ನಿಸುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರದ ವಿರುದ್ಧ ಮಾತ್ರ ಮಾತನಾಡುವ ಬಿಜೆಪಿ ನಾಯಕರು ಕೇಂದ್ರ ಸರ್ಕಾರದ ರೈಲ್ವೆ ಪ್ರಯಾಣ ದರ ಏರಿಕೆಯನ್ನೂ ಪ್ರಶ್ನಿಸಬೇಕು ಎಂದರು.

ಸುರಕ್ಷತಾ ಕಾರ್ಯಕ್ರಮ ಅವಶ್ಯಕ: ಚಿತ್ರದುರ್ಗದ ಹಿರಿಯೂರು ಬಳಿ ಸಂಭವಿಸಿದ ಬಸ್ ಮತ್ತು ಟ್ರಕ್ ಅಪಘಾತದಲ್ಲಿ ಮೇಲ್ನೋಟಕ್ಕೆ ಟ್ರಕ್ ಚಾಲಕನ ತಪ್ಪು ಇರುವುದಾಗಿ ಕಂಡು ಬರುತ್ತಿದೆ ಎಂಬುದಾಗಿ ಪೊಲೀಸರು ತಿಳಿಸಿದ್ದಾರೆ. ವಿರುದ್ಧ ದಿಕ್ಕಿನಲ್ಲಿ ಬರುತ್ತಿದ್ದ ಟ್ರಕ್ ರಸ್ತೆ ವಿಭಜಕ ದಾಟಿ ಬಂದು ಬಸ್‌ಗೆ ಡಿಕ್ಕಿ ಹೊಡೆದಿದೆ.

ಬಸ್ ಮಾಲೀಕರುಗಳು ಎಲ್ಲಾ ಸುರಕ್ಷತಾ ಕ್ರಮಗಳನ್ನು ಅನುಸರಿಸುವುದು ಅವಶ್ಯಕ. ಅಪಘಾತ ಘಟನೆ ಬಗ್ಗೆ ತನಿಖೆ ನಡೆಸಲಾಗುವುದು ಎಂದರು.

ಆಸಕ್ತಿಯಿಂದ ಅಧ್ಯಯನ ಮಾಡಿದರಷ್ಟೇ ಸರ್ಕಾರಿ ಹುದ್ದೆ ಗಿಟ್ಟಿಸಿಕೊಳ್ಳಲು ಸಾಧ್ಯ

ಪರೀಕ್ಷಾರ್ಥಿಗಳಿಗೆ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಕಿವಿಮಾತು



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಬ್ಯಾಂಕಿಂಗ್ ಮತ್ತು ಕೇಂದ್ರ ಸರ್ಕಾರದ ನಾನಾ ಹುದ್ದೆಗಳಿಗೆ ಆಯೋಜಿಸಿದ್ದ ನೇಮಕಾತಿ ಪರೀಕ್ಷೆಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ "ಮುಕ್ತ ಭಂಡಾರ" ಪುಸ್ತಕ ಬಿಡುಗಡೆ ಮಾಡಿದರು.

ಮೈಸೂರು, ಡಿ.26 (ಬಿಎಲ್‌ಯು)– ಆಸಕ್ತಿಯಿಂದ ಅಧ್ಯಯನ ಮಾಡಿದವರಿಗೆ ಮಾತ್ರ ಸರ್ಕಾರಿ ಕೆಲಸ ಸಿಗುತ್ತದೆ ಎಂದು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅಭಿಪ್ರಾಯಪಟ್ಟರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಬ್ಯಾಂಕಿಂಗ್ ಮತ್ತು ಕೇಂದ್ರ ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿ ಪರೀಕ್ಷೆಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ 'ಮುಕ್ತ ಭಂಡಾರ' ಅಧ್ಯಯನ ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

ನೇಮಕಾತಿ ಆರಂಭವಾದಾಗ ಲಕ್ಷಾಂತರ ಜನರು ನೋಂದಣಿ ಮಾಡಿಕೊಳ್ಳುತ್ತಾರೆ. ಆದರೆ ಆಯ್ಕೆ ಆಗುವುದು ಬೆರಳಣಿಕೆಯಷ್ಟು ಮಂದಿ ಮಾತ್ರ. ಕೆಲವರು ಪರೀಕ್ಷೆ ಭಯದಿಂದ ದೂರ ಉಳಿದರೆ, ಮತ್ತೆ ಕೆಲವರು ನೋಂದಣಿಯನ್ನು ನೆಪವಾಗಿ ಪರಿಗಣಿಸುತ್ತಾರೆ. ಹಾಗಾಗಿ ತುಂಬಾ ಗಂಭೀರವಾಗಿ ಕುಳಿತು ಓದಿದವರಿಗೆ ಮಾತ್ರ ಸರ್ಕಾರಿ ಕೆಲಸ ಸಿಗುತ್ತದೆ ಎಂದು ಹೇಳಿದರು.

ಹುದ್ದೆಗಳನ್ನು ದೊಡ್ಡದು, ಚಿಕ್ಕದು ಎಂದು ಹಿಂದೆ ಮುಂದೆ ನೋಡಬಾರದು. ಹೆಚ್ಚು ಹೆಚ್ಚು ಪರೀಕ್ಷೆ ಬರೆದಷ್ಟು ಚುರುಕಾಗುತ್ತೀರಾ, ಈ ಮೂಲಕ ಗುರಿ ತಲುಪುತ್ತೀರಾ ಎಂದು ಸಲಹೆ ನೀಡಿದ ನಿತೇಶ್ ಪಾಟೀಲ್, ನಾನು ಯುಪಿಎಸ್‌ಸಿ ಓದುವಾಗ ಸಣ್ಣ ಸಣ್ಣ ಪರೀಕ್ಷೆಗಳನ್ನು ಬರೆದಿದ್ದೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

ಮಾನಸಿಕ ಸಿದ್ಧತೆ, ಕಠಿಣ ಪರಿಶ್ರಮ ನಿಮ್ಮನ್ನು ಯಶಸ್ಸಿನ ಶಿಖರದತ್ತ ಕೊಂಡೊಯ್ಯುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಂದು ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಿ ಎಂದು ನಿತೇಶ್ ಪಾಟೀಲ್ ಸಲಹೆ ನೀಡಿದರು. ಈ ವೇಳೆ ಮಾತನಾಡಿದ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಕಲಿಕೆ ಎಂಬುದು ದಿನ ನಿತ್ಯದ ಪಯಣವಾಗಿದ್ದು, ಒಂದೇ ದಿನದಲ್ಲಿ ಎಲ್ಲವನ್ನು ಓದಿ ಮುಗಿಸಲು ಸಾಧ್ಯವಿಲ್ಲ. ಹಾಗಾಗಿ ಕಲಿಕೆ ನಿಮಗೆ ನಿರಂತರವಾಗಿರಬೇಕು ಎಂದು ಕಿವಿಮಾತು ಹೇಳಿದರು.

ತರಬೇತಿ ಕೇಂದ್ರದ ಸಂಯೋಜಕ ಜೈನಹಳ್ಳಿ ಸತ್ಯನಾರಾಯಣ ಗೌಡ, ಸಿದ್ದೇಶ್ ಹೊನ್ನೂರು, ಬಿ. ಗಣೇಶ್, ಡಾ.ಈ. ಶಿವಪ್ರಸಾದ್, ಡಾ.ನವೀನ್ ಕುಮಾರ್, ಡಾ.ಬೀರಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕನ್ನಡ ಭಾಷೆ ಮೇಲೆ ಸವಾರಿ ಮಾಡುವ ಅನ್ಯ ಭಾಷಿಗರ ಬಗ್ಗೆ ಸದಾ ಎಚ್ಚರ ಇರಲಿ

ಶಾಸಕ ಕೆ.ಹರೀಶ್ ಗೌಡ ಎಚ್ಚರಿಕೆ



ಮೈಸೂರಿನ ಪುರಭವನದಲ್ಲಿ ಶುಕ್ರವಾರ ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟ ಆಯೋಜಿಸಿದ್ದ ಮೊದಲ ವರ್ಷದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಣೆ ಮಾಡಲಾಯಿತು.

ಮೈಸೂರು, ಡಿ.26(ಬಿಎಲ್‌ಯು)– ಕನ್ನಡ ನೆಲದ ಈ ಭಾಷೆಯ ಮೇಲೆ ಕುಳಿತು ಸವಾರಿ ಮಾಡುವ ಅನ್ಯ ಭಾಷಿಗರ ಬಗ್ಗೆ ಎಚ್ಚರ ವಹಿಸಬೇಕು ಎಂದು ಶಾಸಕ ಕೆ.ಹರೀಶ್‌ಗೌಡ ಸಲಹೆ ನೀಡಿದರು.

ಮೈಸೂರಿನ ಪುರಭವನದಲ್ಲಿ ಇಂದು ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟ ಆಯೋಜಿಸಿದ್ದ ಮೊದಲ ವರ್ಷದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬೇರೆ ಭಾಷೆಗಳು ನಮ್ಮ ಕನ್ನಡದ ಮೇಲೆ ಸವಾರಿ ಮಾಡುತ್ತಿರುವ ಈ ಸಂದರ್ಭದಲ್ಲಿ ನಮ್ಮ ತಾಯಿ ಭಾಷೆ ಕನ್ನಡವನ್ನು ಜತನವಾಗಿ ಕಾಪಾಡಿಕೊಳ್ಳಬೇಕಾದ ಜವಾಬ್ದಾರಿ ನಮ್ಮದಾಗಿದೆ ಎಂದು ಅಭಿಪ್ರಾಯಪಟ್ಟರು.

ನಮ್ಮ ತಾಯಿ ಭಾಷೆ ಬಗ್ಗೆ ನಮಗೆ ಹೆಮ್ಮೆ ಇದೆ, ನಮ್ಮ ಕನ್ನಡ ಹಲವು ಭಾಷೆಗಳಿಗೆ ತಾಯಿಯಾಗಿದೆ. ಇದನ್ನು ಪ್ರಮುಖವಾಗಿ ತಮಿಳುನಾಡು ಹಾಗೂ ಕೇರಳ ಗಡಿಯಲ್ಲಿ ನೆಲೆಸಿರುವವರಲ್ಲಿ ಅಧಿಕವಾಗಿ ನಾವು ಕಾಣಬಹುದು ಎಂದು ಹರೀಶ್ ಗೌಡ ಹೇಳಿದರು. ನಮ್ಮ ಕನ್ನಡ ನಾಡಿನ ಜನರಲ್ಲಿ ಉದಾರತೆ ಇದೆ, ವಿಶಾಲ ಮನೋಭಾವವಿದೆ. ನಮ್ಮ ಭಾಷೆಯ ಜೊತೆಗೆ ಅನ್ಯ ಭಾಷೆಗಳನ್ನು ಪ್ರೀತಿಯಿಂದ ಕಾಣುತ್ತೇವೆ. ಇಂತಹ ಪುಣ್ಯ ಭೂಮಿಯಲ್ಲಿ ಜನ್ಮ ತಳೆದ ನಾವೇ ಭಾಗ್ಯಶಾಲಿಗಳು ಎಂದು ತಿಳಿಸಿದರು.

ಕನ್ನಡ ರಾಜ್ಯೋತ್ಸವದ ಆಚರಣೆ ನವೆಂಬರ್ ತಿಂಗಳಿಗೆ ಮಾತ್ರ ಸೀಮಿತವಾಗದೆ, ವರ್ಷ ಪೂರ್ತಿ ವಿಶಿಷ್ಟವಾಗಿ ಆಚರಣೆ ಮಾಡಬೇಕು. ಈ ಮೂಲಕ ನಮ್ಮ ಮನೆ, ಮನಗಳಲ್ಲಿ ಕನ್ನಡ ಹಚ್ಚ ಹಸಿರಾಗಿರಬೇಕು ಎಂದು ಹರೀಶ್ ಗೌಡ ಹೇಳಿದರು.

ಇದೇ ವೇಳೆ ಮಾತನಾಡಿದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಇಂದಿನ ತಂತ್ರಜ್ಞಾನ ಜಗತ್ತಿನಲ್ಲಿ ನಮ್ಮ ಕನ್ನಡ ಭಾಷೆಯ ಬೆಳವಣಿಗೆಗೆ ಪೂರಕವಾಗಿ ಕಾರ್ಯಕ್ರಮಗಳು ರೂಪುಗೊಳ್ಳಬೇಕು. ತಂತ್ರಜ್ಞಾನ ಕ್ರಾಂತಿಯಲ್ಲಿ ನಮ್ಮ ಭಾಷೆ ಮರೆಯಾಗದೆ, ಗಟ್ಟಿಯಾಗಿ ಉಳಿಯಬೇಕು, ಈ ಬಗ್ಗೆ ನಮ್ಮಲ್ಲಿ ಪರಿಣಾಮಕಾರಿ ಜಾಗೃತಿ ಇರಬೇಕು ಎಂದು ಹೇಳಿದರು.

ಭಾಷೆ ಹಾಗೂ ಸಂಸ್ಕೃತಿ ಒಂದಕ್ಕೊಂದು ಬೆಸೆದುಕೊಂಡಿದೆ. ಭಾಷೆ ಇಲ್ಲದೆ ಸಂಸ್ಕೃತಿ ಇಲ್ಲ, ಸಂಸ್ಕೃತಿ ಇಲ್ಲದೆ ಭಾಷೆ ಇಲ್ಲ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆ ಹಾಗೂ ಸಂಸ್ಕೃತಿ ಎರಡನ್ನು ಕಾಪಾಡಿಕೊಳ್ಳಬೇಕು. ಯಾವುದಾದರೊಂದು ನಮ್ಮಿಂದ ವಿಮುಖವಾದರೂ ನಮ್ಮ ಭಾಷೆ ಮತ್ತು ಸಂಸ್ಕೃತಿ ಎರಡಕ್ಕೂ ಧಕ್ಕೆಯಾಗುತ್ತದೆ ಎಂದು ರಾಜೀವ್ ಎಚ್ಚರಿಸಿದರು.

ಮೈಮುಲ್ ಮಾಜಿ ವ್ಯವಸ್ಥಾಪಕ ನಿರ್ದೇಶಕ ಅಶೋಕ್. ಉದ್ಯಮಿಗಳಾದ ಸಿ.ಪಿ.ನಾಗೇಶ್, ಆರ್.ಮಂಜುನಾಥ್, ಮೈಮುಲ್ ಹಾಲಿ ವ್ಯವಸ್ಥಾಪಕ ನಿರ್ದೇಶಕ ಸುರೇಶ್ ನಾಯಕ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ದಿಲ್ ಇದ್ರೆ ಬಾ, ಧಮ್ ಇದ್ರೆ ಬಾ

ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮದ ಈ ಸಂದರ್ಭದಲ್ಲಿ ಭಾಷಾಭಿಮಾನ ಮುಗಿಲು ಮುಟ್ಟಿತು. ಬೆಳಗಾವಿ ನಮ್ಮದೈತಿ, ದಿಲ್ ಇದ್ರೆ ಬಾ, ಧಮ್ ಇದ್ರೆ ಬಾ ಎಂಬ ಹಾಡು ನೆರೆದಿದ್ದವರಲ್ಲಿ ಕಿಚ್ಚು ಹೊತ್ತಿಸಿತು. ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟ ಬೇಕು ಎಂಬ ಡಾ.ರಾಜ್‌ಕುಮಾರ್ ಅವರ ಹಾಡು ಕೂಡ ಕನ್ನಡ ಅಭಿಮಾನಿಗಳನ್ನು ಹುಚ್ಚೆಬ್ಬಿಸಿ ಕುಣಿಯುವಂತೆ ಮಾಡಿತು. ಡಿ.ಜೆ.ಸೌಂಡ್ ಸಿಸ್ಟಂ ಹಾಡಿನ ಮಧ್ಯೆ ಶಿಳ್ಳೆ ಹಾಕಿ ಸಂಭ್ರಮಿಸಿದರು. ಒಂದೊಂದು ಹಾಡಿಗೂ ಕುಣಿದು ಕುಪ್ಪಳಿಸಿದರು.

ಪೊಲೀಸ್ ಕಾನ್ಸ್‌ಟೇಬಲ್‌ಗಳ ನೇಮಕಾತಿಗೆ ಜ್ಞಾನಬುತ್ತಿ ಸಂಸ್ಥೆಯಿಂದ ಉಚಿತ ತರಬೇತಿ ಶಿಬಿರ

ಮೈಸೂರು, ಡಿ.26(ಬಿಎಲ್‌ಯು)– ರಾಜ್ಯ ಸರ್ಕಾರ ಸುಮಾರು 20 ಸಾವಿರಕ್ಕೂ ಹೆಚ್ಚು ಪೊಲೀಸ್ ಕಾನ್ಸ್‌ಟೇಬಲ್‌ಗಳ ನೇಮಕ ಮಾಡಿಕೊಳ್ಳಲಿದ್ದು, ಈ ಸಂಬಂಧಿತ ಪರೀಕ್ಷೆಗೆ ಮೈಸೂರಿನ ಜ್ಞಾನಬುತ್ತಿ ಸಂಸ್ಥೆಯು ಉಚಿತ ವಿಶೇಷ ತರಬೇತಿ ನೀಡಲಿದೆ. ಪದವಿ ವ್ಯಾಸಂಗ ಮಾಡುತ್ತಿರುವ ಹಾಗೂ ಈಗಾಗಲೇ ಪದವಿ ಪೂರೈಸಿರುವ ಆಸಕ್ತ ಅಭ್ಯರ್ಥಿಗಳಿಗೆ ಮೈಸೂರಿನ ಲಕ್ಷ್ಮಿಪುರಂನ ಜ್ಞಾನಬುತ್ತಿ ಸಂಸ್ಥೆಯಲ್ಲಿ ಸಂಜೆ 5.30 ರಿಂದ ರಾತ್ರಿ 7.30 ರವರೆಗೆ ತರಬೇತಿ ನೀಡಲಾಗುವುದು. ಆಸಕ್ತರು ಡಿಸೆಂಬರ್ 31 ರೊಳಗೆ ಸಂಸ್ಥೆಯ ಕಚೇರಿಗೆ ಖುದ್ದಾಗಿ ಭೇಟಿ ನೀಡಿ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಕಾರ್ಯದರ್ಶಿ ಬಾಲಕೃಷ್ಣ (9448117455), ಸಿ.ಕೆ. ಕಿರಣ್ ಕೌಶಿಕ್ (9972830857, ಕೆ.ವೈ.ನಾಗೇಂದ್ರ(8296788251) ಅವರನ್ನು ಸಂಪರ್ಕಿಸಬಹುದು.

ಹುಣಸೂರಲ್ಲಿ ಮನುಸ್ಮೃತಿ ದಹಿಸಿ ಆಕ್ರೋಶ



ದಸಂಸ ಮತ್ತು ಪ್ರಗತಿಪರ ಸಂಘಟನೆಗಳ ವತಿಯಿಂದ ಸಂವಿಧಾನ ವೃತ್ತದಲ್ಲಿ ಮನುಸ್ಮೃತಿಯನ್ನು ದಹಿಸಲಾಯಿತು.

ಹುಣಸೂರು, ಡಿ 26– ಡಾ. ಬಿ.ಆರ್. ಅಂಬೇಡ್ಕರ್ ಅವರು ಮನುಸ್ಮೃತಿಯನ್ನು ದಹಿಸಿದ ದಿನದ ಅಂಗವಾಗಿ ದಸಂಸ ಮತ್ತು ಪ್ರಗತಿಪರ ಸಂಘಟನೆಗಳ ವತಿಯಿಂದ ನಗರ ಸಂವಿಧಾನ ವೃತ್ತದಲ್ಲಿ ಮನುಸ್ಮೃತಿಯನ್ನು ದಹಿಸಲಾಯಿತು.

ಸಂವಿಧಾನ ವೃತ್ತದಲ್ಲಿ ಜಮಾವಣೆಗೊಂಡ ಕಾರ್ಯಕರ್ತರು 'ಅಂಬೇಡ್ಕರ್' ಚಿರಾಯುವಾಗಲಿ, ಜೀವ ವಿರೋಧಿ ಮನುಸ್ಮೃತಿಗೆ ಧಿಕ್ಕಾರ', 'ಪ್ರಗತಿಪರ ಸಂಘಟನೆಗಳ ಹೋರಾಟಕ್ಕೆ ಜಯವಾಗಲಿ' ಎಂದು ಘೋಷಣೆ ಕೂಗಿ ಮನುಸ್ಮೃತಿಯನ್ನು ದಹಿಸಲಾಯಿತು.

ಈ ಸಂದರ್ಭದಲ್ಲಿ ದಲಿತ ಹಿರಿಯ ಹೋರಾಟಗಾರ ಜೆ ಮಹದೇವ ಮಾತನಾಡಿ ಜಾತಿ ವ್ಯವಸ್ಥೆಗೆ ಮತ್ತು ಅಸ್ಪೃಶ್ಯತೆಗೆ ಮುನ್ನುಡಿ ಬರೆದಿದ್ದ ಮನುಸ್ಮೃತಿಯನ್ನು ಬಹುಜನರಿಗೆ ಮಾರಕವಾಗಿದೆ ಎಂದು ಅರಿತಿದ್ದ ಅಂಬೇಡ್ಕರ್ ಅವರು ಅಂದೇ ಸುಟ್ಟು ಹಾಕಿದ್ದರು. ಆದರೂ ಇಂದಿನ ಸಮಾಜದಲ್ಲಿ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಪಾಳೇಗಾರಿಕೆ ಸಂಸ್ಕೃತಿ, ಇನ್ನು ಜೀವಂತವಾಗಿದ್ದು ಹೆಚ್ಚು ಹೆಚ್ಚು ಜನರು ಸಂಘಟನೆಗಳು ಒಗ್ಗೂಡಿ ಇದನ್ನು ಹಿಮ್ಮೆಟ್ಟಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ದಸಂಸ ತಾಲೂಕು ಸಂಚಾಲಕ ಅತ್ತಿಕುಪ್ಪೆ ರಾಮಕೃಷ್ಣ, ಸಿಪಿಐ (ಎಂ) ಮುಖಂಡ ಬಿ.ಬಸವರಾಜು ಕಲ್ಕುಣಿಕೆ ಮಾತನಾಡಿದರು. ದಸಂಸ ನಗರ ಸಂಚಾಲಕ ರಾಜು ಚಿಕ್ಕ ಹುಣಸೂರು, ತಾ ಸಂ ಸಂಚಾಲಕ ಮುತ್ತುರಾಜು ಹೊಸಳ್ಳಿ ಶಿವರಾಜು, ಜಿಲ್ಲಾ ಸಂಯೋಜಕ ಪ್ರಕಾಶ್, ಖಜಾಂಚಿ ಸಿದ್ದೇಶ್ ಅತ್ತಿಕುಪ್ಪೆ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೀರನಹಳ್ಳಿ ಬಾಲಸುಂದರ್, ದಸಂಸ ತಾ ಮಹಿಳಾ ಸಂಚಾಲಕಿ ರುಕ್ಮಿಣಿ, ಹಳೇಪುರ ಕೃಷ್ಣ, ಚಲುವರಾಜು, ಸೋಮಯ್ಯ, ತರಿಕಲ್ಲು ಕಿಟ್ಟಪ್ಪ, ಕೆಂಜ ರಾಜಪ್ಪ, ಪ್ರೊ. ಮಹದೇವ್, ಗಿರೀಶ್ ಬಿಳಿಕೆರೆ, ನಾರಾಯಣ, ವಕೀಲ ಅಶೋಕ್, ಫಾಸ್ಟಾರ್ ಸುರೇಶ್, ಕುಮಾರ್ ಕೆ.ಎಂ.ವಾಡಿ, ಸುಂದರ್ ಹೊಸಕೋಟೆ ಸೇರಿದಂತೆ ಮುಂತಾದವರಿದ್ದರು.

ತಿ.ನರಸೀಪುರದಲ್ಲಿ ಕನ್ನಡ ಸೇನೆ–ಕರ್ನಾಟಕ ಸಂಘಟನೆ ಅಸ್ತಿತ್ವಕ್ಕೆ ತರಲು ಚಿಂತನೆ

ತಿ.ನರಸೀಪುರ, ಡಿ.26– ಕನ್ನಡ ಸೇನೆ–ಕರ್ನಾಟಕ ಸಂಘಟನೆಯ ರಾಜ್ಯಾಧ್ಯಕ್ಷರಾದ ಕೆ.ಆರ್.ಕುಮಾರ್ ಅವರ ಆದೇಶದ ಮೇರೆಗೆ ತಾಲೂಕು ಘಟಕ ರಚಿಸಿ ಸಂಘಟನೆಯನ್ನು ಬಲಪಡಿಸುವ ಉದ್ದೇಶ ಹೊಂದಲಾಗಿದೆ ಎಂದು ಸಂಘಟನೆಯ ಜಿಲ್ಲಾ ಕಾರ್ಮಿಕ ಘಟಕದ ಉಪಾಧ್ಯಕ್ಷ ಬೈರಾಪುರ ಕೆ.ರಾಜು ಹೇಳಿದರು.

ಪಟ್ಟಣದ ಲೋಕೋಪಯೋಗಿ ಅತಿಥಿ ಗೃಹದಲ್ಲಿ ಶುಕ್ರವಾರ ಆಯೋಜಿಸಿದ್ದ ಸರಳ ಕಾರ್ಯಕ್ರಮದಲ್ಲಿ ಕನ್ನಡಸೇನೆ–ಕರ್ನಾಟಕ ಸಂಘಟನೆಯ ಮೈಸೂರು ಜಿಲ್ಲಾ ಘಟಕ ಹೊರತಂದಿರುವ 2026ನೇ ವರ್ಷದ ನೂತನ ದಿನ ದರ್ಶಿಕೆ ಬಿಡುಗಡೆ ಮಾಡಿ ಅವರು ಮಾತನಾಡಿದರು.

ನಾಡು, ನುಡಿ, ನಿಷ್ಠೆ ಹಾಗೂ ಸೇವೆಗೆ ಹೆಸರಾಗಿರುವ ಕನ್ನಡ ಸೇನೆ ಕರ್ನಾಟಕ ಸಂಘಟನೆಯನ್ನು ತಿ.ನರಸೀಪುರ ತಾಲೂಕಿನಲ್ಲಿ ಅಸ್ತಿತ್ವಕ್ಕೆ ತರಬೇಕೆಂಬ ಮಹದಾಸೆ ಹೊಂದಿದ್ದು ಮುಂದಿನ ದಿನಗಳಲ್ಲಿ ಬಲಿಷ್ಠವಾದ ಸಂಘಟನೆ ಕಟ್ಟುವ ಮೂಲಕ ತಾಲೂಕಿನಲ್ಲಿ ಸಂಘವು ತನ್ನದೇ ಆದ ಸಮಾಜ ಸೇವೆಯಲ್ಲಿ ಹಾಗು ಕನ್ನಡ ಪರವಾದ ಹೋರಾಟದಲ್ಲಿ ತೊಡಗಿಸಿಕೊಳ್ಳಲು ವೇದಿಕೆ ನಿರ್ಮಾಣ ಮಾಡಲಾಗುತ್ತದೆ ಎಂದರು.



ತಿ.ನರಸೀಪುರ ಲೋಕೋಪಯೋಗಿ ಅತಿಥಿ ಗೃಹದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಕನ್ನಡ ಸೇನೆ–ಕರ್ನಾಟಕ ಸಂಘಟನೆ ಹೊರತಂದಿರುವ ನೂತನ ವರ್ಷದ ದಿನದರ್ಶಿಕೆಯನ್ನು ಸಂಘಟನೆಯ ಜಿಲ್ಲಾ ಉಪಾಧ್ಯಕ್ಷ ಕೆ.ರಾಜು ಬಿಡುಗಡೆ ಮಾಡಿದರು.

ಈ ಬಾರಿ ಕ್ಯಾಲೆಂಡರ್ ಅನ್ನು ನಿಗದಿತ ಸಮಯಕ್ಕೆ ಬಿಡುಗಡೆ ಮಾಡಿ ಸಾರ್ವಜನಿಕರಿಗೆ ತಲುಪಿಸುವ ವ್ಯವಸ್ಥೆ ಮಾಡಲಾಗಿದ್ದು, ಕ್ಯಾಲೆಂಡರ್ ನಿಂದ ಜನರು ತಮ್ಮ ದಿನಚರಿ ನಿಗದಿ ಗೊಳಿಸಲು ಸಹಕಾರಿಯಾಗಲಿದೆ ಎಂದರು.

ಈ ವೇಳೆ ಕಳ್ಳಿಪುರ ಕಾಂತರಾಜು, ರಂಗಪ್ಪ, ಸತೀಶ್, ಬೈರಾಪುರ ಪ್ರಸನ್ನ, ಕೇಬಲ್ ಸ್ವಾಮಿ, ಯುವ ನಿರ್ದೇಶಕ ಕಾರ್ತಿಕ್ ಸೂರ್ಯ, ಪುಟ್ಟ ಸುಂದ್ರ, ತಲಕ ರಾಜಪ್ಪ, ಬೈರಾಪುರ ಶಂಕರ, ವಾಟಾಳು ಜಿ.ಎಸ್.ಪುಟ್ಟಸ್ವಾಮಿ, ನಾಗರಾಜು, ಐಬಿ ಶಿವು, ಕಲಾವಿದ ಸೋಮಣ್ಣ ಹಾಜರಿದ್ದರು.

ಕಾಂಗ್ರೆಸ್ ಕರಕುಶಲ, ಕುಶಲಕರ್ಮಿ ವಿಭಾಗದ ಅಧ್ಯಕ್ಷರಿಗೆ ಸನ್ಮಾನ

ತಿ.ನರಸೀಪುರ,ಡಿ.26– ಮೈಸೂರು ಜಿಲ್ಲಾ ಕಾಂಗ್ರೆಸ್ ಕರಕುಶಲ ಮತ್ತು ಕುಶಲ ಕರ್ಮಿ ವಿಭಾಗದ ಜಿಲ್ಲಾಧ್ಯಕ್ಷರಾಗಿ ನೇಮಕಗೊಂಡ ಬನ್ನೂರು ಪಟ್ಟಣದ ನಾಗರಾಜಚಾರ್ ರವರನ್ನು ತಾಲೂಕು ಬಾಬು ಜಗಜೀವನರಾಂ ಜನಕಲ್ಯಾಣ ಸಂಘದ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವತಿಯಿಂದ ಕರಕುಶಲ ಮತ್ತು ಕುಶಲ ಕರ್ಮಿ ವಿಭಾಗದ ಅಧ್ಯಕ್ಷರಾಗಿ ನೇಮಕಗೊಂಡ ವಿಶ್ವ ಕರ್ಮ ಜನಾಂಗದ ನಾಗರಾಜಚಾರ್ ಅವರನ್ನು ಪಟ್ಟಣದ ಎಪಿಎಂಸಿ ಆವರಣದಲ್ಲಿ ತಾಲೂಕು ಡಾ.ಬಾಬು ಜಗಜೀವನರಾಂ ಜನ ಸೇವಾ ಕಲ್ಯಾಣ ಸಂಘದ ಸದಸ್ಯರು ಮೈಸೂರು ಪೇಟ ತೊಡಿಸಿ ಫಲ–ತಾಂಬೂಲ ನೀಡಿ ಆತ್ಮೀಯವಾಗಿ ಸನ್ಮಾನಿಸಿದರು.



ಮೈಸೂರು ಜಿಲ್ಲಾ ಕಾಂಗ್ರೆಸ್ ಕರಕುಶಲ ಮತ್ತು ಕುಶಲ ಕರ್ಮಿ ವಿಭಾಗದ ಜಿಲ್ಲಾಧ್ಯಕ್ಷರಾಗಿ ನೇಮಕಗೊಂಡ ಬನ್ನೂರು ಪಟ್ಟಣದ ನಾಗರಾಜಚಾರ್‌ರವರನ್ನು ಸನ್ಮಾನಿಸಲಾಯಿತು.

ಈ ವೇಳೆ ಮಾತನಾಡಿದ ಬಾಬು ಜಗಜೀವನರಾಂ ಜನ ಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಶಂಕರ್ ಕಳೆದ 40 ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಶಿಸ್ತಿನ ಸಿಪಾಯಿಯಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಪಕ್ಷ ಅವರ ಸೇವೆ ಗುರುತಿಸಿ ಗುರುತರ ಜವಾಬ್ದಾರಿ ನೀಡಿದ್ದು ಈ ನೀಡಿರುವ ಜವಾಬ್ದಾರಿಯನ್ನು ನೂತನ ಅಧ್ಯಕ್ಷರು ಸಮರ್ಥವಾಗಿ ನಿಭಾಯಿಸಲಿದ್ದಾರೆ ಎಂಬ ವಿಶ್ವಾಸ ತಮಗಿದೆ ಎಂದರು. ಬನ್ನೂರು ಪುರಸಭೆ ಸದಸ್ಯ ಶಿವಣ್ಣ ಮಾತನಾಡಿದರು.

ಈ ವೇಳೆ ಡಾ.ಬಾಬು ಜಗಜೀವನರಾಂ ಜನಕಲ್ಯಾಣ ಸಂಘದ ಉಪಾಧ್ಯಕ್ಷ ಗೋವಿಂದರಾಜು, ಮಾದೇವ, ಕೆ.ಸಿ.ಲಿಂಗರಾಜು, ನಾಗಯ್ಯ, ಕೆಂಪಯ್ಯ, ಪ್ರಧಾನ ಕಾರ್ಯದರ್ಶಿ ಬಿ.ಮಾದೇಶ್, ಸಂಘಟನಾ ಕಾರ್ಯದರ್ಶಿ ಕಾರ್ ಶಿವರಾಜು, ರಾಚಪ್ಪ, ಬಸವರಾಜು, ನಿರ್ದೇಶಕರಾದ ರೇವಣ್ಣ ರಾಜು, ರಾಚಯ್ಯ, ನಾರಾಯಣಮೂರ್ತಿ, ಮನೋಜ್, ಬಿ.ರಾಚಪ್ಪ, ಮಹದೇವಣ್ಣ, ವಿಶ್ವ ಕರ್ಮ ಸಮಾಜದ ಮುಖಂಡರಾದ ಎಚ್.ಎನ್.ರಾಜು,ಪುರಸಭೆ ನಾಮ ನಿರ್ದೇಶನ ಸದಸ್ಯ ಮಹೇಶ್,ಕಾಂಗ್ರೆಸ್ ಮುಖಂಡ ರಮೇಶ್, ಬಿ.ಎನ್.ಮೂರ್ತಿ ಹಾಜರಿದ್ದರು.

ಏಕಲವ್ಯ ಶಾಲೆಗೆ ಬಂದ ಹೆಬ್ಬಾವು

ಅರಣ್ಯ ಇಲಾಖೆಯಿಂದ ರಕ್ಷಣೆ



ಹೆಚ್.ಡಿ.ಕೋಟೆ ತಾಲೂಕಿನ ಸೊಳ್ಳೆಪುರ ಏಕಲವ್ಯ ಮಾದರಿ ವಸತಿ ಶಾಲೆ ಗೇಟ್ ಸಮೀಪ ಪ್ರತ್ಯಕ್ಷಗೊಂಡ ಭಾರೀ ಗಾತ್ರದ ಹೆಬ್ಬಾವು

ಹೆಚ್.ಡಿ. ಕೋಟೆ, ಡಿ.26– ತಾಲೂಕಿನ ಸೊಳ್ಳೆಪುರ ಏಕಲವ್ಯ ಮಾದರಿ ವಸತಿ ಶಾಲೆಯ ಗೇಟ್ ಸಮೀಪ ಭಾರೀ ಗಾತ್ರದ ಹೆಬ್ಬಾವು ಪ್ರತ್ಯಕ್ಷಗೊಂಡು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿತು.

ತಾಲೂಕಿನ ಸೊಳ್ಳೆಪುರ ಏಕಲವ್ಯ ಮಾದರಿ ವಸತಿ ಶಾಲೆ ಗೇಟ್ ಸಮೀಪ ದಿಡೀರ್ ಭಾರಿ ಗಾತ್ರದ ಹೆಬ್ಬಾವು ಕಾಣಿಸಿಕೊಂಡಿತು. ದಾರಿಯಲ್ಲಿ ತೆರಳುತ್ತಿದ್ದ ವ್ಯಕ್ತಿ ಗಮನಿಸಿ ತಕ್ಷಣ ಗ್ರಾಮದ ಜನತೆ, ಅರಣ್ಯ ಇಲಾಖೆ ಅಧಿಕಾರಿಗಳಿಗೆ ದೂರವಾಣಿ ಮೂಲಕ ತಿಳಿಸಿದ. ನಂತರ ಸ್ಥಳಕ್ಕೆ ಆಗಮಿಸಿದ ಅರಣ್ಯ ಸಿಬ್ಬಂದಿಗಳು ಭಾರೀ ಗಾತ್ರದ ಹೆಬ್ಬಾವನ್ನ ಸೆರೆಹಿಡಿದು ಸುರಕ್ಷಿತವಾಗಿ ಅರಣ್ಯಕ್ಕೆ ಬಿಡಲಾಯಿತು.

ಕಳೆದ ತಿಂಗಳು ಮೇಟಿಕುಪ್ಪೆ ಬಸವನಗಿರಿ ಆಶ್ರಮಶಾಲೆ ಸಮೀಪ ಭಾರೀ ಗಾತ್ರದ ಹೆಬ್ಬಾವು ಕಾಣಿಸಿಕೊಂಡಿತು. ಅದಕ್ಕಿಂತ ಇದು ದೊಡ್ಡ ಗಾತ್ರದ ಹೆಬ್ಬಾವು. ಅದನ್ನು ಸುರಕ್ಷಿತವಾಗಿ ರಕ್ಷಿಸಿ ಅರಣ್ಯಕ್ಕೆ ಬಿಟ್ಟಿದ್ದೇವೆ ಎಂದು ಮೇಟಿಕುಪ್ಪೆ ಆರ್‌ಎಫ್‌ಓ ರಶ್ಮಿ ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಅರಣ್ಯ ಗಸ್ತು ಆನೆ ಪಾಲಕ ಸುದರ್ಶನ್, ಸಿಬ್ಬಂದಿಗಳಾದ ಪೂರ್ಣಚಂದ್ರ ಅಭಿ ವೆಂಕಟೇಶ್ ಗ್ರಾಮಸ್ಥರು ಹಾಜರಿದ್ದರು.

ಬೀದಿಗಿಳಿದು ಹೋರಾಟ ಮಾಡಿ, ಹಕ್ಕು ಪಡೆಯಿರಿ

ರೈತ ದಿನಾಚರಣೆಯಲ್ಲಿ ರೈತರಿಗೆ ವಿದ್ಯಾಸಾಗರ್ ಕರೆ



ನೇರಳೆ ಗ್ರಾಮದಲ್ಲಿ ನೂತನ ರೈತ ಸಂಘದ ಘಟಕ ಮತ್ತು ರೈತ ದಿನಾಚರಣೆ ಅಂಗವಾಗಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ನಂಜನಗೂಡು, ಡಿ.26– ದೇಶದಲ್ಲಿ ಆಳುವ ಸರ್ಕಾರಗಳು ರೈತರನ್ನು ಮತಯಂತ್ರವನ್ನಾಗಿ ಬಳಕೆ ಮಾಡಿಕೊಂಡು, ರೈತರ ಶೋಷಣೆಗೆ ಇಳಿದಿವೆ, ರೈತರು ಬೀದಿಗಿಳಿದು ಹೋರಾಟ ನಡೆಸದಿದ್ದಲ್ಲಿ ರೈತರ ಹಕ್ಕುಗಳನ್ನು ಪಡೆಯಲು ಸಾಧ್ಯವಿಲ್ಲ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಟಿ.ಆರ್. ವಿದ್ಯಾಸಾಗರ್ ಹೇಳಿದರು.


ತಾಲೂಕಿನ ನೇರಳೆ ಗ್ರಾಮದಲ್ಲಿ ನೂತನ ರೈತ ಸಂಘದ ಘಟಕ ಮತ್ತು ರೈತ ದಿನಾಚರಣೆ ಅಂಗವಾಗಿ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕೇಂದ್ರ ಬಿಜೆಪಿ ಸರ್ಕಾರ ಪ್ರತಿದಿನ 15 ಲಕ್ಷ ಕೋಟಿ ಸಾಲ ಮಾಡುವ ಮೂಲಕ ಬಂಡವಾಳ ಶಾಹಿಗಳಿಗೆ ದೇಶವನ್ನು ಮಾರಾಟ ನಡೆಸುವ ಹುನ್ನಾರ ನಡೆಸಿವೆ. ಅಲ್ಲದೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ರೈತ ವಿರೋಧಿ ಕಾಯ್ದೆಗಳನ್ನು ಜಾರಿಗೊಳಿಸಿ ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿವೆ. ರೈತರ ಬೆಳೆಗಳಿಗೆ ಬೆಂಬಲ ಬೆಲೆ ಘೋಷಣೆ ಮಾಡದೆ ರೈತರು ಸಂಕಷ್ಟದಲ್ಲಿದ್ದಾರೆ, ಇದರಿಂದ ರೈತರು ಆತ್ಮಹತ್ಯೆಯ ದಾರಿ ಹಿಡಿದಿದ್ದಾರೆ ಎಂದರು.

ರೈತರ ಸಮಸ್ಯೆಗಳು ಮತ್ತು ಹಕ್ಕುಗಳನ್ನು ಪಡೆಯಲು ರೈತರು ಬೀದಿಗಿಳಿದು ಹೋರಾಟ ನಡೆಸುವುದು ಅನಿವಾರ್ಯವಾಗಿದೆ, ಈ ನಿಟ್ಟಿನಲ್ಲಿ ರೈತ ಸಂಘಟನೆಗಳು ಗ್ರಾಮ ಹಂತದಲ್ಲಿ ರೈತ ಸಂಘದ ಗ್ರಾಮ ಘಟಕಗಳನ್ನು ತೆರೆದು ಯುವಕರನ್ನು ಸಂಘಟನೆಗೊಳಿಸಲಾಗುತ್ತಿದೆ ಯುವಕರು ರೈತರ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸಲು ಮುಂದಾಗಬೇಕು ಎಂದರು.

ಸಮಾರಂಭದಲ್ಲಿ ರಾಜ್ಯ ರೈತ ಸಂಘದ ಉಪಾಧ್ಯಕ್ಷ ಇಮ್ಮಾವು ರಘು, ಜಿಲ್ಲಾಧ್ಯಕ್ಷ ಸತೀಶ್ ರಾವ್, ರೈತ ಮುಖಂಡರಾದ ಬೊಕ್ಕಳ್ಳಿ ನಂಜುಂಡಸ್ವಾಮಿ, ರಂಗಸ್ವಾಮಿ ನಾಯಕ, ಶಂಕರ ನಾಯಕ, ಮಹದೇವ ನಾಯಕ, ಗಟ್ಟವಾಡಿಪುರ ಮಹದೇವು, ಮಹೇಶ್, ಸಿದ್ದೇಗೌಡ, ಕಿರಣ್, ಮಂಜುನಾಥ, ನಾಗರಾಜು, ಶ್ರೀನಿವಾಸ್, ಸೇರಿದಂತೆ ಹಲವಾರು ಪ್ರಮುಖರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಪವನ ನಿಧನ



ಹೆಚ್.ಡಿ. ಕೋಟೆ, ಡಿ.26– ಹೆಚ್.ಡಿ.ಕೋಟೆ ತಾಲೂಕಿನ ಕಾಂಗ್ರೆಸ್ ಪಕ್ಷದ ಟೌನ್ ಅಧ್ಯಕ್ಷ, ಸ್ಟುಡಿಯೋ ಪ್ರಕಾಶ್ ಅವರ ಪುತ್ರ ಹೆಚ್.ಪಿ. ಪವನ(28) ಶುಕ್ರವಾರ ಬೆಳಗಿನ ಜಾವ ನಿಧನರಾಗಿದ್ದಾರೆ.

ಮೃತರು ಪತ್ನಿ, ತಾಯಿ, ತಂದೆ, ಸಹೋದರಿ, ಸೇರಿದಂತೆ ಅಪಾರ ಬಂಧು ಬಳಗ ಆಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಶುಕ್ರವಾರ ಪಟ್ಟಣದ ಸಮೀಪ ಇರುವ ತೊರವಳ್ಳಿ ಗ್ರಾಮದ ಅವರ ಜಮೀನಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಶಾಸಕ ಅನಿಲ್ ಚಿಕ್ಕಮಾದು, ಪಕ್ಷದ ಮುಖಂಡರು ಹಾಗೂ ಛಾಯಾಗ್ರಾಹಕರು ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.12.2025 ಶನಿವಾರ, ಮಳೆ ನಕ್ಷತ್ರ: ಮೂಲ, 16.12.2025 ರಿಂದ 28.12.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಉಭಾ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ** : ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ವಿರಾಟ್ ವಿಶ್ವ ಗ್ಲೋಬಲ್ ಫೌಂಡೇಷನ್, ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಮೈಸೂರು ಜಿಲ್ಲಾ ವಿಶ್ವಕರ್ಮ ಸಮಾಜದ ಎಲ್ಲಾ ಸಂಘ ಸಂಸ್ಥೆಗಳು** : ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಟೌನ್‌ಹಾಲ್, ಬೆಳಗ್ಗೆ 9 ರಿಂದ.
- **ಶ್ರೀ ಜಯಚಾಮರಾಜೇಂದ್ರ ಪಿಯು ಕಾಲೇಜು** : ಶಾರದೋತ್ಸವ, ಕಾಲೇಜು ವಾರ್ಷಿಕೋತ್ಸವ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಸೀನಿಯರ್ ಸಿವಿಲ್ ಜಡ್ಜ್ ಕೆ.ಕೆ. ಅಮರನಾಥ್, ಅಧ್ಯಕ್ಷತೆ : ಸಂಸ್ಥೆ ಅಧ್ಯಕ್ಷ ಎನ್. ಸಚ್ಚಿದಾನಂದಮೂರ್ತಿ, ಉಪಸ್ಥಿತರು : ಕಾರ್ಯದರ್ಶಿ ಆರ್. ಆನಂದ, ಟ್ರಸ್ಟಿ ಶ್ರೀಮತಿ ಎಂ.ಎ. ಜಯಶ್ರೀ, ಕಾಲೇಜು ಪ್ರಿನ್ಸಿಪಾಲ್ ಸಾಗರ್ ಚಕ್ರವರ್ತಿ, ಉಪ ಪ್ರಾಂಶುಪಾಲ ಹರ್ಷ, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 9.30ಕ್ಕೆ.
- **ರಾಮ್‌ಸನ್ಸ್ ಬೊಂಬೆ ಮನೆ** : ದಸರೆಯ ಬೊಂಬೆ ಪ್ರದರ್ಶನ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ಶ್ರೀ ರಾಮಕೃಷ್ಣ ವಿದ್ಯಾಕೇಂದ್ರ** : ಕಲಾ ಸಂಗಮ, ಶಾಲಾ ವಾರ್ಷಿಕೋತ್ಸವ, ಸಾನ್ನಿಧ್ಯ : ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಅಧ್ಯಕ್ಷತೆ : ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಮುಖ್ಯ ಅತಿಥಿಗಳು : ಅಂಕಣಕಾರ ಜೆ.ಬಿ. ರಂಗಸ್ವಾಮಿ, ಉಪಸ್ಥಿತರು : ಎಂ. ದೊರೆರಾಜು, ಹೆಚ್.ಕೆ. ಅಶೋಕ್‌ಕುಮಾರ್, ಹೆಚ್.ಬಿ. ರಮೇಶ್, ಜಿ.ಎನ್. ವಿಶ್ವನಾಥ್, ಕೆ. ಕೆಂಪಲಿಂಗರಾಜು, ಪ್ರೊ. ಬಿ. ಚಂದ್ರಶೇಖರ್, ಶ್ರೀಮತಿ ವೀಣಾ ಕೆ. ಹೆಗಡೆ, ಸ್ಥಳ: ಶ್ರೀ ಶಾರದಾ ಸಭಾಂಗಣ, ರಾಮಕೃಷ್ಣ ವಿದ್ಯಾಕೇಂದ್ರ, ಬೆಳಗ್ಗೆ 10 ರಿಂದ.
- **ಸಪ್ನ ಬುಕ್ ಹೌಸ್** : 70 ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮ, ಕೃತಿಗಳ ಲೋಕಾರ್ಪಣೆ : ವಿದ್ವಾಂಸ ಡಾ. ಪ್ರಧಾನ ಗುರುದತ್ತ, ಅಧ್ಯಕ್ಷತೆ : ಹಿರಿಯ ವಿದ್ವಾಂಸ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, ಉಪಸ್ಥಿತರು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಸಪ್ನ ಬುಕ್ ಹೌಸ್, ನಾರಾಯಣಶಾಸ್ತ್ರಿ ರಸ್ತೆ, ಬೆಳಗ್ಗೆ 10ಕ್ಕೆ.
- **ಜೆಎಸ್‌ಎಸ್ ಮಹಿಳಾ ಕಾಲೇಜು** : ರಿಸರ್ಚ್ ಮೆಥೋಡೋಲಜಿ ಫಾರ್ ಎಮರ್ಜಿಂಗ್ ರಿಸರ್ಚರ್ಸ್ ಕುರಿತು ಎಫ್‌ಡಿಪಿ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರು ಮಠ, ಅಧ್ಯಕ್ಷತೆ : ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ರೇಚಣ್ಣ, ಸ್ಥಳ: ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.
- **ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು** : ಶರಣೆಂದೆ ಭೂಮಿ ತಾಯಿಗೆ ಕಾರ್ಯಕ್ರಮ, ಉದ್ಘಾಟನೆ : ಜಾನಪದ ತಜ್ಞ ಡಾ. ಪಿ.ಕೆ. ರಾಜಶೇಖರ, ಅಧ್ಯಕ್ಷತೆ : ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಡಾ. ಗೊಲ್ಲಹಳ್ಳಿ ಶಿವಪ್ರಸಾದ್, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಮುನಿರಾಜು, ಅಕಾಡೆಮಿ ಕುಲಸಚಿವ ಎನ್. ನಮ್ರತ, ಉಪಸ್ಥಿತರು : ಡಾ. ಮೈಸೂರು ಉಮೇಶ್, ಡಾ. ಮೈಸೂರು ಜಿ. ಗುರುರಾಜ್, ಸ್ಥಳ: ಕಿರು ರಂಗಮಂಟಪ, ಕಲಾಮಂದಿರ ಆವರಣ, ಬೆಳಗ್ಗೆ 10.30ಕ್ಕೆ
- **ಓಟಿಕೇರ್ ಆಸ್ಪತ್ರೆ** : ಉಚಿತ ಕಿವಿ ಪರೀಕ್ಷೆ, ಸ್ಥಳ: ಓಟಿಕೇರ್ ಆಸ್ಪತ್ರೆ, ಅಗ್ರಹಾರ, ಬೆಳಗ್ಗೆ 11 ರಿಂದ.
- **ವ್ಯವಸ್ಥಾಪಕರು** : ಪತ್ರಿಕಾ ಛಾಯಾಗ್ರಾಹಕರಾದ ಎಸ್.ಆರ್. ಮಧುಸೂದನ್ ಹಾಗೂ ಜಿ.ಎಸ್. ರವಿಶಂಕರ್ ಅವರ ವನ್ಯಜೀವಿ ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಉಪಸ್ಥಿತರು : ಕೃಪಾಕರ ಸೇನಾನಿ, ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ. ಹರೀಶ್‌ಗೌಡ, ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಹೆಚ್.ಸಿ. ಕಾಂತರಾಜು, ಕೆ.ಬಿ. ಮಹೇಶ್ ಕುಮಾರ್, ಧರ್ಮಾಪುರ ನಾರಾಯಣ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಬೆಳಗ್ಗೆ 11.15ಕ್ಕೆ.
- **ವ್ಯವಸ್ಥಾಪಕರು** : ಸಿಸಿಎಆರ್‌ಡಿ ಇಂಟರ್‌ನ್ಯಾಷನಲ್ ಕಾನ್ಫರೆನ್ಸ್ –2025 ಸಮಾರೋಪ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಶ್ರೀ ಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕ ಟಿ.ಎಸ್. ಶ್ರೀವತ್ಸ, ಆಯುರ್ವೇದ ಶಿಕ್ಷಣ ತಜ್ಞ ಡಾ. ವಿಜಯೇಂದ್ರ ಎಸ್. ಮೂರ್ತಿ, ಅಧ್ಯಕ್ಷತೆ : ಕಾವೇರಿ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಜಿ.ಆರ್. ಚಂದ್ರಶೇಖರ್, ಜೀವಮಾನ ಸಾಧನೆ ಪ್ರಶಸ್ತಿ : ಕಾವೇರಿ ಆಯುರ್ವೇದ ಗುರು ತಿಲಕ ಪ್ರಶಸ್ತಿ–ಡಾ. ಎನ್. ಆಂಜನೇಯಮೂರ್ತಿ, ಕಾವೇರಿ ಆಯುರ್ವೇದ ವೈದ್ಯ ಶ್ರೇಷ್ಠ ಪ್ರಶಸ್ತಿ–ಡಾ. ಜಗದೀಶ್ ವಿಷ್ಣು ಯಾಜಿ, ಸ್ಥಳ: ಎಸ್‌ಡಿಎಂ–ಐಎಂಡಿ ಸಭಾಂಗಣ, ಚಾಮುಂಡಿಬೆಟ್ಟದ ರಸ್ತೆ, ಮಧ್ಯಾಹ್ನ 3ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ– ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೂಡ್ಲಿ ಗುರುರಾಜು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ–ಡಾ.ಜಿ. ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಚಿತ್ರಗೀತೆಗಳು, 9.05 ಕ್ಯಾನ್ಸರ್–ತಪ್ಪು ತಿಳುವಳಿಕೆ ಈ ಕುರಿತ ಪ್ರಾಯೋಜಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ :ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ–ದೇವರ ಮುಡಿ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ) ರಾಷ್ಟ್ರಕವಿ ಕುವೆಂಪು ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ಸಂದ ಸಂದರ್ಭದಲ್ಲಿ ಅವರೊಡನೆ ಡಾ. ಪ್ರಭುಶಂಕರ್ ಅವರು ನಡೆಸಿದ್ದ ಸಂವಾದ ನಂತರ ಕುವೆಂಪು ಅವರಿಂದ ಸ್ವರಚಿತ ಕವನ ವಾಚನ, 6.50 ಕೃಷಿರಂಗ :ಕಿಸಾನ್ ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ, ಭಾಗವಹಿಸುತ್ತಾರೆ ಕೊಳ್ಳೇಗಾಲ ತಾಲೂಕು, ಪಾಳ್ಯ ಹೋಬಳಿ ಸಿಂಗಾನಲ್ಲೂರು ಗ್ರಾಮದ ಕೃಷಿಕ ದಂಪತಿ ಜೆ. ವೃಷಬೇಂದ್ರ ಮತ್ತು ಬಿ. ಸುಮಿತ್ರಾ, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಸುಭವ್ರೊ ಭಟ್ಟಚಾರ್, ಹಾಡುಗಾರಿಕೆ – ಖಯಾಲ್

- **ಸುರುಚಿ ರಂಗಮನೆ** : ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 912, ಕಥೆ ಹೇಳುವವರು: ವೆಂಕಟರಮಣ ಭಟ್, ಸಹಾಯಕ ಪ್ರಾಧ್ಯಾಪಕರು, ಶಾರದಾ ವಿಲಾಸ ಕಾಲೇಜು, ಮೈಸೂರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.
- **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ** : ಶಕುಂತಲ ಜಯದೇವ ಶರಣ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಪರಿಷತ್ ರಾಜ್ಯಾಧ್ಯಕ್ಷ ಡಾ. ಸಿ. ಸೋಮಶೇಖರ, ಮುಖ್ಯ ಅತಿಥಿಗಳು : ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಪದ್ಮಾಶೇಖರ್, ಪ್ರಶಸ್ತಿ ಪುರಸ್ಕೃತರು : ಶರಣತತ್ವ ಚಿಂತಕ ಡಾ. ನೀಲಾಂಬಿಕಾ ಪೊಲೀಸ್ ಪಾಟೀಲ, ಸಂಸ್ಕೃತಿ ಚಿಂತಕ ಶಂಕರ ದೇವನೂರು, ಉಪಸ್ಥಿತರು : ಡಾ. ಶಕುಂತಲ ಜಯದೇವ, ಸ್ಥಳ: ಶ್ರೀ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 5ಕ್ಕೆ.
- **ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್, ಶ್ರೀ ವಾಣಿವಿಲಾಸ ಅರಸು ಬಾಲಿಕಾ ಪದವಿಪೂರ್ವ ಕಾಲೇಜು** : ಕಾಲೇಜು ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಶ್ರೀಮತಿ ಎಂ.ಪಿ. ನಾಗಮ್ಮ, ಅಧ್ಯಕ್ಷತೆ : ಟ್ರಸ್ಟ್ ಗೌರವ ಕಾರ್ಯದರ್ಶಿ ಮಹೇಶ್ ಎನ್. ಅರಸ್, ಉಪಸ್ಥಿತರು : ಶ್ರೀ ವಾಣಿವಿಲಾಸ ಅರಸು ಶಿಕ್ಷಣ ಸಂಸ್ಥೆ ಚೇರ್‌ಮನ್ ಸಿದ್ದಪ್ಪ, ಸ್ಥಳ: ಕಾಲೇಜು ಆವರಣ, ಸಂಜೆ 5ಕ್ಕೆ.
- **ಡಾ. ಕೆ. ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ, ವಿದ್ಯುತ್ ಪ್ರಕಾಶನ** : ಮೂರು ಪುಸ್ತಕಗಳ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಪುಸ್ತಕಗಳ ಲೋಕಾರ್ಪಣೆ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಪ್ರಾಸ್ತಾವಿಕ ನುಡಿ : ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಸ್ಥಳ: ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.
- **ಸುರಭಿ ಗಾನ ಕಲಾ ಮಂದಿರ ಚಾರಿಟೆಬಲ್ ಟ್ರಸ್ಟ್** : ವಿದ್ವಾನ್ ಅಮಿತ್ ನಾಡಿಗ್ ಅವರಿಂದ ಕೊಳಲು ವಾದನ, ವಿದುಷಿ ರಕ್ಷಿತಾ ರಮೇಶ್–ವೀಣೆ, ವಿದ್ವಾನ್ ಸುನಾದ ಕೃಷ್ಣ ಅಮೈ–ಮೃದಂಗ, ಮಾಸ್ಟರ್ ಸ್ಕಂದ ಮಂಜುನಾಥ್–ಘಟಂ, ಮುಖ್ಯ ಅತಿಥಿಗಳು : ವಿದ್ವಾನ್ ರಘುನಂದನ್ ವ್ಯಾಸರಾವ್, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪ ಮಂದಿರ, ಸಂಜೆ 5.30ಕ್ಕೆ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ** : ವಿದ್ವಾನ್ ರಾಯಚೂರು ಶೇಷಗಿರಿದಾಸ್ ಅವರಿಂದ ದಾಸವಾಣಿ ಕಾರ್ಯಕ್ರಮ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಸಂಜೆ 5.30 ರಿಂದ.
- **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್** : ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಕಛೇರಿ, ವಿದುಷಿ ಮಾನಸ ನಯನ ಅವರಿಂದ ಗಾಯನ, ವಿದ್ವಾನ್ ಎಸ್.ಎನ್. ನರಸಿಂಹನ್–ಪಿಟೀಲು, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ಶ್ರೀರಾಮಮಂದಿರ, ಜಯನಗರ, ಸಂಜೆ 6 ರಿಂದ.
- **ಪರಂಪರೆ** : ಶ್ರೀ ಮದ್ಭಾಗವತ ಉಪನ್ಯಾಸ ಸರಣಿ, ಸವಿಗಾನ ದಾಸವಾಣಿಯಿಂದ ಭಜನೆ, ಡಾ. ವೀಣಾ ಬನ್ನಂಜೆ ಅವರಿಂದ ಭಾಗವತ ಉಪನ್ಯಾಸ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6 ರಿಂದ.
- **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಇಷ್ಟನಾಥಾನಂದ ಅವರಿಂದ ಕೈವಲ್ಯೋಪನಿಷದ್ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ** : ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀವೇಣುಗೋಪಾಲಸ್ವಾಮಿ ದೇವಸ್ಥಾನ, ತ್ಯಾಗರಾಜ ರಸ್ತೆ, ಸಂಜೆ 6.30 ರಿಂದ.
- **ಶ್ರೀ ಮಹಾಜನ ಸಭಾ ಟ್ರಸ್ಟ್** : ತಿರುಪ್ಪಾವೈ ಪಾರಾಯಣ, ಡಾ. ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾದೇವಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್ ಆವರಣ, ಶ್ರೀ ರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6.30 ರಿಂದ.
- **ರಂಗಾಯಣ** : ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ವಿಗಡ ವಿಕ್ರಮರಾಯ ನಾಟಕ ಪ್ರದರ್ಶನ, ನಿರ್ದೇಶನ : ಸಾಲಿಯಾನ್ ಉಮೇಶ್ ನಾರಾಯಣ, ಸ್ಥಳ: ವನರಂಗ, ರಂಗಾಯಣ, ಸಂಜೆ 6.30ಕ್ಕೆ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ**: ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣ ಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಕೆ.ಆರ್.ಆಸ್ಪತ್ರೆ ಬಯೋ ತ್ಯಾಜ್ಯದ ಶೆಡ್‌ಗೆ ಬೆಂಕಿ; ಧಗಧಗಿಸಿದ ಜ್ವಾಲೆ, ದಟ್ಟ ಹೊಗೆ

● ಕೆಲ ಕಾಲ ರೋಗಿಗಳು, ಸಿಬ್ಬಂದಿಯಲ್ಲಿ ಆತಂಕ ● ಅಗ್ನಿಶಾಮಕ ದಳದಿಂದ ಯಶಸ್ವಿ ಕಾರ್ಯಾಚರಣೆ ● ನಿರುಪಯುಕ್ತ ಹಾಸಿಗೆ ಇನ್ನಿತರೆ ವಸ್ತು ಸುಟ್ಟು ಭಸ್ಮ





ಮೈಸೂರಿನ ಕೆ.ಆರ್.ಆಸ್ಪತ್ರೆ ಆವರಣದಲ್ಲಿರುವ ಬಯೋವೇಸ್ಟ್ ಶೆಡ್‌ಗೆ ಶುಕ್ರವಾರ ಸಂಜೆ ಆಕಸ್ಮಿಕವಾಗಿ ಬೆಂಕಿ ಬಿದ್ದು, ಅಲ್ಲಿ ಶೇಖರಿಸಿದ್ದ ನಿರುಪಯುಕ್ತ ವಸ್ತುಗಳು ಭಸ್ಮವಾಗಿವೆ.

ನಿರುಪಯುಕ್ತ ವಸ್ತುಗಳು ಬೆಂದು ಹೋಗಿವೆ

ಕೆ.ಆರ್.ಆಸ್ಪತ್ರೆ ಆವರಣದಲ್ಲಿದ್ದ ಬಯೋವೇಸ್ಟ್ ಶೆಡ್‌ನಲ್ಲಿ ನಿರುಪಯುಕ್ತ ಹಾಸಿಗೆಯನ್ನು ಇರಿಸಲಾಗಿತ್ತು. ಅಲ್ಲಿ ವೆಲ್ಡಿಂಗ್ ಕಾರ್ಯ ಮಾಡುತ್ತಿದ್ದಾಗ ಆಕಸ್ಮಿಕವಾಗಿ ಕಿಡಿ ತಗುಲಿ, ಬೆಂಕಿ ಹೊತ್ತಿಕೊಂಡಿದ್ದು, ಅಗ್ನಿ ಶಾಮಕ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಈ ಘಟನೆಯಿಂದ ಯಾವುದೇ ಹಾನಿಯಾಗಿಲ್ಲ.

- ಡಾ. ಕೆ.ಆರ್.ದಾಕ್ಷಾಯಿಣಿ,
ಡೀನ್ ಮತ್ತು ಡೈರೆಕ್ಟರ್,
ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ

ಮೈಸೂರು, ಡಿ.26(ಎಂಟಿವೈ)– ಮೈಸೂರಿನ ಕೆ.ಆರ್.ಆಸ್ಪತ್ರೆಯ ಆವರಣದಲ್ಲಿರುವ ಬಯೋವೇಸ್ಟ್ ಶೆಡ್‌ನಲ್ಲಿ ಸಂಗ್ರಹಿಸಲಾಗಿದ್ದ ತ್ಯಾಜ್ಯಕ್ಕೆ ಶುಕ್ರವಾರ ಮಧ್ಯಾಹ್ನ ಆಕಸ್ಮಿಕವಾಗಿ ಬೆಂಕಿ ಬಿದ್ದು ದಟ್ಟ ಹೊಗೆಯೊಂದಿಗೆ ಬೆಂಕಿಯ ಕೆನ್ನಾಲಿಗೆ ಭುಗಿಲೆದ್ದು, ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಕೆ.ಆರ್.ಆಸ್ಪತ್ರೆಯ ಕಲ್ಲು ಬಿಲ್ಡಿಂಗ್ ಪಕ್ಕ, ನರ್ಸಿಂಗ್ ಹಾಸ್ಟೆಲ್ ಹಿಂಭಾಗವಿರುವ ಬಯೋವೇಸ್ಟ್ ಶೆಡ್‌ನಲ್ಲಿ ಆಸ್ಪತ್ರೆಯಲ್ಲಿ ಬಳಸಿದ್ದ ಹಾಸಿಗೆ, ಬೆಡ್‌ಶೀಟ್ ಸೇರಿದಂತೆ ನಿರುಪಯುಕ್ತ ವಸ್ತುಗಳನ್ನು ಸಂಗ್ರಹಿಸಲಾಗಿತ್ತು. ಅಲ್ಲದೆ, ಇತ್ತೀಚೆಗಷ್ಟೆ ಕೆ.ಆರ್.ಆಸ್ಪತ್ರೆ ಆವರಣದಲ್ಲಿ ನೆಲಸಮ ಮಾಡಿದ ಕಟ್ಟಡದ ಕೊಠಡಿಯಲ್ಲಿದ್ದ ಕುಶನ್ ಮಾದರಿಯ ಹಾಸಿಗೆಗಳನ್ನು ಜೋಡಿಸಿಡಲಾಗಿತ್ತು. ಆದರೆ, ಶುಕ್ರವಾರ ಮಧ್ಯಾಹ್ನ 3.30ರಲ್ಲಿ ಬಯೋವೇಸ್ಟ್ ಶೆಡ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ.

ಬೆಂಕಿ ಕ್ಷಣಾರ್ಧದಲ್ಲಿ ಕುಶನ್ ಹಾಸಿಗೆಗೆ ವ್ಯಾಪಿಸಿದೆ ಇದರಿಂದ ದಟ್ಟ ಹೊಗೆ ಆವರಿಸಿದೆ ಹಾಸಿಗೆಗಾಗಿ ಬಳಸಿದ್ದ ತೆಂಗಿನನಾರಿಗೆ ಬೆಂಕಿ ಹೊತ್ತಿಕೊಂಡು ಇಡೀ ಬಯೋವೇಸ್ಟ್ ಶೆಡ್‌ಗೆ ಬೆಂಕಿ ವ್ಯಾಪಿಸಿದೆ. ಬೆಂಕಿ ತೀವ್ರತೆ ಹೆಚ್ಚಾಗುತ್ತಿದ್ದಂತೆ, ಜೆ.ಕೆ.ಮೈದಾನದ ಮುಂಭಾಗದ ರಸ್ತೆಗೆಲ್ಲಾ ದಟ್ಟ ಹೊಗೆ ಆವರಿಸುತ್ತಿದ್ದಂತೆ ಶೆಡ್‌ನಲ್ಲಿ ಆಕಸ್ಮಿಕ ಬೆಂಕಿ ಬಿದ್ದಿರುವುದು ಖಚಿತಪಡಿಸಿಕೊಂಡ ಸಾರ್ವಜನಿಕರು ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ್ದಾರೆ. ಅಷ್ಟರಲ್ಲಾಗಲೇ ಶೆಡ್‌ಗೆ ಬೆಂಕಿ ಬಿದ್ದಿರುವ ಮಾಹಿತಿ ಪಡೆದು ಕೆ.ಆರ್.ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆಯ ಹಿರಿಯ ಅಧಿಕಾರಿಗಳು, ವೈದ್ಯಕೀಯ ಅಧೀಕ್ಷಕರು ಸ್ಥಳಕ್ಕೆ ಬಂದು ಪರಿಶೀಲಿಸಿದರು.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದರು. ಸತತ ಒಂದು ಗಂಟೆಗೂ ಹೆಚ್ಚು ಕಾಲ ಶ್ರಮಿಸಿ, ಕೊನೆಗೂ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಅಷ್ಟರಲ್ಲಾಗಲೇ ಅಲ್ಲಿದ್ದ ನಿರುಪಯುಕ್ತ ಹಾಸಿಗೆಗಳು ಭಸ್ಮವಾಗಿದ್ದವು. ಅದು ಬಿಟ್ಟು ಬೇರೆ ಹಾನಿಯಾಗಿಲ್ಲ.

ವೆಲ್ಡಿಂಗ್ ಮಾಡುವಾಗ ಕಿಡಿ ಹಾರಿದೆ: ಕೆ.ಆರ್.ಆಸ್ಪತ್ರೆ ಆವರಣದಲ್ಲಿ ನೂತನ ಕಟ್ಟಡ ಕಾಮಗಾರಿ ನಡೆಯುತ್ತಿದೆ ಇದಕ್ಕಾಗಿ ಶೆಡ್ ಬಳಿ ವೆಲ್ಡಿಂಗ್ ಮಾಡಲಾಗುತ್ತಿತ್ತು ಎನ್ನಲಾಗಿದೆ. ಈ ವೇಳೆ ಆಕಸ್ಮಿಕವಾಗಿ ಶೆಡ್‌ನಲ್ಲಿರುವ ಹಾಸಿಗೆಗೆ ಕಿಡಿ ಹಾರಿದ್ದರಿಂದ ಬೆಂಕಿ ಹೊತ್ತಿಕೊಂಡಿದೆ ಎನ್ನಲಾಗಿದೆ ಆದರೂ, ಅಲ್ಲಿನ ಸಿಬ್ಬಂದಿ ನಲ್ಲಿ ನೀರಿನಿಂದ ಬೆಂಕಿ ನಂದಿಸಲು ಪ್ರಯತ್ನಿಸಿದ್ದಾರೆ. ಆದರೂ ಪ್ರಯೋಜನವಾಗಿಲ್ಲ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಕ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
45 (ಕ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	5 ಪ್ರದರ್ಶನಗಳು
ಲಿಡೋ	
ವೃಷಭ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಂತಾರ–2 (ಕ)	4 ಪ್ರದರ್ಶನಗಳು

ಬಾಂಗ್ಲಾದೇಶದಲ್ಲಿ ಹಿಂದೂಗಳ ಹತ್ಯೆ, ದೌರ್ಜನ್ಯ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ



ಬಾಂಗ್ಲಾದೇಶದಲ್ಲಿ ಹಿಂದೂಗಳ ಹತ್ಯೆ, ಹಿಂಸಾಚಾರ ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಅಗ್ರಹಾರ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಡಿ.26(ಜಿಎ)–ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ಹಿಂದೂಗಳ ಹತ್ಯೆ ಮತ್ತು ಹಿಂಸಾಚಾರವನ್ನು ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಅಗ್ರಹಾರ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ಕಳೆದ ಒಂದು ವರ್ಷದಿಂದ ನಿರಂತರವಾಗಿ ದಾಳಿ ನಡೆಯುತ್ತಿದೆ. ಅಲ್ಲಿನ ಪ್ರಧಾನಮಂತ್ರಿಗೆ ಭಾರತದಲ್ಲಿ ನೆಲೆ ಕೊಟ್ಟ ಮೇಲೆ ಹಿಂದೂಗಳ ಮೇಲಿನ ದಾಳಿ ತೀವ್ರವಾಗಿದೆ. ಹಿಂದೂಗಳ ಮನೆಗೆ ನುಗ್ಗಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮಾಡುತ್ತಿದ್ದಾರೆ. ಇಷ್ಟೆಲ್ಲ ನಡೆಯುತ್ತಿದ್ದರೂ ದೇಶದ ಪ್ರಧಾನಿ ಇದರ ಬಗ್ಗೆ ಒಂದು ಹೇಳಿಕೆಯನ್ನೂ ನೀಡುತ್ತಿಲ್ಲ. ಬದಲಿಗೆ ವಿದೇಶ ಸುತ್ತುವ ಗುಂಗಿನಲ್ಲಿದ್ದಾರೆ. ನಮ್ಮ ದೇಶದಿಂದ ವಿಭಜನೆಯಾದ ಬಾಂಗ್ಲಾದೇಶದಲ್ಲಿನ ಹಿಂದೂಗಳಿಗೆ ಯಾವುದೇ ರೀತಿಯ ಸಾಂತ್ವನ ಹೇಳುತ್ತಿಲ್ಲ ಎಂದು ಪ್ರತಿಭಟನಾಕಾರರು ದೂರಿದರು.

ಈಗಾಗಲೇ ದೇಶದೊಳಗೆ ಬಾಂಗ್ಲಾದೇಶದಿಂದ ಲಕ್ಷಾಂತರ ಜನ ನುಗ್ಗಿದ್ದು, ಕೆಲವರು ಆಧಾರ್ ಕಾರ್ಡ್ ಮಾಡಿಸಿಕೊಂಡು ಮತದಾರರಾಗಿದ್ದಾರೆ. ಇದಕ್ಕೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯೇ ಕಾರಣ. ದೇಶದಲ್ಲಿ ಬಿಜೆಪಿ ಅಧಿಕಾರ ಬಂದಿದ್ದರೂ ಯಾವೊಬ್ಬ ಕಾರ್ಯಕರ್ತರೂ ಬಾಂಗ್ಲಾದೇಶದ ಹಿಂದೂಗಳ ಪರವಾಗಿ ನಿಲ್ಲುತ್ತಿಲ್ಲ. ಹೀಗಾಗಿ ಕೂಡಲೇ ಪ್ರಧಾನಿ ನರೇಂದ್ರ ಮೋದಿ ಮಧ್ಯ ಪ್ರವೇಶಿಸಿ ಹಿಂದೂಗಳ ರಕ್ಷಣೆಗೆ ಮುಂದಾಗಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಪ್ಯಾಲೇಸ್ ಬಾಬು, ನಾಲಾಬೀದಿ ರವಿ, ಗೋಪಿ, ಗುರುಬಸಪ್ಪ ಬೋಗಾದಿ ಸಿದ್ದೇಗೌಡ, ಹರೀಶ್, ಸಾಯಿ ಚಾಮರಾಜು, ಎಲ್‌ಐಸಿ ಸಿದ್ದಪ್ಪ ಹೊಸಕೆರೆ ಸ್ವಾಮಿ, ಮಾದಪ್ಪ, ಚಿನ್ನಪ್ಪ, ಶಿವು ಗೌಡ, ಸ್ವಾಮಿ ಗೈಡ್, ರಮೇಶ್, ರೈತ ಪರ್ವ ಅಧ್ಯಕ್ಷ ಅರುಣ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ವಿದ್ಯಾರ್ಥಿಗಳ ಬಾಳಿಗೆ ಶಿಕ್ಷಕರು ಸೂರ್ಯನಂತೆ ಬೆಳಕಾಗಬೇಕು

ಎಂಎಲ್‌ಸಿ ಸಿ.ಎನ್.ಮಂಜೇಗೌಡ



ಮೈಸೂರು, ಡಿ.26– ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳನ್ನು ಆಯೋಜಿಸಿ ಗುಣಮಟ್ಟದ ಶಿಕ್ಷಣ ನೀಡುವುದರ ಮೂಲಕ ಶಿಕ್ಷಕರು ಸೂರ್ಯನಂತೆ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ನಗರದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ದಕ್ಷಿಣವಲಯ ವತಿಯಿಂದ ರಾಮಕೃಷ್ಣನಗರದ ನೃಪತುಂಗ ಕನ್ನಡ ಶಾಲೆಯಲ್ಲಿ ನಡೆದ 2025–26ನೇ ಸಾಲಿನ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಿಕ್ಷಣ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡುವುದರ ಮುಖಾಂತರ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದು, ಅಧಿಕಾರಿಗಳು, ಶಿಕ್ಷಕರು ಇದರ ಸದುಪಯೋಗ ಮಾಡಿಕೊಂಡು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಬೇಕು ಎಂದರು.

ಇಂದು ದೇಶದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸುವವರೆಲ್ಲಾ ಸಾಮಾನ್ಯವಾಗಿ ಸರ್ಕಾರಿ ಶಾಲೆಯಲ್ಲಿ ಓದಿದವರಾಗಿದ್ದಾರೆ. ದೊಡ್ಡ ದೊಡ್ಡ ರಾಜಕಾರಣಿಗಳು ಸರ್ಕಾರಿ ಶಾಲೆಯಲ್ಲೇ ಓದಿದ್ದಾರೆ. ಆದ್ದರಿಂದ ಸರ್ಕಾರಿ ಶಾಲೆ ಎಂಬ ಕೀಳರಿಮೆ ಬಿಡಬೇಕು. ಭಾರತದಲ್ಲಿ ಓದಿದಂತಹ ವಿದ್ಯಾರ್ಥಿಗಳು ಪ್ರಪಂಚದಾದ್ಯಂತ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಪ್ರತಿಯೊಂದು ಮಗುವಿನಲ್ಲಿಯೂ ಒಂದೊಂದು ಪ್ರತಿಭೆ ಅಡಗಿರುತ್ತದೆ. ಅಂತಹ ಪ್ರತಿಭೆಗಳನ್ನು ಗುರುತಿಸಲು ಪ್ರತಿಭಾ ಕಾರಂಜಿ ಕಾರ್ಯಕ್ರಮಗಳು ಅತ್ಯವಶ್ಯಕವಾಗಿವೆ. ವಿದ್ಯಾರ್ಥಿಗಳ ಪ್ರತಿಭೆ ಜಿಲ್ಲೆ, ರಾಜ್ಯ, ರಾಷ್ಟ್ರಮಟ್ಟದಲ್ಲಿ ಬೆಳಗಲಿ, ನಿಮ್ಮ ಬಾಳಿಗೆ ನೀವೇ ಶಿಲ್ಪಿಯಾಗಬೇಕು ಎಂದು ಶುಭಹಾರೈಸಿದರು.

ಸಮಾರಂಭದಲ್ಲಿ ಶಾಸಕ ಟಿ. ಶ್ರೀವತ್ಸ, ಡಿಡಿಪಿಐ ಉದಯ್‌ಕುಮಾರ್, ಡಯಟ್ ಪ್ರಾಂಶುಪಾಲ ನಾಗರಾಜಯ್ಯ, ಬಿಇಓ ಕೃಷ್ಣ, ಅರುಣ್‌ಕುಮಾರ್, ಸೋಮೇಗೌಡ, ಮಾಲಂಗಿ ಸುರೇಶ್, ರಘು, ಮಾಲೇಗೌಡ, ಮಹದೇವ, ಶ್ರೀಹರ್ಷ ಹಾಜರಿದ್ದರು, ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಚಾಮುಂಡಿಬೆಟ್ಟ ಹೇಗಿದೆಯೋ ಹಾಗೆ ಬಿಡಿ

ಪ್ರಸಾದ ಯೋಜನೆಯ ಕಾಮಗಾರಿ ಕೈ ಬಿಡಲು ಮಾಜಿ ಮೇಯರ್ ಭೈರಪ್ಪ ಆಗ್ರಹ



ಬಿ.ಎಲ್.ಭೈರಪ್ಪ

ಮೈಸೂರು, ಡಿ.25(ಜಿಎ)–ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಪ್ರಸಾದ ಯೋಜನೆಯ ಕಾಮಗಾರಿಯನ್ನು ಕೈಬಿಡಿ. ಚಾಮುಂಡಿಬೆಟ್ಟ ಹೇಗಿದೆಯೋ ಹಾಗೇ ಬಿಟ್ಟು ಬಿಡಿ ಎಂದು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 100 ಕೋಟಿ ರೂ. ವೆಚ್ಚದ ಪ್ರಸಾದ್ ಯೋಜನೆ ಘೋಷಣೆ ಯಾದಾಗ ಅದರಲ್ಲಿ ರೋಪ್‌ವೇ ನಿರ್ಮಾಣಕ್ಕೆ ವಿರೋಧ ವ್ಯಕ್ತವಾಗಿ ಅದನ್ನು ಕೈಬಿಡಲಾಯಿತು. ಅದರಿಂದ ಅನುದಾನ ಕಡಿತವಾಗಿ 45 ಕೋಟಿ ರೂ. ಗೆ ಸೀಮಿತವಾಗಿದೆ. ಈ ಅನುದಾನ ಬಳಸಿಕೊಂಡು ಚಾಮುಂಡಿ ಬೆಟ್ಟದ ಪಾದದ ಬಳಿ, ಮಹಿಷಾಸುರಾ ಪ್ರತಿಮೆ ಬಳಿ ಹಾಗೂ ನಂದಿ ವಿಗ್ರಹದ ಬಳಿ ಕಾಮಗಾರಿ ಮಾಡುತ್ತೇವೆ ಎಂದು ತಿಳಿಸಿದ್ದಾರೆ. ಅಲ್ಲಿ ಕಾಮಗಾರಿ ಮಾಡಲು ಸ್ಥಳವೇ ಇಲ್ಲ. ಹೀಗಿರುವಾಗ ಕಾಮಗಾರಿ ಕೈಗೊಳ್ಳುವುದಾದರೂ ಎಲ್ಲಿ ಎಂದು ಪ್ರಶ್ನಿಸಿದರು.

ಇತ್ತೀಚೆಗೆ ಯೂನಿಟಿ ಮಾಲ್ ಅನ್ನು ಸೂಕ್ತವಲ್ಲದ ಸ್ಥಳದಲ್ಲಿ ಮಾಡಲು ಹೋಗಿ ಅದಕ್ಕೆ ನ್ಯಾಯಾಲಯ ತಡೆಯಾಜ್ಞೆ ನೀಡಿದೆ. ಇದೇ ರೀತಿ ಚಾಮುಂಡಿ ಬೆಟ್ಟದ ಪ್ರಸಾದ್ ಯೋಜನೆ ಆಗಲಿದೆ. ಈಗಾಗಲೇ ಅನೇಕ ಯೋಜನೆಗಳು ಇದೇ ರೀತಿ ಆಗಿದ್ದು ಅನುದಾನ ವಾಪಸ್ ಆಗಿದೆ. ಅದರಿಂದ ಚಾಮುಂಡಿಬೆಟ್ಟ ಹೇಗಿದೆ ಹಾಗೇ ಬಿಟ್ಟು ಬಿಡಿ ಎಂದು ಒತ್ತಾಯಿಸಿದರು.

ಬೆಟ್ಟದ ಪಾದದಿಂದ ಮೇಲಕ್ಕೆ ನೀರು ಕೊಂಡೊಯ್ಯಲು ಕೈಗೊಂಡಿರುವ ನೀರಿನ ಪೈಪ್‌ಲೈನ್ ಕಾಮಗಾರಿ ಅರ್ಧಕ್ಕೇ ಈಗಾಗಲೇ ನಿಂತಿದೆ, ದೇವಿಕೆರೆ ಅಭಿವೃದ್ಧಿಯೂ ಸ್ಥಗಿತವಾಗಿದೆ. ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರ ಆದ ನಂತರ ಚಾಮುಂಡಿ ಬೆಟ್ಟ ಸಾಕಷ್ಟು ಅಧ್ವಾನವಾಗಿದ್ದು, ಪ್ರಾಧಿಕಾರ ರಚನೆ ನಂತರ 25 ಮನೆಗಳು ನಿರ್ಮಾಣವಾಗಿದೆ. ಅಲ್ಲಿ ಮೊದಲೇ ಯುಜಿಡಿ ವ್ಯವಸ್ಥೆ ಇಲ್ಲ. ಅದರ ನೀರು ಮಣ್ಣಿನಲ್ಲಿ ಸೇರಿಕೊಂಡು ಕುಸಿಯುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಮಹಾರಾಜರು ಚಾಮುಂಡಿಬೆಟ್ಟ ಅಭಿವೃದ್ಧಿ ಪಡಿಸಿದ್ದನ್ನು ಹಾಳು ಮಾಡಿದ್ದೇವೆ. ಈಗ ಇರುವ ಹಾಗೇ ಉಳಿಸಿಕೊಳ್ಳೋಣ. ಬೃಹತ್ ಮೈಸೂರು ವ್ಯಾಪ್ತಿಗೆ ಚಾಮುಂಡಿ ಬೆಟ್ಟ ಸೇರಿಸಬಾರದೆಂದು ಹಲವರು ಆಗ್ರಹಿಸುತ್ತಿರುವುದು ಸರಿಯಲ್ಲ. ಅಲ್ಲಿನ ಗ್ರಾಪಂ, ಪ್ರಾಧಿಕಾರ ಮೊದಲಾದವುಗಳಿಂದ ಈಗಾಗಲೇ ಪರಿಸರ ಹಾಳಾಗಿದೆ. ಒಂದು ವೇಳೆ ಬೆಟ್ಟವನ್ನು ಬೃಹತ್ ಮೈಸೂರು ವ್ಯಾಪ್ತಿಗೆ ತಂದಲ್ಲಿ ಅದು ಪಾಲಿಕೆ ವ್ಯಾಪ್ತಿಗೆ ಬರುವ ಕಾರಣ ಬೆಟ್ಟದಲ್ಲಿ ಅನಗತ್ಯ ಕಟ್ಟಡ ನಿರ್ಮಾಣಗಳಿಗೆ ತಡೆಯೊಡ್ಡಬಹುದಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಚಾಮುಂಡಿಬೆಟ್ಟದ ಇಂದಿನ ಪರಿಸ್ಥಿತಿಗೆ ಈ ಹಿಂದಿನಿಂದ ಈಗಿನವರೆಗೆ ಆಯ್ಕೆಯಾದ ಜನಪ್ರತಿನಿಧಿಗಳೂ ಕಾರಣ. ಇವರು ಬೆಟ್ಟ ಸಂರಕ್ಷಣೆಗೆ ಗಮನ ಹರಿಸಲಿಲ್ಲ ಎಂದು ಕಿಡಿಕಾರಿದರು.

ಪ್ರಸಾದ ಯೋಜನೆ ಜಾರಿಯಿಂದ ಆಗಬಹುದಾದ ಅನಾಹುತ ಕುರಿತು ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳು ಧ್ವನಿಯೆತ್ತಬೇಕು. ತಾವೂ ಸಹಾ ಜನವರಿ ಬಳಿಕ ಈ ಬಗ್ಗೆ ಪರಿಸರ ಪ್ರಿಯರು, ಚಾಮುಂಡಿಬೆಟ್ಟ ಉಳಿಯಬೇಕೆನ್ನುವವರನ್ನು ಒಟ್ಟುಗೂಡಿಸಿ, ಹೋರಾಟ ನಡೆಸುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಲಯನ್ಸ್ ಕ್ಲಬ್ ಅಧ್ಯಕ್ಷ ಸಿದ್ದಲಿಂಗಪ್ಪ ಉಪಸ್ಥಿತರಿದ್ದರು.

ಐಎಸ್‌ಐಎಸ್ ಗುರಿಯಾಗಿಸಿ ನೈಜೀರಿಯಾದಲ್ಲಿ ಅಮೆರಿಕಾ ಸೇನೆ ದಾಳಿ; ನೆಲೆಗಳು ನಾಶ



ವೆಸ್ಟ್ ಪಾಮ್ ಬೀಚ್: ಕ್ರೈಸ್ತರಿಗೆ ರಕ್ಷಣೆ ನೀಡುವಲ್ಲಿ ಪಶ್ಚಿಮ ಆಫ್ರಿಕಾದ ರಾಷ್ಟ್ರ ವಿಫಲವಾಗಿದೆ ಎಂದು ಕಳೆದ ಒಂದು ವಾರದಿಂದ ಆರೋಪಿಸುತ್ತಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನೈಜೀರಿಯಾದಲ್ಲಿದೆ ಎನ್ನಲಾದ ಇಸ್ಲಾಮಿಕ್ ಸ್ಟೇಟ್ ಪಡೆಗಳ ನೆಲೆಗಳ ಮೇಲೆ ಕ್ರಿಸ್ಮಸ್ ದಿನದಂದು ಪ್ರಬಲ ಹಾಗೂ ಮಾರಕ ದಾಳಿಗೆ ಆದೇಶಿಸಿದ್ದಾರೆ. ಕ್ರಿಸ್ಮಸ್ ದಿನದಂದು ಸಾಮಾಜಿಕ ಮಾಧ್ಯಮದಲ್ಲಿ ಈ ಪೋಸ್ಟ್ ಅನ್ನು ಟ್ರಂಪ್ ಹಂಚಿ ಕೊಂಡಿದ್ದಾರೆ. ಆದರೆ ದಾಳಿಯ ಕುರಿತು ಯಾವುದೇ ಮಾಹಿತಿ ಅಥವಾ ದಾಳಿಯಿಂದ ಆಗಿರುವ ಹಾನಿಯ ಕುರಿತು ಮಾಹಿತಿಯನ್ನು ಅವರು ಹಂಚಿಕೊಂಡಿಲ್ಲ. ಆದರೆ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಆಫ್ರಿಕಾದಲ್ಲಿರುವ ಅಮೆರಿಕದ ಕಮಾಂಡ್ ಮಾಹಿತಿ ಹಂಚಿಕೊಂಡಿದ್ದು, ಸೊಬೊಟೊ ಸ್ಟೇಟ್‌ನಲ್ಲಿರುವ ನೈಜೀರಿಯಾದ ಅಧಿಕಾರಿಗಳ ಕೋರಿಕೆ ಮೇಲೆ ಐಎಸ್‌ಐಎಸ್ ಭಯೋತ್ಪಾದಕರಿಗೆ ಸೇರಿದ ಹಲವು ತಾಣಗಳ ಮೇಲೆ ದಾಳಿ ನಡೆಸಲಾಗಿದೆ. ಈ ತಾಣಗಳಲ್ಲಿ ಅಡಗಿದ್ದ ಹಲವರು ದಾಳಿಯಲ್ಲಿ ಮೃತಪಟ್ಟಿದ್ದಾರೆ ಎಂದಿದೆ.

ಶ್ರೀಗಳಿಗೆ ಸನ್ಮಾನ



ಶ್ರೀಮದ್ವಾಟಾಳು ಸೂರ್ಯ ಸಿಂಹಾಸನ ಮಠಾಧೀಶರಾದ ಡಾ. ಶ್ರೀ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ 77ನೇ ವರ್ಧಂತೋತ್ಸವ ಅಂಗವಾಗಿ ಶ್ರೀಗಳನ್ನು ತಿ.ನರಸೀಪುರದ ಸರ್ಕಲ್ ಇನ್ಸ್‌ಪೆಕ್ಟರ್ ಧನಂಜಯ್ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಅನಾಥ ಶವಗಳ ಮುಕ್ತಿದಾತ ಡಾ.ಮಾದೇಶ್, ರೈಟರ್ ಸಿದ್ದರಾಜು, ಆಲಗೂಡು ಮಂಜುನಾಥ್, ಉಪಸ್ಥಿತರಿದ್ದರು.

ಕರ್ನಾಟಕದಲ್ಲಿ ಜಾಗೃತ ನೆಲೆಯೊಂದಿಗೆ ಮಾನವೀಯತೆ ಜೀವಂತವಾಗಿದೆ

ಕೆಪಿಎಸ್ ಸಿ ಮಾಜಿ ಸದಸ್ಯ ಪ್ರೊ.ಹೆಚ್.ಗೋವಿಂದಯ್ಯ ಅಭಿಮತ



ಮೈಸೂರಿನ ಮಾನಸ ಗಂಗೋತ್ರಿಯ ಬಾಬೂ ಜಗಜೀವನರಾಮ್ ಕೇಂದ್ರದ ಸಭಾಂಗಣದಲ್ಲಿ ಶುಕ್ರವಾರ ಸಾಮಾಜಿಕ ನ್ಯಾಯಕ್ಕಾಗಿ ಸಾಮಾಜಿಕ ಚಳವಳಿಗಳು ಕುರಿತು ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಕೆಪಿಎಸ್‌ಸಿ ಮಾಜಿ ಸದಸ್ಯ ಪ್ರೊ.ಹೆಚ್.ಗೋವಿಂದಯ್ಯ ಉದ್ಘಾಟಿಸಿದರು.

ಮೈಸೂರು, ಡಿ.26(ಬಿಎಲ್ ಯು)– ಭಾರತದ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಜಾಗೃತ ನೆಲೆಯೊಂದಿಗೆ ಮಾನವೀಯತೆ ಇನ್ನು ಜೀವಂತವಾಗಿದೆ ಎಂದು ಕೆಪಿಎಸ್‌ಸಿ ಮಾಜಿ ಸದಸ್ಯ ಪ್ರೊ.ಹೆಚ್.ಗೋವಿಂದಯ್ಯ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಬಾಬೂ ಜಗಜೀವನರಾಮ್ ಕೇಂದ್ರದ ಸಭಾಂಗಣದಲ್ಲಿ ಇಂದು ಡಾ.ಬಾಬೂ ಜಗಜೀವನರಾಮ್ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಆಯೋಜಿಸಿದ್ದ ಸಾಮಾಜಿಕ ನ್ಯಾಯಕ್ಕಾಗಿ ಸಾಮಾಜಿಕ ಚಳವಳಿಗಳು ಕುರಿತ ವಿಚಾರ ಸಂಕೀರಣ ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಹಲವು ರಾಜ್ಯಗಳಲ್ಲಿ ಅಮಾನವೀಯ ಘಟನೆಗಳು ಜರುಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಾಮಾಜಿಕ ನ್ಯಾಯ ಎಲ್ಲಿ ಇರುವುದಿಲ್ಲವೋ ಅಲ್ಲಿ ನೆಮ್ಮದಿ ಮತ್ತು ಭರವಸೆಯಿಂದ ಬದುಕಲು ಸಾಧ್ಯವಿಲ್ಲ. ಆದರೆ ನಾವೆಲ್ಲಾ ನಿಟ್ಟುಸಿರು ಬಿಡುವ ಸಂಗತಿ ಎಂದರೆ ಕರ್ನಾಟಕದಲ್ಲಿ ಇಂತಹ ಪರಿಸ್ಥಿತಿ ಇಲ್ಲ ಎಂದು ಪ್ರೊ.ಗೋವಿಂದಯ್ಯ ಸಮಾಧಾನ ವ್ಯಕ್ತಪಡಿಸಿದರು.

ದೇಶದಲ್ಲಿ ಸಾಮಾಜಿಕ ನ್ಯಾಯ ಭೀಕರ ಬಿಕ್ಕಟ್ಟಿನಲ್ಲಿ ಇದೆ. ಇಂತಹ ಸಮಯದಲ್ಲಿ ಚಳವಳಿಗಳು ಜಾಗೃತವಾಗಬೇಕು. ಆಗ ಸ್ವಲ್ಪ ಮಟ್ಟಿಗಾದರೂ ಸುಧಾರಣೆ ತರಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬಸವಣ್ಣನವರ ಕಾಲದಲ್ಲಿ ಸಾಮಾಜಿಕ ಸುಧಾರಣಾ ಚಳವಳಿ ನಡೆಯಿತು. ಈಗ ನಾವು ನೋಡುತ್ತಿರುವಂತೆ ದಲಿತ ಚಳವಳಿ ನಡೆಯುತ್ತಿದೆ. ಇದು ಜಾತಿಯತೆಯನ್ನು ನಾಶ ಮಾಡುವ ವಿಶಿಷ್ಟ ಪ್ರಯೋಗವಾಗಿದೆ. ಮಹತ್ವ ಪಡೆದಿರುವ ಈ ಚಳವಳಿ ಮತ್ತಷ್ಟು ಗಟ್ಟಿಗೊಳ್ಳಬೇಕು ಎಂದು ಸಲಹೆ ನೀಡಿದರು.


ಕರ್ನಾಟಕದಲ್ಲಿ ಜನ್ಮ ತಳೆಯುವ ಚಳವಳಿಗಳು ಇಡೀ ದೇಶದ ಮೇಲೆ ಪರಿಣಾಮ ಬೀರುತ್ತದೆ. ಇದಕ್ಕೆ 12 ನೇ ಶತಮಾನದಲ್ಲಿ ನಡೆದ ಅನುಭವ ಮಂಟಪ ಅಥವಾ ವಚನ ಚಳವಳಿಯೇ ಸಾಕ್ಷಿ. ಅಲ್ಲದೆ ಇತ್ತೀಚಿಗೆ ಜನ್ಮ ಪಡೆದ ದಲಿತ ಚಳವಳಿಯೇ ನಿದರ್ಶನ ಎಂದು ಪ್ರೊ.ಗೋವಿಂದಯ್ಯ ಹೇಳಿದರು.

ಭಾರತದಲ್ಲಿ ಅಸ್ಪೃಶ್ಯತಾ ವಿರೋಧಿ ಚಳವಳಿಗಳು, ಪಶ್ಚಿಮ ಭಾರತದ ಸಾಮಾಜಿಕ ಚಳವಳಿಗಳು, ಪೂರ್ವ ಭಾರತದ ಸಾಮಾಜಿಕ ಚಳವಳಿಗಳು ಹಾಗೂ ದಕ್ಷಿಣ ಭಾರತದ ಸಾಮಾಜಿಕ ಚಳವಳಿಗಳು ಕುರಿತು ತಜ್ಞರು ವಿಷಯ ಮಂಡಿಸಿದರು.

ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಕೆ.ಸದಾಶಿವ, ರಾಜಕೀಯ ವಿಶ್ಲೇಷಕ ಕೋಡಿಹಳ್ಳಿ ಸಂತೋಷ್, ಪ್ರಾಧ್ಯಾಪಕ ಡಿ.ಸಿ.ಜಿ.ಲಕ್ಷ್ಮಿಪತಿ, ಸಂಶೋಧನಾ ಅಧಿಕಾರಿ ಡಾ.ಎಂ.ಶ್ರೀನಿವಾಸ ಮೂರ್ತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕನ್ನಡ ಚಳವಳಿ ಕೇಂದ್ರದಿಂದ ರಾಜ್ಯೋತ್ಸವ ಆಚರಣೆ

ಕನ್ನಡ ನಾಡು–ನುಡಿ ಉಳಿವಿಗೆ ಹೋರಾಡಿದವರನ್ನು ಸ್ಮರಿಸುವುದೇ ಕನ್ನಡ ರಾಜ್ಯೋತ್ಸವದ ಧ್ಯೇಯ



ಮೈಸೂರಿನ ನಟರಾಜ ಸಭಾ ಭವನದಲ್ಲಿ ಮೈಸೂರು ಕನ್ನಡ ಚಳುವಳಿ ಕೇಂದ್ರ ಸಮಿತಿ ವತಿಯಿಂದ ಏರ್ಪಡಿಸಿದ್ದ 70ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಅಭಿನಂದಿಸಲಾಯಿತು.

ಮೈಸೂರು, ಡಿ.26(ಜಿಎ)– ಪ್ರಪಂಚದಲ್ಲಿ ಯಾವ ಭಾಷೆಗೂ ಇಲ್ಲದ ಶಕ್ತಿ ಕನ್ನಡಕ್ಕಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ಪ್ರತಿಪಾದಿಸಿದ್ದಾರೆ.

ಮೈಸೂರಿನ ನಟರಾಜ ಸಭಾ ಭವನದಲ್ಲಿ ಕನ್ನಡ ಚಳುವಳಿ ಕೇಂದ್ರ ಸಮಿತಿ ಮೈಸೂರು ಏರ್ಪಡಿಸಿದ್ದ 70ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಪಂಚದಲ್ಲಿ ಯಾವ ಭಾಷೆಗೂ ಇಲ್ಲದ ಶಕ್ತಿ ಕನ್ನಡಕ್ಕಿದೆ. 2,500ಕ್ಕೂ ಹೆಚ್ಚು ವರ್ಷಗಳ ಇತಿಹಾಸವಿರುವ ಪ್ರಾಚೀನ ಭಾಷೆ ಕನ್ನಡ. ಪಂಪ, ಜನ್ನ, ರನ್ನರಿಂದ ಹಿಡಿದು, ಬೇಂದ್ರೆ, ಕುವೆಂಪು ಅವರವರೆಗೂ ಸಾವಿರಾರು ಸಾಹಿತಿಗಳು, ಹೋರಾಟಗಾರರು ಕನ್ನಡಕ್ಕಾಗಿ ದುಡಿದು ಸೇವೆ ಸಲ್ಲಿಸಿದ್ದಾರೆ. ಕನ್ನಡ ನಾಡಿಗೆ ತನ್ನದೇ ಆದ ಹಿರಿಮೆಯಿದೆ. ಕನ್ನಡ ನಾಡಿನ ಉಳಿವಿಗೆ ಹೋರಾಡಿದವರನ್ನು ನೆನೆಯುವುದೇ ಕನ್ನಡ ರಾಜ್ಯೋತ್ಸವ. ಎಂದರು.

ಕನ್ನಡದ ಹಲವಾರು ಮಹಾನೀಯರ ಆದರ್ಶಗಳನ್ನು ಕನ್ನಡಿಗರು ಅಳವಡಿಸಿಕೊಳ್ಳಬೇಕು. ಆ ಮೂಲಕ ನಾಡು, ನುಡಿ, ಜಲ ಕನ್ನಡಿಗರ ರಕ್ಷಣೆಯನ್ನು ಮಾಡುವಂತಹ ಗುರಿಯನ್ನು ನಾವೆಲ್ಲರೂ ಸ್ವೀಕಾರ ಮಾಡಬೇಕಿದೆ. ಕನ್ನಡಿಗರೆಲ್ಲರೂ ಒಟ್ಟಾಗಿ ನಾಡಿಗಾಗಿ ದುಡಿದು, ಭಾಷೆಯನ್ನು ಬೆಳೆಸುವ ಕೆಲಸ ಮಾಡೋಣ ಎಂದು ತಿಳಿಸಿದರು.

ಕನ್ನಡಿಗರು ಯಾವಾಗಲೂ ವಿಶಾಲ ಹೃದಯವಂತರು. ಹೊರಗಿನವರು ಯಾರೆ ಬಂದರೂ ಮೊದಲು ಪ್ರೀತಿ, ವಿಶ್ವಾಸ ನೀಡುವ ಮನೋಭಾವ ನಮ್ಮಲ್ಲಿದೆ. ಅವರಿಗೆ ಬೇಕಾದ ಎಲ್ಲಾ ಸೌಲಭ್ಯ ಒದಗಿಸುತ್ತೇವೆ. ಆದರೆ ಕನ್ನಡಿಗರು ಹೊರ ರಾಜ್ಯಗಳಿಗೆ ಹೋದ ಸಂದರ್ಭದಲ್ಲಿ ನಮ್ಮನ್ನು ತುಚ್ಚವಾಗಿ ಕಾಣುತ್ತಾರೆ ಎಂದು ವಿಷಾಧ ವ್ಯಕ್ತಪಡಿಸಿದರು.

ನಟರಾಜ ಶಿಕ್ಷಣ ಸಂಸ್ಥೆಗಳು ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ ಮಾತನಾಡಿ, ಹೋರಾಟಗಾರರು ಇಲ್ಲವಾಗಿದ್ದರೆ, ಇಂದು ಕರ್ನಾಟಕದಲ್ಲಿ ನಾಡು, ನುಡಿಗೆ, ಕನ್ನಡಕ್ಕೆ ಕುತ್ತು ಬರುತ್ತಿತ್ತು. ಹೋರಾಟಗಳು ನಡೆದರೂ ಸಹ ಇವತ್ತು ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಹೆಚ್ಚು ಮನ್ನಣೆ ದೊರಕದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ.ವೈ.ಡಿ ರಾಜಣ್ಣ, ಸಮಾಜಸೇವಕರಾದ ಯಶಸ್ವಿ.ಎಸ್.ಸೋಮಶೇಖರ್, ಜೈಶಂಕರ್, ಶಿಕ್ಷಣ ಕ್ಷೇತ್ರ ಡಾ.ಎಂ.ಪುಟ್ಟಸ್ವಾಮಿ, ಯಶ್ವಂತ್ ವಕೀಲರು ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ನಟರಾಜ ಶಿಕ್ಷಣ ಸಂಸ್ಥೆಗಳು ಹೊಸಮಠದ ಚಿದಾನಂದ ಸ್ವಾಮೀಜಿ, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಗಾಯಕ ಗೋಪಿ, ಸಮಿತಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ಉಪಸ್ಥಿತರಿದ್ದರು.

ಲಾರಿ ಮಗುಚಿ ಸ್ಕೂಟರ್‌ಗೆ ಹಾನಿ



ಲಾರಿ ಮಗುಚಿ ಗೊಬ್ಬರದ ಚೀಲಗಳು ಒಡೆದು, ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ.

ಮಡಿಕೇರಿ, ಡಿ.26–ಚಾಲಕನ ನಿಯಂತ್ರಣ ಕಳೆದುಕೊಂಡು ಲಾರಿಯೊಂದು ಮಗುಚಿ ಬಿದ್ದು, ರಸ್ತೆಬದಿಯಲ್ಲಿದ್ದ ಸ್ಕೂಟರ್ ಹಾನಿಗೊಳಗಾಗಿದೆ.

ಹುಣಸೂರಿನಿಂದ ಗೋಣಿಕೊಪ್ಪ ಕಡೆಗೆ ಯೂರಿಯಾ ಗೊಬ್ಬರ ಸಾಗಿಸುತ್ತಿದ್ದ ಆರ್‌ಜಿ ಗ್ರಾಮದ ರಶೀದ್ ಎಂಬುವವರಿಗೆ ಸೇರಿದ ಈಚರ್ ಲಾರಿ ಚೆನ್ನಂಗೊಲ್ಲಿಯ ಇಂಜಿಪುಳಿ ಟೀ ಅಂಗಡಿ ಎದುರು ಮಗುಚಿ ಬಿದ್ದಿದೆ.

ಈ ಅಪಘಾತದಲ್ಲಿ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಸ್ಕೂಟರ್ ಹಾನಿಗೊಳಗಾಗಿದ್ದು, ಲಾರಿಯಲ್ಲಿದ್ದ ಗೊಬ್ಬರದ ಚೀಲಗಳು ಒಡೆದು, ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿದೆ. ಲಾರಿ ಚಾಲಕ ಹಾಗೂ ಕ್ಲೀನರ್ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನಾ ಸ್ಥಳಕ್ಕೆ ಗೋಣಿಕೊಪ್ಪ ಠಾಣಾಧಿಕಾರಿ ಬಿ.ಕೆ. ಪ್ರದೀಪ್ ಕುಮಾರ್ ಮತ್ತು ಎಎಸ್‌ಐ ಧನಪತಿ, ವೆಂಕಟೇಶ್, ಶಶಿ ಕುಮಾರ್, ತನು ಕುಮಾರ್, ಸತೀಶ್, ಲೋಕೇಶ್ ಇತರರು ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ: ತಾಲೂಕಿನ ಹೊದ್ದೂರು, ಕಬಡಗೇರಿ, ಕಕ್ಕಬ್ಬೆ, ಕೊಳಕೇರಿ, ಕುಂಜಿಲ, ಎಮ್ಮೆಮಾಡು, ನೆಲಜಿ, ಬಲ್ಲಮಾವಟಿ, ಪೆರೂರು, ನಾಪೋಕ್ಲು ಟೌನ್, ಕೊಟ್ಟಮುಡಿ, ಪಾಲೂರು, ಚೆರಿಯಪರಂಬು, ಹಳೆ ತಾಲೂಕು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಡಿ.27ರ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯ ವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಮೂರ್ನಾಡಿನಲ್ಲಿ ಲೆವಿಸ್ಟಾ ಕೊಡವ ಹಾಕಿ ಪಂದ್ಯಾವಳಿಗೆ ಚಾಲನೆ



ಮೂರ್ನಾಡಿನಲ್ಲಿ ಆರಂಭಗೊಂಡ ಹಾಕಿ ಪಂದ್ಯಾವಳಿಯಲ್ಲಿ ವೀಕ್ಷಕ ವಿವರಣೆಗಾರರು ಹಾಗೂ ಸಿಬ್ಬಂದಿಯನ್ನು ಗೌರವಿಸಲಾಯಿತು.

ಮಡಿಕೇರಿ, ಡಿ.26– ಕೊಡವ ಹಾಕಿ ಅಕಾಡೆಮಿ ಆಯೋಜಿಸಿರುವ ಲೆವಿಸ್ಟಾ ಕೊಡವ ಹಾಕಿ ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿ ಮೂರ್ನಾಡಿನಲ್ಲಿ ಆರಂಭಗೊಂಡಿತು. 25 ವರ್ಷಗಳ ಕಾಲ ನಡೆದ ಪಂದ್ಯಾವಳಿಯಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ 13 ತಂಡಗಳ ನಡುವೆ ಟ್ರೋಫಿಗಾಗಿ 5 ದಿನಗಳ ಕಾಲ ಸೆಣಸಾಟ ನಡೆಯಲಿದೆ.

ಹಾಕಿ ಕೂರ್ಗ್, ಎಂ.ಬಾಡಗ ಸ್ಪೋರ್ಟ್ಸ್ ರಿಕ್ರಿಯೇಷನ್ ಸಂಸ್ಥೆ ಮತ್ತು ಮೂರ್ನಾಡು ವಿದ್ಯಾಸಂಸ್ಥೆಯ ಸಹಕಾರದೊಂದಿಗೆ ಮೂರ್ನಾಡಿನ ಬಾಚೆಟ್ಟೀರ ಲಾಲು ಮುದ್ದಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯಾವಳಿಯಲ್ಲಿ ಮಾತನಾಡಿದ ಏಕಲವ್ಯ ಪ್ರಶಸ್ತಿ ವಿಜೇತೆ ಒಲಂಪಿಯನ್ ಬೊಳ್ಳಂಡ ಪ್ರಮೀಳ ಅಯ್ಯಪ್ಪ, ಪೋಷಕರು ತಮ್ಮ ಕನಸನ್ನು ಮಕ್ಕಳ ಮೇಲೆ ಹೇರದೆ ಮಕ್ಕಳ ಕನಸನ್ನು ನನಸು ಮಾಡಲು ಮುಂದಾಗಿ ಅವರ ಕ್ರೀಡಾಸಕ್ತಿಗೆ ಉತ್ತೇಜನ ನೀಡಬೇಕೆಂದು ಸಲಹೆ ನೀಡಿದರು. ಕೊಡವ ಕೌಟುಂಬಿಕ ಹಾಕಿ ಉತ್ಸವದ ಜನಕ ಪಾಂಡಂಡ ಕುಟ್ಟಪ್ಪ ಅವರ ಕ್ರೀಡಾ ಸಕ್ತಿಯ ಬಗ್ಗೆ ಪ್ರಶಂಸಿಸಿದರು.

ಮಾಜಿ ಅಂತಾರಾಷ್ಟ್ರೀಯ ಬಾಸ್ಕೆಟ್ ಬಾಲ್ ಕ್ರೀಡಾಪಟು ಮಂಡೇಪಂಡ ಪುಷ್ಪಾ ಕುಟ್ಟಣ್ಣ ಮಾತನಾಡಿ, ಸಮಾಜದ ಅಡಿಪಾಯವಾಗಿರುವ ಕುಟುಂಬಗಳ ಮೂಲಕವೇ ಕೊಡಗಿನಲ್ಲಿ ಹಾಕಿ ಕ್ರೀಡೆಯನ್ನು ಬೆಳೆಸಬೇಕೆನ್ನುವ ಪಾಂಡಂಡ ಕುಟ್ಟಪ್ಪ ಅವರ ಚಿಂತನೆ ಶ್ರೇಷ್ಠ ಪರಿಕಲ್ಪನೆಯಾಗಿದೆ. ಈ ಪ್ರಯತ್ನ ಇಂದು ಎಲ್ಲರಿಗೂ ಸ್ಫೂರ್ತಿಯಾಗಿದ್ದು, ಜಿಲ್ಲೆಯ ಹಲವೆಡೆ ಕ್ರೀಡಾ ಕೂಟಗಳು ನಡೆಯುತ್ತಿವೆ ಎಂದರು.

ಮಾಜಿ ಅಂತಾರಾಷ್ಟ್ರೀಯ ಹಾಕಿಪಟು ಕಾಳಿಮಾಡ ಎಂ.ಸೋಮಯ್ಯ, ಎಸ್‌ಎಲ್‌ಎನ್ ಗ್ರೂಪ್‌ನ ಸಿಇಒ ಸಾಹಿಬ್ ಸಿಂಗ್ ಮಾತನಾಡಿದರು.

ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ ಮಾತನಾಡಿ, ಅಕಾಡೆಮಿ ಹಾಕಿ ಪ್ರತಿಭೆಗಳಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡಲಿದೆ. ಪಾಂಡಂಡ ಕುಟ್ಟಪ್ಪ ಅವರ ಹಲವು ವರ್ಷಗಳ ಕನಸನ್ನು ನನಸು ಮಾಡಿದ ತೃಪ್ತಿ ನಮಗಿದೆ ಎಂದರು. ಸಮಾರಂಭದಲ್ಲಿ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯ ಆರಂಭಿಕ 1997ರಲ್ಲಿ ತಾಂತ್ರಿಕ ಸಮಿತಿಯಲ್ಲಿ ಕಾರ್ಯನಿರ್ವಹಿಸಿದವರನ್ನು ಹಾಗೂ ವೀಕ್ಷಕ ವಿವರಣೆಗಾರರನ್ನು ಗೌರವಿಸಲಾಯಿತು.

ಎಸ್‌ಎಲ್‌ಎನ್ ಗ್ರೂಪ್‌ನ ಪ್ರಮುಖರಾದ ವೆಂಕಟಾಚಲಂ ಸಾತಪ್ಪನ್, ವೇಲಾಯುಧಂ ಮಣಿ, ಕೊಡವ ಹಾಕಿ ಅಕಾಡೆಮಿಯ ಕಾರ್ಯಾಧ್ಯಕ್ಷ ಚೆಪ್ಪುಡಿರ ಎಸ್.ಪೂಣಚ್ಚ, ಉಪಾಧ್ಯಕ್ಷ ಕುಂಡ್ಯೋಳಂಡ ರಮೇಶ್ ಮುದ್ದಯ್ಯ, ಕೂತಂಡ ಸುರೇಶ್ ಅಪ್ಪಯ್ಯ, ಬಾಚಿನಾಡಂಡ ಪ್ರದೀಪ್ ಪೂಣಚ್ಚ, ಗೌರವ ಕಾರ್ಯದರ್ಶಿ ಕುಲ್ಲೇಟಿರ ಅರುಣ್ ಬೇಬ, ಜಂಟಿ ಕಾರ್ಯದರ್ಶಿ ನಾಯಕಂಡ ದೀಪಕ್ ಚಂಗಪ್ಪ, ನಿರ್ದೇಶಕರಾದ ಮುದ್ದಂಡ ರಶಿನ್ ಸುಬ್ಬಯ್ಯ, ಬೊಳ್ಳೆಪಂಡ ಜೆ.ಕಾರ್ಯಪ್ಪ, ಕಾಳಿಯಂಡ ಸಂಪನ್ ಅಯ್ಯಪ್ಪ, ಮುಕ್ಕಾಟಿರ ಎಸ್.ಸೋಮಯ್ಯ, ಚೆಕ್ಕೇರ ಆದರ್ಶ, ಮಂಡೇಪಂಡ ಮುಖೇಶ್ ಮೊಣ್ಣಯ್ಯ, ಸುಳ್ಳಿಮಾಡ ದೀಪಕ್ ಮೊಣ್ಣಪ್ಪ, ಹಾಕಿ ಕೂರ್ಗ್, ಎಂ.ಬಾಡಗ ಸ್ಪೋರ್ಟ್ಸ್ ರಿಕ್ರಿಯೇಷನ್ ಸಂಸ್ಥೆ ಮತ್ತು ಮೂರ್ನಾಡು ವಿದ್ಯಾಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮರಗೋಡು ರಸ್ತೆ ದುರಸ್ತಿಗೆ ಆಗ್ರಹಿಸಿ ರಸ್ತೆತಡೆ



ಮಡಿಕೇರಿ: ತಾಲೂಕಿನ ಮರಗೋಡು ಗ್ರಾಮವನ್ನು ಸಂಪರ್ಕಿಸುವ ಎಲ್ಲಾ ರಸ್ತೆಗಳು ಸಂಪೂರ್ಣ ಹದಗೆಟ್ಟಿದ್ದು ರಸ್ತೆ ಸಂಚಾರ ದುಸ್ತರವಾಗಿ ಪರಿಣಮಿಸಿದೆ. ತಕ್ಷಣವೇ ರಸ್ತೆ ದುರಸ್ತಿ ನಡೆಸುವಂತೆ ಆಗ್ರಹಿಸಿ ಮರಗೋಡು ಆಟೋ ಚಾಲಕರ ಸಂಘದ ಪದಾಧಿಕಾರಿಗಳು ಕಟ್ಟೆಕಾಡು, ಹಲಿಕಾಳ, ಮರಗೋಡು, ಕಟ್ಟೆಮಾಡು, ಅರೆಕಾಡು ವ್ಯಾಪ್ತಿಯ ಗ್ರಾಮಸ್ಥರು, ಸಂಘ ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ಪಕ್ಷಾತೀತವಾಗಿ ಮರಗೋಡು ಜಂಕ್ಷನ್‌ನಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

15 ವರ್ಷಗಳಿಂದ ಮರಗೋಡು ಗ್ರಾಮ ಸಂಪರ್ಕ ರಸ್ತೆಗಳನ್ನು ದುರಸ್ತಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳನ್ನು ಆಗ್ರಹಿಸುತ್ತಾ ಬಂದಿದ್ದರೂ ರಸ್ತೆ ದುರಸ್ತಿ ಕಾರ್ಯ ಮಾತ್ರ ನಡೆದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸ್ಥಳಕ್ಕೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಆಗಮಿಸಬೇಕು. ರಸ್ತೆ ಕಾಮಗಾರಿ ಬಗ್ಗೆ ಸೂಕ್ತ ಮಾಹಿತಿ ನೀಡಬೇಕು ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಡಿವೈಎಸ್ಪಿ ಸೂರಜ್, ಗ್ರಾಮಾಂತರ ವೃತ್ತ ನಿರೀಕ್ಷಕ ಚಂದ್ರಶೇಖರ್, ಎಸ್.ಐ ತಮ್ಮಯ್ಯ ರಸ್ತೆ ತಡೆ ನಡೆಸದೆ ಪ್ರತಿಭಟನೆ ನಡೆಸುವಂತೆ ಮನವಿ ಮಾಡಿದರು. ಇದಕ್ಕೆ ಸಮ್ಮತಿಸಿದ ಪ್ರತಿಭಟನಾಕಾರರು ಲೋಕೋಪಯೋಗಿ ಅಧಿಕಾರಿಗಳು 11 ಗಂಟೆಯ ಒಳಗೆ ಸ್ಥಳಕ್ಕೆ ಆಗಮಿಸುವಂತೆ ಷರತ್ತು ವಿಧಿಸಿ ರಸ್ತೆ ತಡೆ ಹಿಂಪಡೆದು ಪ್ರತಿಭಟನೆ ಮುಂದುವರಿಸಿದರು. ಲೋಕೋಪಯೋಗಿ ಇಲಾಖೆ ಜೂನಿಯರ್ ಎಂಜಿನಿಯರ್ ಗಿರೀಶ್ ಸ್ಥಳಕ್ಕೆ ಭೇಟಿ ನೀಡಿದಾಗ ಪ್ರತಿಭಟನಾಕಾರರು ತೀವ್ರ ತರಾಟೆಗೆ ತೆಗೆದುಕೊಂಡರು. ರಸ್ತೆ ದುರಸ್ತಿ ಕಾಮಗಾರಿಗೆ ಅನುದಾನ ಬಿಡುಗಡೆಯಾಗಿದ್ದು, ಮುಂದಿನ 15 ದಿನಗಳಲ್ಲಿ ಸಂಪೂರ್ಣ ಹದಗೆಟ್ಟಿರುವ 900 ಮೀ ರಸ್ತೆ ದುರಸ್ತಿ ಮಾಡುವುದಾಗಿ ಇಂಜಿನಿಯರ್ ಭರವಸೆ ನೀಡಿದರು. ಏಪ್ರಿಲ್ ಅಂತ್ಯದೊಳಗೆ ಇನ್ನುಳಿದ 5 ಕಿಮೀ ರಸ್ತೆ ಕಾಮಗಾರಿ ಮಾಡುವುದಾಗಿ ಮಾಹಿತಿ ನೀಡಿದರು. ಇಂಜಿನಿಯರ್ ಅಧಿಕಾರಿ ಗಿರೀಶ್ ಭರವಸೆ ನೀಡಿದ ಹಿನ್ನೆಲೆ ಗ್ರಾಮಸ್ಥರು ಪ್ರತಿಭಟನೆ ಹಿಂದಕ್ಕೆ ಪಡೆದರು.

ಪ್ರತಿಭಟನೆಯಲ್ಲಿ ಬಡುವಂಡ ಪ್ರದೀಪ್, ಚಿತ್ರಾ, ಸದಸ್ಯರಾದ ಬಳಪದ ಮೋಹನ್, ಪರಿಚನ ಶರತ್, ಇಟ್ಟಣಿಕೆ ನಾಗೇಶ್, ಕಾಂಗ್ರೆಸ್ ಅಶ್ವಿನ್, ಪೂಳಕಂಡ ಸಂದೀಪ್, ಹುಲಿತಾಳ, ಕಟ್ಟೆಮಾಡು, ಹೊಸ್ಕೇರಿ, ಪ್ರತಿಭಟನೆ ಸಂದರ್ಭ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ವ್ಯಾಪಾರಸ್ಥರು ಬೆಂಬಲ ಸೂಚಿಸಿದರು.

ಮನ್ರೇಗಾ ಬದಲಾವಣೆ ಮೂಲಕ ಬಿಜೆಪಿ ದ್ವೇಷ ರಾಜಕಾರಣ



ಕಾರ್ಯಕ್ರಮದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷರಾದ 'ಮೈಸೂರು ಮಿತ್ರ' ಚಿನಕುರಳಿ ವರದಿಗಾರ ಸಿ.ಎ.ಲೋಕೇಶ್ ಸೇರಿದಂತೆ ಹಲವರನ್ನು ಅಭಿನಂದಿಸಲಾಯಿತು.

ಮಂಡ್ಯ, ಡಿ.26– ಮಹಾತ್ಮ ಗಾಂಧಿ ಕಾಲವಾಗಿ 7 ದಶಕಗಳಾದರೂ ಅವರ ಮೇಲೆ ದ್ವೇಷ ಸಾಧಿಸುವುದು ಮಾತ್ರ ನಿಂತಿಲ್ಲ. ಮನರೇಗಾ ಹೆಸರನ್ನು ಬದಲಾಯಿಸುವ ಮೂಲಕ ಬಿಜೆಪಿ ದ್ವೇಷದ ರಾಜಕಾರಣ ಮಾಡುತ್ತಿದೆ ಎಂದು ವಿಧಾನಪರಿಷತ್ ಸದಸ್ಯ ಕೆ.ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಗಾಂಧಿ ಭವನದಲ್ಲಿ ಶುಕ್ರವಾರ ಪತ್ರಕರ್ತರ ಪರಂಪರಾವಲೋಕನ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಕುವೆಂಪು ಜನ್ಮ ದಿನಾಚರಣೆ, ಪತ್ರಿಕಾ ಮಾಧ್ಯಮ ಅಂದು–ಇಂದು–ಮುಂದು ವಿಚಾರಮಂಥನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗಾಂಧಿ ಶಾಂತಿ ಪ್ರಿಯರು. ಅಸ್ಪೃಶ್ಯತೆ ವಿರುದ್ಧ ಹೋರಾಡಿದವರು. ಸಮಾನತೆಯನ್ನು ಪ್ರಬಲವಾಗಿ ಪ್ರತಿಪಾದಿಸಿದವರು. ಮನರೇಗಾ ಹೆಸರನ್ನು ಬದಲಾಯಿಸುವ ಅವಶ್ಯಕತೆ ಏನಿತ್ತು. ಗಾಂಧಿ ಹೆಸರನ್ನು ಅಳಿಸಿ ಹಾಕುವ ಷಡ್ಯಂತ್ರ ಇದರ ಹಿಂದೆ ಇದ್ದಂತಿದೆ ಎಂದ ಅವರು ಬಿಜೆಪಿಯವರು ಶಾಂತಿ ಪ್ರಿಯರೆಂಬ ಮುಖವಾಡ ಧರಿಸಿ ಚರ್ಚ್‌ಗಳ ಮೇಲೆ ದಾಳಿ ಮಾಡುತ್ತಾರೆ. ಧರ್ಮ ಮುಂದಿಟ್ಟುಕೊಂಡು ರಾಷ್ಟ್ರವನ್ನು ಮುನ್ನಡೆಸುವ ಪ್ರಯತ್ನ ನಡೆಸುತ್ತಿದ್ದಾರೆ. ಇದು ಅಸಹ್ಯಕರ ಬೆಳವಣಿಗೆ ಎಂದು ದೂಷಿಸಿದರು.

ದೇಶವನ್ನು ಸಮಾನತೆ, ಭ್ರಾತೃತ್ವದಿಂದ ಕಟ್ಟುವುದಕ್ಕೆ ಪತ್ರಕರ್ತರ ಕೊಡುಗೆ ಅಪಾರವಾಗಿದೆ. ಸರ್ಕಾರ ಹಾದಿ ತಪ್ಪಿದಾಗ ಸರಿದಾರಿಗೆ ತಂದ ಕೀರ್ತಿಯೂ ಅವರಿಗಿದೆ. ಇಂದು ಜಾತಿ ಆಧಾರಿತ ಪತ್ರಿಕೋದ್ಯಮ ನಡೆಯುತ್ತಿದೆ. ಪ್ರಭುತ್ವವನ್ನು ಮಣಿಸಬೇಕಾದ ಪತ್ರಕರ್ತರು ಹೊಂದಾಣಿಕೆ ಮಾಡಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಧಿಕಾರಸ್ಥರ ವಿರುದ್ಧ ಪ್ರಬಲ ದನಿ ಎತ್ತುವ ಸಾಮರ್ಥ್ಯವನ್ನೇ ಪತ್ರಕರ್ತರು ಕಳೆದುಕೊಂಡಿದ್ದಾರೆ ಎಂದು ವಿಷಾದಿಸಿದರು.

ಪತ್ರಿಕಾ ಮಾಧ್ಯಮ ಅಂದು–ಇಂದು–ಮುಂದು ಕುರಿತು ಉಪನ್ಯಾಸ ನೀಡಿದ ಉಪನ್ಯಾಸಕ ಕೆ.ಪಿ.ಮೃತ್ಯುಂಜಯ ಅವರು, ಪತ್ರಕರ್ತರು ಜಾತ್ಯತೀತನಾಗಿರಬೇಕು. ಸತ್ಯದ ಪಕ್ಷಪಾತಿಯಾಗಿರಬೇಕು. ಪತ್ರಕರ್ತರಾಗಿ ಗಾಂಧಿ, ಅಂಬೇಡ್ಕರ್ ನಮಗೆಲ್ಲಾ ದೊಡ್ಡ ಮಾದರಿಯಾಗಿದ್ದಾರೆ. ಅವರು ಬಡವರು, ಶೋಷಿತರು, ನೊಂದವರ ಧ್ವನಿಯಾಗಿದ್ದರು ಎಂದರು.

ಪ್ರಸ್ತುತ ಕೈಯಲ್ಲಿ ಪತ್ರಿಕೆ ಹಿಡಿದು ಓದುವ ಕಾಲ ದೂರವಾಗಿದೆ. ಮೊಬೈಲ್‌ನಲ್ಲೇ ಪತ್ರಿಕೆಗಳನ್ನು ಓದುವ ಹೊಸ ಸಂಸ್ಕೃತಿ ಸೃಷ್ಟಿಯಾಗಿದೆ. ಪತ್ರಿಕೋದ್ಯಮ ಬಂಡವಾಳಶಾಹಿಗಳ ಹಿಡಿತದಲ್ಲಿದೆ. ಹೀಗಾಗಿ ಪತ್ರಕರ್ತರು ಪಕ್ಷಪಾತಿಗಳಾಗಿ ಕಾರ್ಯನಿರ್ವಹಿಸುವಂತಹ ಸನ್ನಿವೇಶ ಎದುರಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಾಧಕ ಪತ್ರಕರ್ತರಿಗೆ ಪುರಸ್ಕಾರ ನೀಡಿ ಗೌರವಿಸಲಾಯಿತು. ಅಂಕಣಕಾರ ಬಿ.ಚಂದ್ರೇಗೌಡ, ವಿಚಾರವಾದಿ ಕೆ.ಮಾಯಿಗೌಡ, ಕರ್ನಾಟಕ ಮಾಧ್ಯಮ ಅಕಾಡೆಮಿ ಮಾಜಿ ಅಧ್ಯಕ್ಷ ಎಂ.ಸಿದ್ದ ರಾಜು, ಪತ್ರಕರ್ತ ಎಂ.ಎನ್.ಯೋಗೇಶ್, ಹಿರಿಯ ಪತ್ರಕರ್ತ ಪಿ.ಜೆ.ಚೈತನ್ಯಕುಮಾರ್, ಕೆ.ಆರ್.ನೀಲಕಂಠ, ಸಂತಾನ್ ರಾಮನ್, ಪತ್ರಕರ್ತರ ಪರಂಪರಾವಲೋಕನ ಸಂಸ್ಥೆ ಅಧ್ಯಕ್ಷ ಡಿ.ಶಶಿಕುಮಾರ್, ವಾಗೀಶ್‌ಚಂದ್ರ ಗುರು, ದೇವರಾಜ್‌ಕೊಪ್ಪ ಇತರರು ಹಾಜರಿದ್ದರು.

ಕೆ.ಎಂ.ಚಿನ್ನಸ್ವಾಮಿ ನಿಧನ



ಮಂಡ್ಯ: ಮೈಸೂರಿನ ವಿದ್ಯಾರಣ್ಯಪುರಂ ಕಿರಣ್ ಸ್ಟುಡಿಯೋ ಮಾಲೀಕ, ಛಾಯಾಗ್ರಾಹಕ ಕೆ.ಎಂ.ಚಿನ್ನಸ್ವಾಮಿ(64) ಶುಕ್ರವಾರ ನಿಧನರಾದರು.

ಮೃತರು ಪತ್ನಿ ಕಲಾವತಿ, ಮಕ್ಕಳಾದ ಕೀರ್ತಿ, ಕಿರಣ್, ಅರುಣ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ 10 ಗಂಟೆಗೆ ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಗರಸಭೆಗೆ ಗ್ರಾಪಂಗಳ ಸೇರ್ಪಡೆ ಖಂಡಿಸಿ ನಡೆಯುತ್ತಿರುವ

ಪ್ರತಿಭಟನೆಗೆ ಅಶ್ವತ್ಥ್ ನಾರಾಯಣ, ಡಿ.ಸಿ.ತಮ್ಮಣ್ಣ ಬೆಂಬಲ

ಮದ್ದೂರು, ಡಿ.26– ಗೆಜ್ಜಲಗೆರೆ, ಗೊರವನಹಳ್ಳಿ, ಸೋಮನಹಳ್ಳಿ ಹಾಗೂ ಚಾಮನಹಳ್ಳಿ ಗ್ರಾಪಂಗಳನ್ನು ನಗರಸಭೆಗೆ ಸೇರ್ಪಡೆಗೊಳಿಸಿರುವುದನ್ನು ವಿರೋಧಿಸಿ ತಾಲೂಕಿನ ಗೆಜ್ಜಲಗೆರೆ ಗ್ರಾಮಸ್ಥರು ಕಳೆದ 5 ದಿನಗಳಿಂದ ನಡೆಸುತ್ತಿರುವ ಧರಣಿ ಸತ್ಯಾಗ್ರಹ ಸ್ಥಳಕ್ಕೆ ಶುಕ್ರವಾರ ಮಾಜಿ ಡಿಸಿಎಂ ಅಶ್ವತ್ಥ್ ನಾರಾಯಣ್ ಹಾಗೂ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಭೇಟಿ ನೀಡಿ ಪ್ರತಿಭಟನೆಗೆ ಬೆಂಬಲ ಸೂಚಿಸಿದರು.



ಪ್ರತಿಭಟನೆಗೆ ಮಾಜಿ ಡಿಸಿಎಂ ಅಶ್ವತ್ಥ್ ನಾರಾಯಣ, ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಬೆಂಬಲ ಸೂಚಿಸಿದರು.

> ಗ್ರಾಪಂ ವ್ಯಾಪ್ತಿಯಲ್ಲಿ ಗ್ರಾಮಗಳಿದ್ದರೆ ತಾಪಂ, ಜಿಪಂ ಅನುದಾನ ಬಿಡುಗಡೆಯಾಗಿ ಗ್ರಾಮಾಭಿವೃದ್ಧಿಗೂ ಹೆಚ್ಚಿನ ಒತ್ತು ನೀಡಬಹುದಾಗಿದ್ದು, ಜೊತೆಗೆ ಹತ್ತರಿಂದ ಹದಿನೈದು ಮಂದಿಗೆ ಅಧಿಕಾರ ಸಿಗಲಿದೆ. ಆದರೆ ನಗರಸಭೆಯಾದರೆ ಕೇವಲ ಒಬ್ಬ ವ್ಯಕ್ತಿಗೆ ಅಧಿಕಾರ ಸಿಗಲಿದ್ದು, ಗ್ರಾಮೀಣ ಜನರಿಗೆ ಸಿಗಬೇಕಾದ ಅಧಿಕಾರವನ್ನು ಕಸಿದುಕೊಂಡಂತಾಗುತ್ತದೆ.
> – ಡಿ.ಸಿ.ತಮ್ಮಣ್ಣ, ಮಾಜಿ ಸಚಿವ

ಈ ವೇಳೆ ತಾಲೂಕಿನ ಗೆಜ್ಜಲಗೆರೆ ಗ್ರಾಪಂ ಕಚೇರಿ ಬಳಿ ಸ್ಥಳೀಯ ನಿವಾಸಿಗಳು, ಸ್ಥಳೀಯರ ಅಭಿಪ್ರಾಯ ಸಂಗ್ರಹಿಸದೆ ಮತ್ತು ಚುನಾಯಿತ ಪ್ರತಿನಿಧಿಗಳ ಗಮನಕ್ಕೆ ತಾರದೆ ಏಕಾಏಕಿ ನಗರಸಭೆಗೆ ಗ್ರಾಪಂಗಳನ್ನು ಸೇರಿಸಲು ಮುಂದಾಗಿದ್ದು, ಇದರಿಂದಾಗಿ ಸ್ಥಳೀಯ ನಿವಾಸಿಗಳು ಹಲವು ಸಮಸ್ಯೆಗಳನ್ನು ಎದುರಿಸುವಂತಾಗಲಿದ್ದು ಮತ್ತು ಮೂಲ ಸೌಲಭ್ಯ ವಂಚಿತವಾಗಬೇಕಾದ ಸ್ಥಿತಿ ನಿರ್ಮಾಣವಾಗಲಿದೆ ಎಂದು ಪ್ರತಿಭಟನಾಕಾರರು ಅಶ್ವತ್ಥ್ ನಾರಾಯಣ್ ಅವರಿಗೆ ತಮ್ಮ ಅಳಲು ತೋಡಿಕೊಂಡರು.

ಆಶ್ರಯ ವಸತಿ ಯೋಜನೆ, ನರೇಗಾ, ಕೃಪಾಂಕ ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹಲವು ಯೋಜನೆಗಳು ಕೈತಪ್ಪಲಿದ್ದು ಮತ್ತು ಆಸ್ತಿ ತೆರಿಗೆ ದುಪ್ಪಟ್ಟಾಗುವ ಜೊತೆಗೆ ಪ್ರತಿಯೊಂದಕ್ಕೂ ನಗರಸಭೆಯನ್ನೇ ಆಶ್ರಯಿಸಬೇಕಾದ ಸ್ಥಿತಿ ನಿರ್ಮಾಣವಾಗಲಿದೆ. ಕೂಡಲೇ ತಮಗೆ ನ್ಯಾಯ ದೊರಕಿಸಿಕೊಡುವಂತೆ ಮನವಿ ಮಾಡಿದರು.

ಮನವಿ ಸ್ವೀಕರಿಸಿ ಮಾತನಾಡಿದ ಮಾಜಿ ಉಪಮುಖ್ಯಮಂತ್ರಿ ಅಶ್ವತ್ಥ್ ನಾರಾಯಣ್, ಜನಾಭಿಪ್ರಾಯದ ವಿರುದ್ಧ ಯಾವುದೇ ನಿರ್ಣಯಗಳನ್ನು ಶಾಸಕರು ತೆಗೆದುಕೊಳ್ಳದೇ ನ್ಯಾಯ ಸಮ್ಮತವಾಗಿ ಜನರ ಅಹವಾಲುಗಳನ್ನು ಪರಿಗಣಿಸಬೇಕು ಎಂದರು.

ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ತಮ್ಮ ಹೋರಾಟಕ್ಕೆ ಸಂಪೂರ್ಣ ಬೆಂಬಲ ಸೂಚಿಸುವುದಾಗಿ ತಿಳಿಸಿದ ಅವರು, ಈ ಸಂಬಂಧ ತಾವು ಮುಂದಿನ ದಿನಗಳಲ್ಲಿ ಸದನದಲ್ಲಿ ಚರ್ಚಿಸುವ ಜೊತೆಗೆ ಜನ ಹೋರಾಟದಲ್ಲಿ ಗೆಲುವು ಶತ ಸಿದ್ಧವಾಗಿದ್ದು, ಗ್ರಾಮೀಣ ಜನರು ಕಷ್ಟದಲ್ಲಿ ಜೀವನ ಸಾಗಿಸುತ್ತಿದ್ದು, ಈ ನಿಟ್ಟಿನಲ್ಲಿ ಶಾಸಕರು ಮತ್ತೊಮ್ಮೆ ಪರಿಶೀಲಿಸಿ ನಗರಸಭೆಯಿಂದ ಗೆಜ್ಜಲಗೆರೆ ಗ್ರಾಪಂ ಅನ್ನು ಕೈ ಬಿಡುವಂತೆ ಒತ್ತಾಯಿಸಿದರು. ಗ್ರಾಪಂಗಳು ನಗರಸಭೆಗೆ ಸೇರ್ಪಡೆಯಾದರೆ ಆಸ್ತಿ ತೆರಿಗೆ ದುಪ್ಪಟ್ಟು, ಕಸ ವಿಲೇವಾರಿಗೂ ಅಧಿಕ ಹಣ ವಿನಿಯೋಗಿಸಬೇಕಾದ ಸ್ಥಿತಿ ನಿರ್ಮಾಣವಾಗಲಿದ್ದು, ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಪರಿಶೀಲಿಸಿ ಪ್ರತಿಭಟನಾಕಾರರಿಗೆ ನ್ಯಾಯ ದೊರಕಿಸಿ ಕೊಡುವ ನಿಟ್ಟಿನಲ್ಲಿ ಕ್ರಮ ವಹಿಸಬೇಕೆಂದರು.

ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ಇಂದ್ರೇಶ್ ಕುಮಾರ್, ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಪಿ.ಉಮೇಶ್, ಮನ್‌ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಯೋಗೇಶ್, ರೈತ ನಾಯಕಿ ಸುನಂದಾ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಸಿ.ಮಹೇಂದ್ರ, ಮುಖಂಡರಾದ ಲಿಂಗಪ್ಪಾಜಿ, ಜಿ.ಎಸ್.ಶಂಕರ್, ಪ್ರಸನ್ನ, ಮೋಹನ್‌ಕುಮಾರ್, ಕೃಷ್ಣ ಹಾಗೂ ಮಹಿಳೆಯರು ಹಾಜರಿದ್ದರು.

ಲಾರಿಗೆ ಕಾರು ಡಿಕ್ಕಿ: ಇಬ್ಬರ ದುರ್ಮರಣ

ಮದ್ದೂರು: ಲಾರಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಇಬ್ಬರು ಯುವಕರು ಸಾವನ್ನಪ್ಪಿ, ಓರ್ವ ಗಾಯಗೊಂಡಿರುವ ಘಟನೆ ತಾಲೂಕಿನ ಗೆಜ್ಜಲಗೆರೆ ಬಳಿ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಗುರುವಾರ ರಾತ್ರಿ ನಡೆದಿದೆ.

ಮಂಡ್ಯ ನಗರದ ನಿವಾಸಿ ಗೋವಿಂದರಾಜು(33) ಮಿಮ್ಸ್‌ನಲ್ಲಿ ಸಾವನ್ನಪ್ಪಿದ್ದಾರೆ. ಯತ್ತಗನಹಳ್ಳಿಯ ನಿವಾಸಿ ಅಶೋಕ್(35) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕಾರಿನಲ್ಲಿದ್ದ ದಿನೇಶ್ ಎಂಬುವರು ಗಾಯಗೊಂಡಿದ್ದು, ಮಂಡ್ಯದ ಮಿಮ್ಸ್‌ಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಗುರುವಾರ ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ದಿನೇಶ್ ಇಬ್ಬರು ಗೆಳೆಯರಾದ ಗೋವಿಂದ ರಾಜು ಹಾಗೂ ಅಶೋಕ್ ಅವರನ್ನು ಕರೆದುಕೊಂಡು ಊಟ ಮಾಡಲು ಹೋಟೆಲ್‌ವೊಂದಕ್ಕೆ ತೆರಳುತ್ತಿದ್ದರು ಎಂದು ತಿಳಿದು ಬಂದಿದೆ.

ಸ್ಥಳಕ್ಕೆ ಡಿವೈಎಸ್‌ಪಿ ಯಶವಂತ್ ಕುಮಾರ್, ಸಿಪಿಐ ನವೀನ್ ಕುಮಾರ್, ಸಂಚಾರ ವಿಭಾಗದ ಎಸ್‌ಐ ರಂಗಸ್ವಾಮಿ ಭೇಟಿ ನೀಡಿದ್ದರು. ಮದ್ದೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಳೆ ಸಂಭ್ರಮದ ಕೆಸ್ತೂರು ಬಂಡಿ ಜಾತ್ರೆ

ಚಾಮರಾಜನಗರ, ಡಿ.26– ಹದಿನಾರು ಬಂಡಿಗಳು ಸೇರುವ ಕೆಸ್ತೂರು ಬಂಡಿ ಜಾತ್ರೆ ಡಿ.28ರಂದು ನಡೆಯಲಿದ್ದು, ಸುತ್ತಮುತ್ತಲ ಗ್ರಾಮಗಳಲ್ಲಿ ಸಂಭ್ರಮ, ಸಡಗರ ಮನೆ ಮಾಡಿದೆ.

ತಾಲೂಕಿನ ಸಂತೇಮರಹಳ್ಳಿ ಹೋಬಳಿಗೆ ಸೇರಿದ ಕೆಸ್ತೂರಿನ ದೊಡ್ಡಮ್ಮ ತಾಯಿ ದೇವಸ್ಥಾನದಲ್ಲಿ ಜಾತ್ರೆ ತಯಾರಿ ಪೂರ್ಣಗೊಂಡಿದ್ದು, ಕೆಸ್ತೂರು ಸೇರಿದಂತೆ ಚಾಮರಾಜನಗರ ಹಾಗೂ ನಂಜನಗೂಡು ತಾಲೂಕಿನ 23 ಗ್ರಾಮಗಳಲ್ಲೂ ಈ ಜಾತ್ರೆ ಸಂಭ್ರಮ ಕಳೆಗಟ್ಟಿದೆ.



ಬಂಡಿ ಜಾತ್ರೆಗೆ ಕೆಸ್ತೂರಿನ ದೊಡ್ಡಮ್ಮ ತಾಯಿ ದೇವಸ್ಥಾನ ಸಿದ್ಧಗೊಳಿಸುತ್ತಿರುವುದು.

ಪ್ರತಿ ವರ್ಷದ ಧನುರ್ಮಾಸದಲ್ಲಿ ಪುಷ್ಯ ಮಾಸದ 2ನೇ ಭಾನುವಾರ ಬಂಡಿ ಜಾತ್ರೆ ನಡೆಯುತ್ತದೆ. ಈ ಬಾರಿ ವರ್ಷದ 2ನೇ ಭಾನುವಾರ ಜಾತ್ರೆ ನಡೆಯುತ್ತಿದ್ದು, ವರ್ಷದ ಕೊನೆಯ ಜಾತ್ರಾ ಮಹೋತ್ಸವ ಕೆಸ್ತೂರು ಬಂಡಿ ಜಾತ್ರೆಗೆ ಸಿದ್ಧತೆ ನಡೆಯುತ್ತಿದೆ.

ಹದಿನಾರು ಬಂಡಿಗಳ ವಿಶೇಷ ಜಾತ್ರೆ: ಕೆಸ್ತೂರು, ಭೋಗಾಪುರ, ಮರಿಯಾಲ, ಕಿರಗಸೂರು, ಸಪ್ಪಯ್ಯನಪುರ, ಕೆಲ್ಲಂಬಳ್ಳಿ, ಮೂಕಹಳ್ಳಿ, ಆನಹಳ್ಳಿ, ತೊರವಳ್ಳಿ, ಪುಟ್ಟೇಗೌಡನ ಹುಂಡಿ, ಹೊನ್ನೇಗೌಡನ ಹುಂಡಿ, ಪುಟ್ಟಂಣ್ಯನಹುಂಡಿ, ದಾಸನೂರು, ಚಿಕ್ಕಹೊಮ್ಮ, ದೊಡ್ಡಹೊಮ್ಮ ಹಾಗೂ ಹೆಗ್ಗವಾಡಿ ಗ್ರಾಮಸ್ಥರು ಬಂಡಿಗಳನ್ನು ಕಟ್ಟಿ, ಊರಲ್ಲಿ ಪೂಜೆ ಸಲ್ಲಿಸಿ ನಂತರ ಮೆರವಣಿಗೆ ಮೂಲಕ ಕೆಸ್ತೂರು ದೊಡ್ಡಮ್ಮತಾಯಿ ದೇವಾಲಯಕ್ಕೆ ಬಂದು, ಪ್ರದಕ್ಷಿಣೆ ಹಾಕುವುದು ಈ ಜಾತ್ರೆಯ ವಿಶೇಷ.

23 ಗ್ರಾಮಗಳಲ್ಲಿ ಜಾತ್ರೆ ದಿನ ಹಬ್ಬದ ವಾತಾವರಣ ಮನೆ ಮಾಡುತ್ತದೆ. ದೂರದ ಊರುಗಳಲ್ಲಿ ನೆಲೆಸಿರುವ ಕುಟುಂಬಸ್ಥರು ಮನೆಗೆ ಬರುತ್ತಾರೆ. ಸ್ನೇಹಿತರು, ನೆಂಟರಿಷ್ಟರನ್ನು ಮನೆಗೆ ಆಹ್ವಾನ ಮಾಡಿ, ಹಬ್ಬದ ಊಟ ಬಡಿಸುತ್ತಾರೆ. ಹೀಗಾಗಿ ಬಂಡಿ ಜಾತ್ರೆಯನ್ನು ವ್ಯವಸ್ಥಿತವಾಗಿ ನಡೆಸಲು ಸಹಕಾರ ನೀಡಬೇಕು ಎಂದು ತಾಲೂಕು ಆಡಳಿತ ಹಾಗೂ ಪೊಲೀಸ್ ಇಲಾಖೆಗೆ ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಜಾತ್ರೆ ಅಂಗಳವನ್ನು ಸ್ವಚ್ಛತೆಗೊಳಿಸಲಾಗಿದ್ದು, ದೊಡ್ಡಮ್ಮತಾಯಿ ದೇವಾಲಯದ ಆವರಣದಲ್ಲಿ ಹೋಟೆಲ್, ಅಂಗಡಿ–ಮುಂಗಟ್ಟುಗಳು ಹಾಗೂ ಆಟಿಕೆ ಸಾಮಾನು ಮಾರಾಟಗಾರರಿಗಾಗಿ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿದೆ.

ಜ.4ರಂದು ಮರು ಜಾತ್ರೆ: ದೊಡ್ಡ ಜಾತ್ರೆಯಾದ ಒಂದು ವಾರದ ನಂತರ ಜ.4ರಂದು ಗ್ರಾಮದಲ್ಲಿ ಮರು ಜಾತ್ರೆ ನಡೆಯಲಿದ್ದು, ಅದರಲ್ಲೂ ಸಾವಿರಾರು ಮಂದಿ ಪಾಲ್ಗೊಳ್ಳುತ್ತಾರೆ.

ರಸ್ತೆಯಲ್ಲಿ ಸಂಚಾರ ಸುಗಮ: ಕೆಸ್ತೂರಿನ ಸಂಪರ್ಕ ರಸ್ತೆಗಳೆಲ್ಲವೂ ಹಾಳಾಗಿದ್ದವು. ಆದರೆ, ಕಳೆದ ವರ್ಷದಿಂದ ಪರಿಸ್ಥಿತಿ ಸಾಕಷ್ಟು ಸುಧಾರಿಸಿದೆ. ಈ ವರ್ಷವಂತೂ ಎಲ್ಲಾ ರಸ್ತೆಗಳು ಡಾಂಬರೀಕರಣಗೊಂಡಿದ್ದು, ಸುಗಮ ಸಂಚಾರಕ್ಕೆ ಸಹಕಾರಿಯಾಗಿವೆ.

ವಿಶೇಷ ಬಸ್ ಸಂಚಾರ: ಜಾತ್ರೆಗೆ ತೆರಳುವ ಮಂದಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಕೆಎಸ್‌ಆರ್‌ಟಿಸಿ ವತಿಯಿಂದ ವಿಶೇಷ ಬಸ್ ಕೆಸ್ತೂರು ಬಂಡಿಜಾತ್ರೆ ವರ್ಷದ ಕೊನೆ ಹಬ್ಬವಾಗಿ ನಮ್ಮ ಸುತ್ತಮುತ್ತಲ 23 ಹಳ್ಳಿಗಳಲ್ಲಿ ಆಚರಣೆಯಾಗಲಿದ್ದು, ಎಲ್ಲಾ ಗ್ರಾಮದಲ್ಲೂ ಸಂಭ್ರಮ ಈಗಿನಿಂದಲೇ ಮನೆ ಮಾಡಿದೆ. ಈ ಜಾತ್ರೆಗೆ ತನ್ನದೇ ವೈಶಿಷ್ಟ್ಯವಿದ್ದು, ನಾನಾ ಕಡೆಗಳಿಂದ ಸಾವಿರಾರು ಭಕ್ತರು ಪಾಲ್ಗೊಳ್ಳಲಿದ್ದಾರೆ.

ಮತ್ತಷ್ಟು ಕಗ್ಗಂಟಾದ ಹುಲಿಗಳ ಸೆರೆ ಕಾರ್ಯಾಚರಣೆ

ಕಾರ್ಯಾಚರಣೆಯಲ್ಲಿ ಲಕ್ಷ್ಮಣ, ಈಶ್ವರ ಸೇರಿದಂತೆ 5 ಸಾಕಾನೆ ಬಳಕೆ



ಹುಲಿಗಳ ಸೆರೆಗಾಗಿ ಅಧಿಕಾರಿಗಳು ಕಾರ್ಯಾಚರಣೆ ನಡೆಸುತ್ತಿರುವುದು

ಚಾಮರಾಜನಗರ: ತಾಲೂಕಿನ ನಂಜೇದೇವನಪುರ ಗ್ರಾಮದಲ್ಲಿ 5 ಹುಲಿಗಳ ಸೆರೆ ಕಾರ್ಯಾಚರಣೆ ಅರಣ್ಯ ಇಲಾಖೆಗೆ ಮತ್ತಷ್ಟು ಕಗ್ಗಂಟಾಗಿ ಪರಿಣಮಿಸುತ್ತಿದೆ.

ಹುಲಿ ಸೆರೆಗಾಗಿ ಮೊದಲು ಎರಡು ಸಾಕಾನೆ ಕರೆ ತಂದಿದ್ದರು. ಇದೀಗ ಇನ್ನೂ 3 ಸಾಕಾನೆ ಕೂಡ ಕರೆ ತಂದಿದ್ದಾರೆ. ಅಲ್ಲದೇ ಪಶುವೈದ್ಯರ ಸಂಖ್ಯೆಯನ್ನೂ ಹೆಚ್ಚಿಸಿಕೊಳ್ಳಲಾಗಿದೆ.

ಕಾರ್ಯಾಚರಣೆಯಲ್ಲಿ 5 ಸಾಕಾನೆ ಬಳಕೆ: ಹುಲಿ ಕಾರ್ಯಾಚರಣೆಗೆ 6 ಪ್ರತ್ಯೇಕ ತಂಡ, 100ಕ್ಕೂ ಹೆಚ್ಚು ಸಿಬ್ಬಂದಿ ಕಾರ್ಯಾಚರಣೆಗೆ ಮುಂದಾಗಿದ್ದಾರೆ. ಈ ಮೊದಲು ಹಾರಂಗಿ ಆನೆ ಶಿಬಿರದಿಂದ ಲಕ್ಷ್ಮಣ, ಈಶ್ವರ ಆನೆಗಳನ್ನು ಕರೆಸಲಾಗಿತ್ತು. ಶುಕ್ರವಾರ ದುಬಾರೆ ಆನೆ ಶಿಬಿರದಿಂದ ಶ್ರೀರಾಮ, ಪ್ರಶಾಂತ, ಸುಗ್ರೀವ ಸಾಕಾನೆಯನ್ನು ಕರೆಸಿಕೊಂಡು ಕಾರ್ಯಾಚರಣೆಯನ್ನು ಮತ್ತಷ್ಟು ಚುರುಕುಗೊಳಿಸಲಾಗಿದೆ.


ಮುಂದುವರಿದ ಕಾರ್ಯಾಚರಣೆ: ಕಳೆದ ನಾಲ್ಕೈದು ದಿನಗಳಿಂದ ತಾಲೂಕಿನ ನಂಜೇದೇವನಪುರ, ವೀರನಪುರ, ಉಡಿಗಾಲ, ಕೆ.ಕೆ.ಹುಂಡಿ ಸೇರಿದಂತೆ 7 ಗ್ರಾಮದಲ್ಲಿ ಹುಲಿ ಆತಂಕ ಮನೆ ಮಾಡಿದ್ದು, ಹುಲಿ ಸೆರೆಗಾಗಿ ಅರಣ್ಯ ಇಲಾಖೆ ಹುಡುಕಾಟ ನಡೆಸುತ್ತಿದೆ. ರಾತ್ರಿ ವೇಳೆ ಥರ್ಮಲ್ ಡ್ರೋನ್ ಹಾಗೂ ಬೆಳಗ್ಗೆ ಡ್ರೋನ್ ಬಳಸಲಾಗುತ್ತಿದೆ.

ನಂಜೇದೇವನಪುರ ಸಮೀಪದ ತೋಟವೊಂದರಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮರಾದಲ್ಲಿ ಕಳೆದ 3 ದಿನಗಳ ಹಿಂದೆ ಹುಲಿ ಸಂಚಾರ ಕಂಡು ಬಂದಿತ್ತು. ಹುಲಿ ಸೆರೆಗಾಗಿ ಅರಣ್ಯ ಇಲಾಖೆ ಕೂಂಬಿಂಗ್ ಕೂಡ ಮುಂದುವರೆಸಿತ್ತು. ಆದರೆ, ಇಲ್ಲಿವರೆಗೂ ಮತ್ತೆ ಹುಲಿಗಳ ಚಲನವಲನ ಪತ್ತೆಯಾಗಿಲ್ಲ. ಹೀಗಾಗಿ, ಅರಣ್ಯ ಇಲಾಖೆ ಸುತ್ತಮುತ್ತಲ ಗ್ರಾಮಗಳ ಜನರಲ್ಲಿ ಜಾಗೃತಿ ಮೂಡಿಸಿದ್ದು, ಹುಲಿಗಳ ಸೆರೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ.

6 ತಂಡಗಳ ಜೊತೆಗೆ ಡ್ರೋನ್ ಕ್ಯಾಮೆರಾ ಬಳಕೆ: ಹುಲಿ ಸೆರೆ ಹಿಡಿಯಲು 100 ಸಿಬ್ಬಂದಿ ಒಳಗೊಂಡ 6 ಪ್ರತ್ಯೇಕ ತಂಡಗಳನ್ನು ರಚಿಸಲಾಗಿದೆ. ಅಲ್ಲದೇ ದುಬಾರೆ ಆನೆ ಶಿಬಿರದಿಂದ ಮತ್ತೇ ಮೂರು ಸಾಕಾನೆಗಳನ್ನು ಕರೆಸಿಕೊಂಡಿದ್ದಾರೆ. ಇದೀಗಾ ಒಟ್ಟು 5 ಸಾಕಾನೆಗಳ ಮೂಲಕ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಅಲ್ಲದೇ ಪ್ರತಿಯೊಂದು ತಂಡಕ್ಕೂ ಒಂದು ಡ್ರೋನ್ ಕ್ಯಾಮರಾ ಕೊಡಲಾಗಿದೆ. ಅಲ್ಲದೇ ರಾತ್ರಿ ವೇಳೆಯೂ ಕೂಡ ಮಾನಿಟರಿಂಗ್ ಮಾಡಲೂ ಥರ್ಮಲ್ ಡ್ರೋನ್ ಬಳಸಲಾಗುತ್ತಿದೆ. ಏನಾದರೂ ಮಾಡಿ ಹುಲಿ ಸೆರೆ ಹಿಡಿಯಲು ಅರಣ್ಯಾಧಿಕಾರಿಗಳು ಕಾರ್ಯತಂತ್ರ ಹೆಣೆಯುತ್ತಿದ್ದಾರೆ.

ಮಾದಾಪುರ ಬಳಿ ಚಿರತೆ ಪ್ರತ್ಯಕ್ಷ: ಆತಂಕ




ಅಧಿಕಾರಿಗಳು ಪರಿಶೀಲಿಸುತ್ತಿರುವುದು

ಚಾಮರಾಜನಗರ: ತಾಲೂಕಿನ ಮಾದಾಪುರ ಬಳಿಯ ಎಸ್‌ಬಿಐ ಗ್ರಾಮೀಣ ಸ್ವ–ಉದ್ಯೋಗ ತರಬೇತಿ ಸಂಸ್ಥೆ ಬಳಿ ಚಿರತೆ ಕಾಣಿಸಿಕೊಂಡು ಆತಂಕ ಮೂಡಿಸಿದೆ.

ಸಂಸ್ಥೆ ಬಳಿಯ ಟೀ ಅಂಗಡಿ ಹಿಂಭಾಗ ಚಿರತೆ ತೆರಳುತ್ತಿರುವುದನ್ನು ಕೆಲವರು ನೋಡಿದ್ದು ಹುಲಿ ಎಂದು ಭಾವಿಸಿ ಕೂಡಲೇ ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಬಿಆರ್‌ಟಿ ಹುಲಿ ಯೋಜನೆ ನಿರ್ದೇಶಕ ಶ್ರೀಪತಿ ಸೇರಿದಂತೆ ಇತರೆ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು.

ಈ ವೇಳೆ ಸಂಸ್ಥೆ ಮುಂಭಾಗ ಚಿರತೆ ಹೆಜ್ಜೆ ಗುರುತು ಪತ್ತೆಯಾಗಿದೆ. ಅಲ್ಲದೇ ಸಂಸ್ಥೆ ಕಟ್ಟಡದ ಹೊರಗೆ ಅಳವಡಿಸಿರುವ ಸಿಸಿ ಕ್ಯಾಮರಾ ಪರಿಶೀಲಿಸಿದಾಗ ಚಿರತೆ ತೆರಳಿರುವುದು ಕಂಡು ಬಂದಿಲ್ಲ. ಆದರೂ ಸುತ್ತಮುತ್ತಲಿನವರಿಗೆ ಎಚ್ಚರಿಕೆಯಿಂದ ಇರುವಂತೆ ಅರಣ್ಯ ಇಲಾಖೆ ಅಧಿಕಾರಿಗಳು ಸೂಚಿಸಿದ್ದಾರೆ.

ಬಿಆರ್‌ಟಿ ಅರಣ್ಯದಲ್ಲಿ ಗಂಡಾನೆ ಕಳೇಬರ ಪತ್ತೆ



ಗಂಡಾನೆ ಕಳೇಬರ

ಚಾಮರಾಜನಗರ: ಗಂಡಾನೆ ಕಳೇಬರವೊಂದು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಯಳಂದೂರು ವಲಯದ ಅರಣ್ಯದಲ್ಲಿ ಪತ್ತೆಯಾಗಿದೆ.

ಪುರಾಣಿ ಶಾಖೆಯ ಎರೆಕಟ್ಟೆ ಹಳ್ಳದ ಬಳಿ ಸುಮಾರು 30ರಿಂದ 35 ವರ್ಷದ ಗಂಡಾನೆ ಕಳೇಬರ ಪತ್ತೆಯಾಗಿದ್ದು, ಅರಣ್ಯ ಸಿಬ್ಬಂದಿ ಗಸ್ತು ತಿರುಗುವಾಗ ಹರಡಿದ ದುರ್ವಾಸನೆ ಆಧರಿಸಿ ಶೋಧ ನಡೆಸಿದಾಗ ಆನೆ ಮೃತಪಟ್ಟಿರುವುದು ಬೆಳಕಿಗೆ ಬಂದಿದೆ. ಸ್ಥಳದಲ್ಲಿ ಕಂಡು ಬಂದ ಹೆಜ್ಜೆ ಗುರುತು ಮತ್ತು ಸಂಘರ್ಷದ ಕುರುಹುಗಳನ್ನು ಅಧಿಕಾರಿಗಳು ಪರಿಶೀಲಿಸಿದ್ದು, ಇದು 2 ಆನೆಗಳ ನಡುವಿನ ಆಂತರಿಕ ಕಾಳಗ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ ಎಂದು ಮಾಹಿತಿ ನೀಡಿದ್ದಾರೆ. ಆನೆ ಸುಮಾರು 7 ರಿಂದ 9 ದಿನಗಳ ಹಿಂದೆ ಸಾವನ್ನಪ್ಪಿರಬಹುದು ಎಂದು ಅಂದಾಜಿಸಲಾಗಿದ್ದು, ಆನೆಯ ಎರಡು ದಂತಗಳು ಸುರಕ್ಷಿತವಾಗಿದ್ದು, ಯಾವುದೇ ಮಾನವ ಹಸ್ತಕ್ಷೇಪ ಅಥವಾ ಅಕ್ರಮ ಚಟುವಟಿಕೆ ಲಕ್ಷಣ ಕಂಡುಬಂದಿಲ್ಲ.

ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಸಾವಿಗೆ ನಿಖರ ಕಾರಣ ತಿಳಿಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.